ಬುಧವಾರ, ಏಪ್ರಿಲ್ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 95 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮುಂದಿನ ಕೆಲವು ವರ್ಷಗಳವರೆಗೆ ಸೂಪರ್ ಆ್ಯಪ್‌ಗಳದ್ದೇ ಜಮಾನ! ಜನಪ್ರಿಯ ಆ್ಯಪ್‌ಗಳೂ ಒಂದೊಂದೇ ಸೇವೆಯನ್ನು ಹೆಚ್ಚಿಸಿಕೊಳ್ಳುತ್ತಾ ಸೂಪರ್ ಆ್ಯಪ್‌ಗಳಾಗಲಿವೆ



ಜೀತದ ದುಡಿತ: 55 ಕಾರ್ಮಿಕರ ರಕ್ಷಣೆ 4
ಆಳ-ಅಗಲ
ಜನರ ಖಾಸಗಿತನಕ್ಕೆ ಧಕ್ಕೆ
ಬಿಜೆಪಿ 'ಸಾರಥ್ಯ'ಕ್ಕೆ ಶೋಭಾ – ರವಿ ಪೈಪೋಟಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,176 ▼	17,957 ▼	₹53,100 (ಬೆಂಗಳೂರು) ▼	₹68,500 (ಬೆಂಗಳೂರು) ▼	75.29 ▲

ಬಾಬು ಜಗಜೀವನ್ ರಾಂ ಜನ್ಮದಿನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಘೋಷಣೆ

ಪರಿಶಿಷ್ಟರಿಗೆ ನೆರವಿನ ಹಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಬು ಜಗಜೀವನ್ ರಾಂ ಅವರ 115ನೇ ಜನ್ಮದಿನಾಚರಣೆಯ ದಿನವೇ ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಲ್ಕು ಪ್ರಮುಖ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹತ್ವದ ಘೋಷಣೆಗಳನ್ನು ಮಾಡಿದ ಅವರು, ಅಲಕ್ಷಿತರಾಗಿಯೇ ಉಳಿದಿರುವ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರ ಸಾಮಾಜಿಕ ಮತ್ತು ಆರ್ಥಿಕ ಚೇತರಿಕೆಗೆ ಈ ಯೋಜನೆಗಳು ನೆರವಾಗಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಕಟಿಸಿದ ತೀರ್ಮಾನಗಳನ್ನು ಆದಷ್ಟು ಬೇಗ ಜಾರಿಗೊಳಿಸುವುದಾಗಿಯೂ ಅವರು ಭರವಸೆ ನೀಡಿದರು.

ಘೋಷಣೆಗಳೇನು?

- ಪರಿಶಿಷ್ಟ ಜಾತಿ/ ವರ್ಗದ ಸಮುದಾಯವರು ಭೂಮಿ ಖರೀದಿಸಲು ನೆರವು ನೀಡುವ ಮೂಲಕ ಅವರನ್ನು ರೈತರನ್ನಾಗಿಸುವ ಭೂಒಡೆತನ ಯೋಜನೆಯಡಿ ನೀಡುತ್ತಿರುವ ಸಹಾಯಧನದ ಮೊತ್ತವನ್ನು ₹ 15 ಲಕ್ಷದಿಂದ ₹ 20 ಲಕ್ಷಕ್ಕೆ ಹೆಚ್ಚಳ.
- ಈ ಸಮುದಾಯದವರಿಗೆ ಮನೆಗಳ ನಿರ್ಮಾಣಕ್ಕಾಗಿ ನೀಡಲಾಗುತ್ತಿದ್ದ ₹1.75 ಲಕ್ಷ ಸಹಾಯ ಧನವನ್ನು ₹2 ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನ.
- ಗ್ರಾಮೀಣ ಪ್ರದೇಶದಲ್ಲಿ ಕುಟೀರ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 75 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲು ತೀರ್ಮಾನ. ಒಂದು ವಾರದಲ್ಲಿ ಈ ಸಂಬಂಧ ಆದೇಶ.
- ಪ್ರತಿ ತಾಲ್ಲೂಕಿನಲ್ಲಿ ಬಾಬು ಜಗಜೀವನ್ ರಾಂ ಸ್ವಯಂ ಸೇವಾ ಉದ್ಯೋಗ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದ್ದು, ಒಂದು ತಿಂಗಳಲ್ಲಿ ಈ ಯೋಜನೆಯ ರೂಪುರೇಷೆ ಸಿದ್ಧಪಡಿಸಿ ಜಾರಿ ಮಾಡಲು ತೀರ್ಮಾನ.

ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳಲ್ಲಿ ಮುಖ್ಯಮಂತ್ರಿ ಮಾರ್ಗದರ್ಶಿನಿ ವೇದಿಕೆಯ ಮೂಲಕ 8 ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮವನ್ನು ಈ ವರ್ಷವೇ ರೂಪಿಸಲಾಗುವುದು ಎಂದರು.

ನವೋದ್ಯಮ ಯೋಜನೆಯಡಿ ಈ ಸಮುದಾಯದವರಿಗೆ ₹ 50 ಲಕ್ಷ ಸಹಾಯಧನ ನೀಡುವ ಯೋಜನೆಯನ್ನು ಈಗಾಗಲೇ ಆಯವ್ಯಯದಲ್ಲಿ ಪ್ರಕಟಿಸಲಾಗಿದೆ ಎಂದೂ ಹೇಳಿದರು.

ದೇಶದ ಸಂವಿಧಾನ ಅನುಷ್ಠಾನದಲ್ಲಿ ಬಾಬು ಜಗಜೀವನ್ ರಾಂ ಅವರ ಪಾತ್ರ ಮಹತ್ವದ್ದು. ಪ್ರಾಮಾಣಿಕತೆ, ನಿಷ್ಠೆ, ಬದ್ಧತೆಯ ಮೂರ್ತರೂಪವಾಗಿದ್ದರು. ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದಾಗ ಮಾತ್ರ ದೇಶ ಸ್ವಾವಲಂಬನೆ ಆಗಲು ಸಾಧ್ಯ ಎಂದು ಅವರು ನಂಬಿದ್ದರು. ಕೃಷಿ ಸಚಿವರಾಗಿ ಹಸಿರು ಕ್ರಾಂತಿ ಮಾಡುವ ಮೂಲಕ ಕೆಲವೇ ವರ್ಷಗಳಲ್ಲಿ ದೇಶದಲ್ಲಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ತಂದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಪ್ರಶಸ್ತಿ ಪ್ರದಾನ: ಪರಿಶಿಷ್ಟ ಜಾತಿ ಮತ್ತು ವರ್ಗದವರ ಏಳಿಗೆಗಾಗಿ ವಿವಿಧ ಕ್ಷೇತ್ರಗಳಲ್ಲಿ ಶ್ರಮಿಸಿದ ವೀರಪ್ಪ ಬಿ.ಸವಣೂರು, ಎನ್.ಡಿ.ವೆಂಕಮ್ಮ, ಆರ್.ಎಂ.ಕಾಂತರಾಜು, ದಾನಪ್ಪ ಸಿ.ನಿಲೋಗಲ್ ಮತ್ತು ಮುನಿಸ್ವಾಮಿ ಅವರಿಗೆ ಜಗಜೀವನ್ ರಾಂ ಪ್ರಶಸ್ತಿ, ತಲಾ ₹5 ಲಕ್ಷ ನಗದು, 20 ಗ್ರಾಂನ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಶಿಕ್ಷಣ, ಉದ್ಯೋಗ, ಸಾಮಾಜಿಕ ಗೌರವ, ಅವಕಾಶಗಳು ದೊರೆತಾಗ ಮಾತ್ರ ಈ ಸಮುದಾಯ ಮುಖ್ಯವಾಹಿನಿಗೆ ಬರಲು ಸಾಧ್ಯ. ಇದರಿಂದ ಭಾರತದ ಸಮಗ್ರ ಅಭಿವೃದ್ಧಿ ಸಾಧ್ಯ. ಗ್ರಾಮೀಣ ಪ್ರದೇಶದಲ್ಲಿ ಭೂ ಒಡೆತನ ಹೊಂದಿದವರಿಗೆ ಸಾಮಾಜಿಕ ಗೌರವ ದೊರೆಯುತ್ತದೆ. ಸಮುದಾಯದವರ ಭೂ ಒಡೆತನಕ್ಕೆ ಸಂಬಂಧಿಸಿದಂತೆ ಭೂ ಸುಧಾರಣಾ ಕಾಯ್ದೆ ಜಾರಿ ಮಾಡಲಾಗಿದೆ. ಯೋಜನೆಯ ಅನುಷ್ಠಾನದಲ್ಲಿರುವ ತೊಡಕುಗಳನ್ನು ನಿವಾರಿಸಲಾಗುವುದು ಎಂದು ಬೊಮ್ಮಾಯಿ ಭರವಸೆ ನೀಡಿದರು.

ಚಿತ್ರ 8

ಚುನಾವಣಾ ಬಾಂಡ್: ಪಿಐಎಲ್ ವಿಚಾರಣೆಗೆ ಒಪ್ಪಿಗೆ 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಏಪ್ರಿಲ್ 1ರಿಂದ ಜಾರಿಗೆ ಬಂದಿರುವ ಹೊಸ ವ್ಯವಸ್ಥೆ

ವೆಬ್ ಇಂಡೆಂಟ್ ಗೊಂದಲ: ಮದ್ಯ ಖಾಲಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಬ್-ಇಂಡೆಂಟ್ ಮೂಲಕ ಮಾತ್ರ ಮದ್ಯ ಖರೀದಿ ಮಾಡಬೇಕು ಎಂಬ ಹೊಸ ನಿಯಮವನ್ನು ಕರ್ನಾಟಕ ಪಾನೀಯ ನಿಗಮ (ಕೆಎಸ್‌ಬಿಸಿಎಲ್) ಜಾರಿಗೆ ತಂದಿದ್ದು, ಇದು ಮದ್ಯದಂಗಡಿ ಸನ್ನದುದಾರರಿಗೆ ತಲೆನೋವಾಗಿ ಪರಿಣಮಿಸಿದೆ. ಹೊಸ ವ್ಯವಸ್ಥೆಯಲ್ಲಿ ಮದ್ಯ ಖರೀದಿ ಮಾಡಲು ಸಾಧ್ಯವಾಗದೆ ಮದ್ಯದ ಅಂಗಡಿಗಳಲ್ಲಿ ದಾಸ್ತಾನು ಖಾಲಿಯಾಗಿವೆ.

ಎಲ್ಲ ಜಿಲ್ಲೆಗಳಲ್ಲೂ ಇರುವ ಪಾನೀಯ ನಿಗಮದ ಡಿಪೋಗಳಿಗೆ ಸನ್ನದುದಾರರು ಮದ್ಯದ ಬೇಡಿಕೆ ಪಟ್ಟಿಯೊಂದಿಗೆ ಹೋಗಿ ಅಲ್ಲೇ ಹಣ ಪಾವತಿಸಿ ಖರೀದಿ ಮಾಡುವ ವ್ಯವಸ್ಥೆ ಹಲವು ವರ್ಷಗಳಿಂದ ಜಾರಿಯಲ್ಲಿತ್ತು. ಕುಳಿತಲ್ಲೇ ಮದ್ಯ ಖರೀದಿಸಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ವೆಬ್-ಇಂಡೆಂಟಿಂಗ್ ವ್ಯವಸ್ಥೆಯನ್ನು ಕೆಎಸ್‌ಬಿಸಿಎಲ್ ಜಾರಿಗೆ ತಂದಿದೆ.

ಡಿಪೋಗಳ ಎದುರು ಇಂದು ಪ್ರತಿಭಟನೆ

'ಹೊಸ ವ್ಯವಸ್ಥೆಗೆ ನಮ್ಮ ವಿರೋಧ ಇಲ್ಲ. ಅದಕ್ಕೆ ಹೊಂದಿಕೊಳ್ಳುವ ತನಕ ಒಂದು ತಿಂಗಳ ಮಟ್ಟಿಗೆ ಹಳೇ ವ್ಯವಸ್ಥೆಯನ್ನೂ ಉಳಿಸಿಕೊಳ್ಳುವಂತೆ ಅಬಕಾರಿ ಇಲಾಖೆಗೆ ಮನವಿ ಮಾಡಿದ್ದೇವೆ' ಎಂದು ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಬಿ.ಗೋವಿಂದರಾಜ ಹೆಗ್ಡೆ ಹೇಳಿದರು.

'ಅಬಕಾರಿ ಸಚಿವರು, ಅಬಕಾರಿ ಆಯುಕ್ತರು ಸೇರಿ ಎಲ್ಲರಿಗೂ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಆದ್ದರಿಂದ ರಾಜ್ಯದ ಎಲ್ಲ ಕೆಎಸ್‌ಬಿಸಿಎಲ್ ಡಿಪೋಗಳ ಎದುರು ಬುಧವಾರ(ಏ.6) ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ. ಹಳೇ ಪದ್ಧತಿಯನ್ನೂ ಉಳಿಸಿ ಮದ್ಯ ವಹಿವಾಟು ಸರಾಗವಾಗಿ ನಡೆಯಲು ಅನುಕೂಲ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

8ನೇ ಪುಟ ನೋಡಿ

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 2.75 ರಷ್ಟು ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ಜನವರಿ 1ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯನ್ನು ಶೇ 2.75 ರಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದಾಗಿ ನೌಕರರ ಮೂಲ ವೇತನದ ಶೇ 24.50ರಷ್ಟು ಇದ್ದ ತುಟ್ಟಿಭತ್ಯೆ ಶೇ 27.25ಕ್ಕೆ ಏರಿಕೆಯಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಇದಕ್ಕೆ ₹1,447 ಕೋಟಿ ವಾರ್ಷಿಕ ವೆಚ್ಚವಾಗಲಿದೆ. 'ತುಟ್ಟಿ ಭತ್ಯೆ ಏರಿಕೆ ಮಾಡುವಂತೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿತ್ತು. ನಮ್ಮ ಮನವಿಗೆ ಸ್ಪಂದಿಸಿದ್ದಾರೆ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ತಿಳಿಸಿದ್ದಾರೆ.



ತಬೂಬಿಯಾ ಸೊಬಗು

ವರ್ಷವಿಡೀ ವಾಹನ ಸವಾರರಿಗೆ ನೆರಳು ನೀಡುವ ರಸ್ತೆ ಬದಿಯ ಮರಗಳು ಈಗ ಚಿಗುರೊಡೆದು ಹೂಬಿಟ್ಟಿವೆ. ನಾಗರಬಾವಿಯಲ್ಲಿನ ತಬೂಬಿಯಾ ರೋಸಿಯಾ ಮರಗಳು ಬಿಟ್ಟಿರುವ ಹೂವುಗಳು ರಸ್ತೆಯ ಸೊಬಗನ್ನೇ ಹೆಚ್ಚಿಸಿವೆ
–ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಮುಷ್ಕರದಲ್ಲಿ ಭಾಗವಹಿಸದಿದ್ದರೂ ವಜಾ: ಬಿಎಂಟಿಸಿ ನೌಕರರ ಅಳಲು

‘ವರ್ಷವಾದರೂ ಕೆಲಸಕ್ಕೆ ಕರೆದಿಲ್ಲ: ಬದುಕು ನಡೆಸುವುದು ಹೇಗೆ’

• ಜಿ.ಶಿವಕುಮಾರ

ಬೆಂಗಳೂರು: ‘ನಾವು ಯಾವ ಮುಷ್ಕರದಲ್ಲೂ ಪಾಲ್ಗೊಂಡಿಲ್ಲ. ನಮ್ಮಿಂದ ಯಾವ ತಪ್ಪೂ ಆಗಿಲ್ಲ. ಹೀಗಿದ್ದರೂ ಕೆಲಸದಿಂದ ವಜಾ ಮಾಡಿದ್ದಾರೆ. ವರ್ಷ ಸಮೀಪಿಸುತ್ತಾ ಬಂದರೂ ನ್ಯಾಯ ಸಿಕ್ಕಿಲ್ಲ. ದುಡಿಮೆ ಇಲ್ಲದೆ ದಿಕ್ಕೇ ತೋಚದಾಗಿದೆ’...

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ (ಬಿಎಂಟಿಸಿ) ವಜಾಗೊಂಡಿರುವ ನಿರ್ವಾಹಕರು ಹಾಗೂ ಚಾಲಕರ ಅಳಲು ಇದು.

ಆರನೇ ವೇತನ ಆಯೋಗದ ಶಿಫಾರಸುಗಳನ್ನು ಸಾರಿಗೆ ನೌಕರರಿಗೂ ಅನ್ವಯಿಸಬೇಕು ಎಂದು ಒತ್ತಾಯಿಸಿ 2021ರ ಏಪ್ರಿಲ್‌ನಲ್ಲಿ ನೌಕರರು ಮುಷ್ಕರ ನಡೆಸಿದ್ದರು. ಇದಕ್ಕೆ ಜಗ್ಗದ ಸರ್ಕಾರ, ಮುಷ್ಕರನಿರತ ನೌಕರರ ವಿರುದ್ಧ ವಜಾ ಮತ್ತು ಅಮಾನತು ಅಸ್ತ್ರ ಪ್ರಯೋಗಿಸಿತ್ತು. ಹೀಗಾಗಿ ಕಾಯಂ ನೌಕರರ ಕೆಲಸಕ್ಕೂ ಕುತ್ತು ಎದುರಾಗಿತ್ತು.

‘ಸುಮಾರು 1,350 ಮಂದಿಯನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು. ಈ ಪೈಕಿ ತರಬೇತಿ ನಿರತ 300 ನೌಕರರನ್ನು ಹಲವು ಷರತ್ತುಗಳ ಮೇಲೆ ಮರು ನೇಮಕ ಮಾಡಲಾಗಿದೆ. ಕಾಯಂ ನೌಕರರ ಪೈಕಿ ಹಲವರಿಂದ ಮುಚ್ಚಳಿಕೆ ಬರೆಸಿಕೊಂಡು ಕರ್ತವ್ಯಕ್ಕೆ ಮರಳಲು ಅವಕಾಶ ನೀಡಲಾಗಿದೆ. ಆದರೆ 22 ವರ್ಷ ನಿಷ್ಠೆಯಿಂದ ಸಂಸ್ಥೆಗಾಗಿ ದುಡಿದ ನನ್ನಂತಹ ಹಲವರನ್ನು ವಜಾಗೊಳಿಸಲಾಗಿದೆ’ ಎಂದು ಯಶವಂತಪುರದ ಘಟಕ 8ರಲ್ಲಿ ನಿರ್ವಾಹಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಬಿ.ಮಾಲತಿ ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

> ಶಿಸ್ತುಪಾಲನಾ ಅಧಿಕಾರಿಗಳು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಎಲ್ಲಾ ಆಯಾಮಗಳಿಂದ ವಿಚಾರಣೆ ನಡೆಸಿ ಕ್ರಮ ಕೈಗೊಂಡಿರುತ್ತಾರೆ. ಈ ಬಗ್ಗೆ ಹೆಚ್ಚಿನ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ
> **ಅನ್ಬುಕುಮಾರ್**
> ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ

‘ಮುಷ್ಕರದ ಅವಧಿಯಲ್ಲಿ ಶೇ 90ರಷ್ಟು ಕಾರ್ಮಿಕರು ಕರ್ತವ್ಯಕ್ಕೆ ಗೈರಾಗಿದ್ದರು. ಈ ಪೈಕಿ ಕೆಲವರಿಗೆ ಕೆಲಸ ಮಾಡಲು ಅನುವು ಮಾಡಿಕೊಟ್ಟು ಉಳಿದವರಿಗೆ ಸಂಬಳ ಸಿಗದಂತೆ ಮಾಡಿ ಮನೆಯಲ್ಲಿ ಕೂರಿಸಿರುವುದು ಯಾವ ನ್ಯಾಯ. 11 ತಿಂಗಳಿಂದ ವೇತನ ಕೊಟ್ಟಿಲ್ಲ. ಹೀಗಾಗಿ ಜೀವನ ನಡೆಸುವುದೇ ಕಷ್ಟವಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗಿದೆ’ ಎಂದು ಅಳಲು ತೋಡಿಕೊಂಡರು.

‘ಸಂಸ್ಥೆಯಲ್ಲಿ ನಿರ್ವಾಹಕರ ಕೊರತೆ ಇದೆ. ಮರು ನೇಮಕಗೊಂಡವರು ಹೆಚ್ಚುವರಿ ಅವಧಿ ಕೆಲಸ ಮಾಡುವ ಅನಿವಾರ್ಯತೆಗೆ ಸಿಲುಕಿದ್ದಾರೆ. ಕಾರ್ಯಭಾರ ಹೆಚ್ಚಾಗಿ ಖಿನ್ನತೆಗೆ ಒಳಗಾಗುತ್ತಿದ್ದಾರೆ. ಕೋವಿಡ್ ಲಸಿಕೆ ತೆಗೆದುಕೊಂಡಿದ್ದರಿಂದಾಗಿ ಸೊಂಟ ಹಾಗೂ ಮಂಡಿಯ ನೋವು ಬಾಧಿಸಿತ್ತು. ಹೀಗಾಗಿ 2021ರ ಏಪ್ರಿಲ್ 3 ಹಾಗೂ 5ರಂದು ರಜೆ ಹಾಕಿದ್ದೆ. ರಜೆ ಮಂಜೂರು ಮಾಡುವಂತೆ ಡಿಪೊ ವ್ಯವಸ್ಥಾಪಕರಿಗೆ ವಾಟ್ಸಾಪ್ ಸಂದೇಶವನ್ನೂ ಕಳುಹಿಸಿದ್ದೆ. ಅದಕ್ಕೆ ಅವರು ಸ್ಪಂದಿಸಿರಲಿಲ್ಲ. ಆರೋಗ್ಯ ಸರಿ ಇಲ್ಲದಿದ್ದರೆ ಕೆಲಸ ಮಾಡುವುದಾದರೂ ಹೇಗೆ’ ಎಂದು ಪ್ರಶ್ನಿಸಿದರು.

‘ಅಧಿಕಾರಿಗಳ ದಬ್ಬಾಳಿಕೆ ಪ್ರಶ್ನಿಸಿದ್ದೇ ತಪ್ಪಾಯಿತು’

‘ಡಿಪೊ ಅಧಿಕಾರಿಗಳು ನೌಕರರ ಮೇಲೆ ವಿವಿಧ ಬಗೆಯಲ್ಲಿ ದೌರ್ಜನ್ಯ ನಡೆಸುತ್ತಾರೆ. ಅದನ್ನು ನಾವು ಪ್ರಶ್ನಿಸುತ್ತಿದ್ದೆವು. ಹೀಗಾಗಿ ಉದ್ದೇಶಪೂರ್ವಕವಾಗಿಯೇ ಕೆಲಸದಿಂದ ವಜಾ ಮಾಡಿದ್ದಾರೆ’ ಎಂದು ಚಾಲಕ ಶಿವಾನಂದ ದೂರಿದರು.

‘ಡಿಪೊದಲ್ಲಿ ಭ್ರಷ್ಟಾಚಾರ ಮೇರೆ ಮೀರಿದೆ. ಅದನ್ನು ನಾವು ಬಯಲಿಗೆಳೆಯುತ್ತಿದ್ದೆವು. ಹೀಗಾಗಿ ಅಧಿಕಾರಿಗಳು ನಮ್ಮ ಮೇಲೆ ದ್ವೇಷ ಸಾಧಿಸುತ್ತಿದ್ದರು. ಮುಷ್ಕರದ ನೆಪ ಮುಂದಿಟ್ಟುಕೊಂಡು ಅವರು ಸೇಡು ತೀರಿಸಿಕೊಂಡಿದ್ದಾರೆ’ ಎಂದರು.

‘ಮುಷ್ಕರದ ದಿನ ಡಿಪೊಗೆ ಹೋಗಿದ್ದೆ. ಉದ್ದೇಶಪೂರ್ವಕವಾಗಿಯೇ ನನಗೆ ಕೆಲಸ ಹಂಚಿಕೆ ಮಾಡಲಿಲ್ಲ. ಮುಷ್ಕರ ನಡೆಯುತ್ತಿರುವಾಗ ನೀವೇಕೆ ಕೆಲಸಕ್ಕೆ ಬಂದಿದ್ದೀರಿ ಎಂದು ಹೇಳಿ ಅಧಿಕಾರಿಗಳೇ ನಮ್ಮನ್ನು ಮನೆಗೆ ಕಳುಹಿಸಿದ್ದರು’ ಎಂದು ಆರೋಪಿಸಿದರು.

ಯುವಕನ ಅಪಹರಿಸಿ ಸುಲಿಗೆ, ಲೈಂಗಿಕ ಕಿರುಕುಳ

‘ಗರುಡ 900’ ರೂವಾರಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕರೊಬ್ಬರನ್ನು ಅಪಹರಿಸಿ ಸುಲಿಗೆ ಮಾಡಿ ಲೈಂಗಿಕ ಕಿರುಕುಳ ನೀಡಿದ್ದ ಇಬ್ಬರು ಆರೋಪಿಗಳನ್ನು ಕಾಲಿಗೆ ಗುಂಡು ಹಾರಿಸಿ ಕೊತ್ತನೂರು ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಉಡುಪಿ ಜಿಲ್ಲೆಯ ಕಾಪುವಿನ ಮಹಮ್ಮದ್ ಆಶೀಕ್ (22) ಹಾಗೂ ಕುಂದಾಪುರದ ನಾಗೂರಿನ ಇಸಾಕ್ (21) ಬಂಧಿತರು. ಇವರಿಬ್ಬರು ‘ಗರುಡ 900’ ಗ್ಯಾಂಗ್‌ನ ರೂವಾರಿಗಳು. ಗುಂಡೇಟಿನಿಂದ ಗಾಯಗೊಂಡಿರುವ ಇವರಿಬ್ಬರನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಹೇಳಿದರು.

‘21 ವರ್ಷದ ಯುವಕರೊಬ್ಬರು ಕೊತ್ತನೂರು ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 26ರಂದು ಕಾರಿನಲ್ಲಿ ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಚಾಕು ತೋರಿಸಿ ಕೊಲೆ ಬೆದರಿಕೆ ಹಾಕಿ ಕಾರು ಸಮೇತ ಅಪಹರಿಸಿದ್ದರು. ಚಿನ್ನದ ಉಂಗುರ ಹಾಗೂ ಮೊಬೈಲ್ ಕಸಿದುಕೊಂಡಿದ್ದರು. ಯುವಕನ ಬಳಿಯಿದ್ದ ಎಟಿಎಂ ಕಾರ್ಡ್‌ನಿಂದ ಹಣ ಡ್ರಾ ಮಾಡಿಸಿಕೊಂಡಿದ್ದರು. ನಗರದ ಹಲವೆಡೆ ಸುತ್ತಾಡಿಸಿ, ಲೈಂಗಿಕವಾಗಿಯೂ ಬಳಸಿಕೊಂಡು ಕಿರುಕುಳ ನೀಡಿದ್ದರು. ನಂತರ, ಯುವಕನನ್ನು ಬಿಟ್ಟು ಕಾರು ಸಮೇತ ಪರಾರಿಯಾಗಿದ್ದರು.’

‘ಅಪಹರಣ ಹಾಗೂ ಸುಲಿಗೆ ಬಗ್ಗೆ ಯುವಕ ದೂರು ನೀಡಿದ್ದರು. ಆರೋಪಿಗಳ ಮಾಹಿತಿ ಕಲೆಹಾಕಿದ್ದ ಪೊಲೀಸರ ವಿಶೇಷ ತಂಡ, ಮಂಗಳೂರಿಗೆ ಹೋಗಿತ್ತು. ಆದರೆ, ಅಲ್ಲಿ ಆರೋಪಿಗಳು ಸಿಕ್ಕಿರಲಿಲ್ಲ’ ಎಂದೂ ತಿಳಿಸಿದರು.

ಪಿಎಸ್‌ಐ ಮೇಲೆ ಹಲ್ಲೆ: ‘ಆರೋಪಿಗಳು ಮಂಗಳವಾರ ಜಕ್ಕೂರು ಬಳಿ ಕಾರಿನಲ್ಲಿ ಹೊರಟಿದ್ದ ಮಾಹಿತಿ ಲಭ್ಯವಾಗಿತ್ತು. ಇನ್‌ಸ್ಪೆಕ್ಟರ್ ಚನ್ನೇಶ್ ನೇತೃತ್ವದ ತಂಡ ಸ್ಥಳಕ್ಕೆ ಹೋಗಿ, ಕಾರು ಬೆನ್ನಟ್ಟಿತ್ತು’ ಎಂದು ಅನೂಪ್ ಶೆಟ್ಟಿ ಹೇಳಿದರು.

‘ಪೊಲೀಸರು ಕಾರು ಅಡ್ಡಗಟ್ಟುತ್ತಿದ್ದಂತೆ ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಹಿಡಿಯಲು ಹೋದ ಪಿಎಸ್‌ಐ ಉಮೇಶ್ ಮೇಲೆ ಡ್ರ್ಯಾಗರ್‌ನಿಂದ ಹಲ್ಲೆ ಮಾಡಿದ್ದರು. ಅವಾಗಲೇ ಇನ್‌ಸ್ಪೆಕ್ಟರ್ ಚನ್ನೇಶ್, ಆರೋಪಿಗಳ ಕಾಲಿಗೆ ಗುಂಡು ಹಾರಿಸಿದ್ದರು. ಗಾಯಗೊಂಡು ಕುಸಿದು ಬಿದ್ದಿದ್ದ ಆರೋಪಿಗಳನ್ನು ಪೊಲೀಸರೇ ಆಸ್ಪತ್ರೆಗೆ ದಾಖಲಿಸಿದ್ದಾರೆ. ಪಿಎಸ್‌ಐ ಅವರೂ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದೂ ತಿಳಿಸಿದರು.

‘ಗರುಡ 900’ ತಂಡ ಕಟ್ಟಿಕೊಂಡು ಕೃತ್ಯ: ‘ಚಿಕ್ಕ ವಯಸ್ಸಿನಿಂದಲೇ ಅಪರಾಧ ಕೃತ್ಯ ಎಸಗುತ್ತಿರುವ ಆರೋಪಿಗಳು, ಇದನ್ನೇ ವೃತ್ತಿ ಮಾಡಿಕೊಂಡಿದ್ದಾರೆ. ‘ಗರುಡ 900’ ಕಟ್ಟಿಕೊಂಡಿರುವ ಆರೋಪಿಗಳು, ಅದರ ಮೂಲಕ ಅಪರಾಧ ಕೃತ್ಯ ಎಸಗುತ್ತಿದ್ದ ಮಾಹಿತಿ ಗೊತ್ತಾಗಿದೆ. ಸುಲಿಗೆ ಮಾಡುವ ವೇಳೆಯಲ್ಲೂ ತಂಡದ ಹೆಸರು ಹೇಳಿ ಜನರನ್ನು ಬೆದರಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಸುಲಿಗೆ, ದರೋಡೆ, ಮನೆಗಳಲ್ಲಿ ಕಳ್ಳತನ, ಹಸುಗಳ ಕಳ್ಳತನ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು. ಉಡುಪಿ, ಕುಂದಾಪುರ ಹಾಗೂ ಮಂಗಳೂರು ಭಾಗಗಳಲ್ಲಿ ಹೆಚ್ಚು ಅಪರಾಧ ಎಸಗಿದ್ದಾರೆ. ಇತ್ತೀಚೆಗೆ ಬೆಂಗಳೂರಿಗೆ ಬಂದು ಯುವಕನನ್ನು ಅಪಹರಣ ಮಾಡಿದ್ದರು. ನಂತರ, ದಾವಣಗೆರೆಯಲ್ಲೂ ಆರೋಪಿಗಳು ಸುಲಿಗೆ ಮಾಡಿರುವ ಮಾಹಿತಿ ಇದೆ’ ಎಂದೂ ತಿಳಿಸಿದರು.

‘ಕೆಲ ಪ್ರಕರಣಗಳಲ್ಲಿ ಜಾಮೀನು ಪಡೆದಿರುವ ಆರೋಪಿಗಳು, ನ್ಯಾಯಾಲಯದ ವಿಚಾರಣೆಗೆ ಗೈರಾಗುತ್ತಿದ್ದರು. ಅವರ ವಿರುದ್ಧ 10 ವಾರೆಂಟ್‌ಗಳು ಬಾಕಿ ಇವೆ. ಸದ್ಯ ಆರೋಪಿಗಳಿಂದ 10 ಮೊಬೈಲ್, ಕಾರು ಜಪ್ತಿ ಮಾಡಲಾಗಿದೆ. ಆರೋಪಿಗಳ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದೂ ವಿವರಿಸಿದರು.

ಸುದ್ದಿ 2 ನಿಮಿಷ

‘ನಿಯಮ ಮೀರಿದರೆ, ಧ್ವನಿವರ್ಧಕ ಜಪ್ತಿ’

ಬೆಂಗಳೂರು: ‘ನಿರ್ಬಂಧಿತ ಅವಧಿಯಲ್ಲಿ ಧ್ವನಿವರ್ಧಕ ಬಳಸಲು ಅವಕಾಶವಿಲ್ಲ. ನಿಯಮ ಮೀರಿದರೆ, ಧ್ವನಿವರ್ಧಕ ಜಪ್ತಿ ಮಾಡಿ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಧಾರ್ಮಿಕ ಕೇಂದ್ರ ಸೇರಿದಂತೆ ಇತರೆಡೆ ಧ್ವನಿವರ್ಧಕ ಬಳಕೆ ಬಗ್ಗೆ ಹೈಕೋರ್ಟ್ ನೀಡಿರುವ ನಿರ್ದೇಶನದಂತೆ ಪೊಲೀಸರು ಕೆಲಸ ಮಾಡುತ್ತಿದ್ದಾರೆ’ ಎಂದರು

‘ನಿಯಮ ಮೀರಿ ಧ್ವನಿವರ್ಧಕ ಬಳಸಿದ್ದ 200ಕ್ಕೂ ಹೆಚ್ಚು ಮಂದಿಗೆ ನೋಟಿಸ್ ನೀಡಲಾಗಿದೆ. ಇದರಲ್ಲಿ ಧಾರ್ಮಿಕ ಕೇಂದ್ರಗಳು, ಪಬ್‌ಗಳು, ಹೋಟೆಲ್‌ಗಳೂ ಇವೆ. ಕೆಲವೆಡೆ, ಧ್ವನಿವರ್ಧಕಗಳನ್ನೂ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

‘ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಜ್ಞಾನ ಅಗತ್ಯ’



ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಎಸ್‌ಜೆ.ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಡಾ.ತಿಮ್ಮಪ್ಪ ಹೆಗ್ಡೆ, ಪ್ರಾಂಶುಪಾಲ ಮೋಹನ್, ಸೂಪರಿಂಟೆಂಡೆಂಟ್ ಶ್ರೀಕಾಂತ್ ಕುಲಕರ್ಣಿ, ಋತುಪರ್ಣ ಶರ್ಮ ಇದ್ದಾರೆ

ಕೆಂಗೇರಿ: ‘ಶೈಕ್ಷಣಿಕ ಅವಧಿಯಲ್ಲಿ ಗಳಿಸುವ ನಿರ್ದಿಷ್ಟ ಜ್ಞಾನ ವ್ಯಾವಹಾರಿಕ ಪ್ರಪಂಚದಲ್ಲಿ ಎಲ್ಲ ಸಮಯದಲ್ಲೂ ಬಳಕೆಗೆ ಬರುವುದಿಲ್ಲ. ವಿವಿಧ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಜ್ಞಾನ ಹೊಂದಿರಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಕೆಂಗೇರಿ - ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಬಿಜಿಎಸ್ ಸಭಾಂಗಣದಲ್ಲಿ ಎಂಬಿಬಿಎಸ್‌ನ 8ನೇ ಬ್ಯಾಚ್ ಹಾಗೂ ಸ್ನಾತಕೋತ್ತರ ಪದವಿಯ 2ನೇ ಬ್ಯಾಚ್ ‘ತರಗತಿ ಆರಂಭ’ (ಫ್ರೆಶರ್ಸ್ ಡೇ) ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ‘ದುರ್ಬಲ ಮನಸ್ಥಿತಿ ಹೊಂದಿರುವ ಯಾವುದೇ ವ್ಯಕ್ತಿಗಳಿಗೆ ಔಷಧಿಗಳು ಪರಿಣಾಮ ಬೀರುವುದಿಲ್ಲ. ಕಠಿಣ ಪರಿಸ್ಥಿತಿಯಲ್ಲೂ ಗೆದ್ದು ಬರುವ ಮನಸ್ಥೈರ್ಯ ರೂಢಿಸಿಕೊಳ್ಳಬೇಕು’ ಎಂದು ಹೇಳಿದರು.

ಬಿಜಿಎಸ್ ಮತ್ತು ಎಸ್.ಜೆ.ಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ನಾರಾಯಣ ಸಂಸ್ಥೆಯ ನರವಿಜ್ಞಾನ ವಿಭಾಗದ ನಿರ್ದೇಶಕ ಡಾ.ತಿಮ್ಮಪ್ಪ ಹೆಗ್ಡೆ, ಕಿಮ್ಸ್‌ನ ಉಪ ಪ್ರಾಂಶುಪಾಲ ಡಾ.ಬಿ.ಸಿ.ಭಗವಾನ್, ಪ್ರಾಂಶುಪಾಲ ಮೋಹನ್ ಉಪಸ್ಥಿತರಿದ್ದರು.

ನೈಜೀರಿಯಾ ಪ್ರಜೆ ಬಂಧನದ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತು ಪೂರೈಸುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಯ ಬಂಧನಕ್ಕೆ ನಗರ ಪೊಲೀಸರು ಹೊರಡಿಸಿದ್ದ ಆದೇಶ ಹಾಗೂ ಈ ಕುರಿತ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

‘ಮಾದಕದ್ರವ್ಯ ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ -1988ರ ಕಲಂ 3(1)ರ ಅಡಿಯಲ್ಲಿ ನನ್ನ ವಿರುದ್ಧ ಹೊರಡಿಸಲಾಗಿರುವ ಬಂಧನದ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ನ್ಯಾನ್ಸೊ ಜೋಚಿನ್ ಎಂಬುವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ಸರ್ಕಾರದ ಆದೇಶವು ಸೂಕ್ತವಾಗಿದೆ. ಅದರಲ್ಲಿ ಮಧ್ಯಪ್ರವೇಶ ಮಾಡಲು ಸಕಾರಣಗಳು ಇಲ್ಲ’ ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿದೆ. ರಾಜ್ಯ ಪ್ರಾಸಿಕ್ಯೂಷನ್ ಪಿ.ತೇಜೇಶ್ ಪರ ವಾದ ಮಂಡಿಸಿದ್ದರು.

ಪ್ರಕರಣವೇನು?: ನಗರದ ಹೊರಮಾವು ಪ್ರದೇಶದಲ್ಲಿ ವಾಸವಿದ್ದ ನ್ಯಾನ್ಸೊ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಬಂಧನಕ್ಕೊಳಗಾಗಿದ್ದ. ತನ್ನ ಬಂಧನದ ಆದೇಶ ಕೈಬಿಡುವಂತೆ ಕೋರಿ ನಗರ ಪೊಲೀಸ್ ಕಮಿಷನರ್ ಮತ್ತು ಸರ್ಕಾರಕ್ಕೆ 2021ರ ಜೂನ್ 1ರಂದು ಆರೋಪಿ ಮನವಿ ಸಲ್ಲಿಸಿದ್ದ. ಆದರೆ, ಇದನ್ನು ನಗರ ಪೊಲೀಸ್ ಕಮಿಷನರ್ ಜೂನ್ 3ರಂದು ತಿರಸ್ಕರಿಸಿದ್ದರು. ಮತ್ತೊಂದೆಡೆ ಸರ್ಕಾರವು ಬಂಧನದ ಆದೇಶವನ್ನು ಡಿಸೆಂಬರ್ 18ರಂದು ಸರ್ಕಾರ ಅನುಮೋದಿಸಿತ್ತು. ‘ಸರ್ಕಾರ ನಿಗದಿತ ಸಮಯದಲ್ಲಿ ಆದೇಶ ಹೊರಡಿಸಿಲ್ಲ’ ಎಂದು ಆಕ್ಷೇಪಿಸಿದ್ದ ಆರೋಪಿ ಬಂಧನದ ಆದೇಶ ರದ್ದುಪಡಿಸಬೇಕು ಎಂದು ಹೈಕೋರ್ಟ್ ಮೆಟ್ಟಿಲೇರಿದ್ದ.

ರೌಡಿ ಕರಿಯ ಶಂಕರ್ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ ಎನ್ನಲಾದ ರೌಡಿ ಶಂಕರ್ ಅಲಿಯಾಸ್ ಕರಿಯನನ್ನು (34) ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

‘ಕೊಲೆ ಯತ್ನ, ಸುಲಿಗೆ, ಜೀವ ಬೆದರಿಕೆ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿ, ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ರಾಜಗೋಪಾಲನಗರ ಠಾಣೆ ರೌಡಿ ಪಟ್ಟಿಯಲ್ಲಿ ಆತನ ಹೆಸರಿತ್ತು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ರೌಡಿ ಸ್ಲಂ ಭರತ್‌ನ ಸಹಚರನಾದ ಶಂಕರ್, ತನ್ನದೇ ತಂಡ ಕಟ್ಟಿಕೊಂಡು ಅಪರಾಧ ಕೃತ್ಯ ಎಸಗುತ್ತಿದ್ದ. ಆತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಕೋರಿ ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಅದಕ್ಕೆ ಅನುಮತಿ ಸಿಗುತ್ತಿದ್ದಂತೆ ಶಂಕರ್‌ನನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿವೆ.

ಶಿಲಾ ಫಲಕದಲ್ಲಿ ಕನ್ನಡ ಕಡೆಗಣನೆ: ಆಕ್ಷೇಪ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದ ಸತ್ಯಸಾಯಿ ಆಸ್ಪತ್ರೆಯ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಕನ್ನಡ ಕಡೆಗಣಿಸಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ.

ಇತ್ತೀಚೆಗೆ ನಡೆದ ಈ ಕಾರ್ಯಕ್ರಮದಲ್ಲಿನ ಶಿಲಾ ಫಲಕವು ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿತ್ತು. ಕನ್ನಡ ಕಡೆಗಣನೆಗೆ ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪ ವ್ಯಕ್ತವಾಗಿದ್ದವು. ಹೀಗಾಗಿ, ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

‘ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಈ ಭಾಷೆಯು ನಮಗೆ ಆದ್ಯತೆ ಆಗಬೇಕೇ ಹೊರತು ಆಯ್ಕೆ ಆಗಬಾರದು. ಕನ್ನಡ ಭಾಷೆ ಬಳಸದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮದಲ್ಲಿ ತಾವುಗಳು ಭಾಗವಹಿಸಿರುವುದರಿಂದ ಪ್ರಾಧಿಕಾರದ ಜತೆಗೆ ಸರ್ಕಾರಕ್ಕೂ ಮುಜುಗರ ಉಂಟಾಗುತ್ತಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರು ಪ್ರಾಧಿಕಾರವನ್ನು ಗುರುತು ಮಾಡಿ, ಟೀಕಿಸುತ್ತಿದ್ದಾರೆ. ಈ ಸರ್ಕಾರಕ್ಕೆ ಕನ್ನಡದ ಬದ್ಧತೆಯಿಲ್ಲ ಎಂಬಂತೆ ಚರ್ಚೆ ಮಾಡುತ್ತಿದ್ದಾರೆ’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಶಾಸಕ ರೇಣುಕಾಚಾರ್ಯ ಮಗಳ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಕಲಿ ಜಾತಿ ಪ್ರಮಾಣಪತ್ರ ಪಡೆದ ಹೊನ್ನಾಳಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ಪುತ್ರಿ ಎಂ.ಆರ್. ಚೇತನ ವಿರುದ್ಧ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಕಲಂ 4(ಎಫ್) ಕರ್ನಾಟಕ ಎಸ್‌ಸಿ/ಎಸ್‌ಟಿ ಮತ್ತು ಓಬಿಸಿ (ರಿಸರ್ವೇಷನ್ ಆಫ್ ಅಪಾಯಿಂಟ್‌ಮೆಂಟ್ ಇತರೆ) ಕಾಯ್ದೆ 1990ರ ಅಡಿಯಲ್ಲಿ ದೂರು ಸಲ್ಲಿಸಲಾಗಿದೆ.

ಎಸ್‌ಸಿ ಸಮುದಾಯಕ್ಕೆ ಸೇರಿರುವ, ವಕೀಲ ವೃತ್ತಿಯ ಎ. ಹರಿರಾಂ ಅರ್ಜಿದಾರರಾಗಿದ್ದು, ಅವರ ಪರವಾಗಿ ವಕೀಲರಾದ ಆರ್. ಜಗನ್ನಾಥ, ದಾವಣಗೆರೆಯ ಅನೀಸ್ ಪಾಷ ರಿವಿಜನ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಶಾಸಕ ಎಂ.ಪಿ. ರೇಣುಕಾಚಾರ್ಯ ಲಿಂಗಾಯತ ಸಮುದಾಯಕ್ಕೆ ಸೇರಿದವರು. ತಪ್ಪು ಮಾಹಿತಿ ನೀಡಿ, ತಮ್ಮ ರಾಜಕೀಯ ಪ್ರಾಬಲ್ಯ ಬಳಸಿ, ಪರಿಶಿಷ್ಟ ಜಾತಿಗೆ ಸೇರಿರುವುದಾಗಿ ಸುಳ್ಳು ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದಿರುವುದು ಕಾನೂನು ಬಾಹಿರವಾಗಿದೆ. ಸುಪ್ರೀಂಕೋರ್ಟ್ ತೀರ್ಪಿನಂತೆ ಯಾವುದೇ ಮೇಲ್ವರ್ಗದ ವ್ಯಕ್ತಿ ಮೋಸದಿಂದ ಎಸ್‌ಸಿ-ಎಸ್‌ಟಿ ಅಥವಾ ಓಬಿಸಿ ಎಂಬುದಾಗಿ ಸುಳ್ಳು ಹೇಳಿ ಪ್ರಮಾಣಪತ್ರ ಪಡೆದಲ್ಲಿ ಅದು ಶಿಕ್ಷಾರ್ಹ ಅಪರಾಧ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಹೊನ್ನಾಳಿಯಲ್ಲಿ ವಾಸವಾಗಿದ್ದರೂ ಬೆಂಗಳೂರಿನ ವ್ಯಾಪ್ತಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಸುಳ್ಳು ಜಾತಿ ಪ್ರಮಾಣಪತ್ರ ಪಡೆಯಲಾಗಿದೆ. ಎಲ್ಲ ದಾಖಲಾತಿಗಳನ್ನು ಪಡೆದು, ಪುನರ್ ಪರಿಶೀಲಿಸಿ, ಶಾಸಕ ಎಂ.ಪಿ.ರೇಣುಕಾಚಾರ್ಯ ಮತ್ತು ಅವರ ಪುತ್ರಿ ಎಂ.ಆರ್. ಚೇತನಾ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಬೈಕ್ ತಗುಲಿದ್ದಕ್ಕೆ ಕೊಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜಗಜೀವನರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ಚಂದ್ರಶೇಖರ್ (19) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಹಳೇ ಗುಡ್ಡದಹಳ್ಳಿಯ ಶಾಹೀದ್ ಪಾಷಾ (21), ಹೊಸಕೋಟೆಯ ಶಾಹೀದ್ ಅಲಿಯಾಸ್ ಗೋಲಿ (22) ಬಂಧಿತರು. ಇನ್ನೊಬ್ಬ ಆರೋಪಿ, 17 ವರ್ಷದ ಬಾಲಕ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಐಟಿಐ ಫಿಟ್ಟರ್’ ಕೋರ್ಸ್ ಮುಗಿಸಿದ್ದ ಚಂದ್ರಶೇಖರ್, ನಗರದ ರೈಲ್ವೆ ನಿಲ್ದಾಣದಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಸೋಮವಾರ (ಏಪ್ರಿಲ್ 4) ರಾತ್ರಿ ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ. ಸ್ನೇಹಿತರು ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು.

ಸ್ನೇಹಿತನ ಹುಟ್ಟುಹಬ್ಬ: ‘ಸ್ನೇಹಿತ ಸೈಮನ್ ಎಂಬುವರ ಹುಟ್ಟಹಬ್ಬ ಆಚರಣೆಗೆಂದು ಚಂದ್ರಶೇಖರ್ ಹಾಗೂ ಇತರರು, ಛಲವಾದಿ ಪಾಳ್ಯದಲ್ಲಿರುವ ಕೊಠಡಿಯೊಂದರಲ್ಲಿ ಸೇರಿದ್ದರು’ ಎಂದು ಅಧಿಕಾರಿ ತಿಳಿಸಿದರು.

‘ಸ್ನೇಹಿತರೆಲ್ಲರೂ ತಡರಾತ್ರಿ ಊಟಕ್ಕೆಂದು ಕೊಠಡಿಯಿಂದ ಹೊರಗೆ ಬಂದಿದ್ದರು. ಜಗಜೀವನ್‌ರಾಮ್ ನಗರದಲ್ಲಿ ಏನಾದರೂ ತಿನ್ನಲು ಸಿಗಬಹುದೆಂದು ಚಂದ್ರಶೇಖರ್ ಹಾಗೂ ಸೈಮನ್ ಬೈಕ್‌ನಲ್ಲಿ ಬಂದಿದ್ದರು.’

‘ಚಂದ್ರಶೇಖರ್ ಚಲಾಯಿಸುತ್ತಿದ್ದ ಬೈಕ್, ಹಳೇ ಗುಡ್ಡದಹಳ್ಳಿಯಲ್ಲಿ ಮತ್ತೊಂದು ಬೈಕ್‌ಗೆ ಗುದ್ದಿತ್ತು. ಆ ಬೈಕ್ ಚಾಲಕನಾಗಿದ್ದ ಆರೋಪಿ ಹಾಗೂ ಇತರರು, ಗಲಾಟೆ ಆರಂಭಿಸಿದ್ದರು. ಚಂದ್ರಶೇಖರ್ ಅವರನ್ನು ಹಿಡಿದು ರಸ್ತೆಯಲ್ಲಿ ಎಳೆದಾಡಿ ಹೊಡೆದಿದ್ದರು. ಬಿಡಿಸಲು ಹೋದ ಸ್ನೇಹಿತ ಸೈಮನ್ ಮೇಲೂ ಹಲ್ಲೆ ಮಾಡಿದ್ದರು.’

ಐಷಾರಾಮಿ ಜೀವನ ನಡೆಸಲು ಕೃತ್ಯ • ಆಂಧ್ರದಲ್ಲಿ ಮಾರಾಟ

30 ಬೈಕ್ ಕದ್ದಿದ್ದ ಪದವೀಧರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಎನ್‌ಫೀಲ್ಡ್ ಬೈಕ್‌ಗಳನ್ನು ಕದ್ದು ಜಾಲಿರೈಡ್ ಮಾಡಿ ಮಾರುತ್ತಿದ್ದ ಜಾಲವನ್ನು ಬನಶಂಕರಿ ಠಾಣೆ ಪೊಲೀಸರು ಭೇದಿಸಿದ್ದು, ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ವಿಜಯ ಬಂಡಿ (25), ಹೇಮಂತ್ (27), ಗುಣಶೇಖರ್ ರೆಡ್ಡಿ (30), ಭಾನುಮೂರ್ತಿ (25), ಪುರುಷೋತ್ತಮ ನಾಯ್ಡು (30), ಕಾರ್ತಿಕ್ ಕುಮಾರ್ (27) ಹಾಗೂ ಕಿರಣ್‌ಕುಮಾರ್ (22) ಬಂಧಿತರು. ಇವರಿಂದ ₹ 68 ಲಕ್ಷ ಮೌಲ್ಯದ 30 ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ತ್ಯಾಗರಾಜನಗರದ ಮನೆಯೊಂದರ ಮುಂದೆ ನಿಲ್ಲಿಸಿದ್ದ ರಾಯಲ್ ಎನ್‌ಫೀಲ್ಡ್ ಬೈಕ್ ಫೆ. 26ರಂದು ಕಳ್ಳತನವಾಗಿತ್ತು. ಈ ಬಗ್ಗೆ ಅದರ ಮಾಲೀಕರು ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಬೈಕ್ ಕಳ್ಳತನ ಮಾಡುತ್ತಿದ್ದ ಜಾಲ ಪತ್ತೆಯಾಯಿತು’ ಎಂದೂ ತಿಳಿಸಿದರು.

‘ಕದ್ದ ಬೈಕ್‌ಗಳಲ್ಲಿ ಆರೋಪಿಗಳು, ಜಾಲಿರೈಡ್ ಮಾಡುತ್ತಿದ್ದರು. ನಂತರ ಬೈಕ್‌ಗಳನ್ನು ಆಂಧ್ರಪ್ರದೇಶದಲ್ಲಿ ಮಾರುತ್ತಿದ್ದರು. ನಗರದ ಕೆ.ಆರ್. ಪುರ, ಬನಶಂಕರಿ, ಚನ್ನಮ್ಮನಕೆರೆ ಅಚ್ಚುಕಟ್ಟು, ಸುಬ್ರಹ್ಮಣ್ಯಪುರ, ಜಯನಗರ, ಕುಮಾರಸ್ವಾಮಿ ಲೇಔಟ್, ಜೆ.ಪಿ. ನಗರ, ಮೈಕೊ ಲೇಔಟ್, ಬೇಗೂರು, ಬಾಣಸವಾಡಿ, ಮಾರತ್ತಹಳ್ಳಿ, ಹೊಸಕೋಟೆ ಹಾಗೂ ಜಗಜೀವನ್‌ರಾಮ್ ನಗರ ಠಾಣೆಗಳ ವ್ಯಾಪ್ತಿಗಳಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಹೇಳಿದರು.

ವಿಡಿಯೊ ನೋಡಿ ಸಂಚು

‘ಬಂಧಿತ ಆರೋಪಿಗಳು, ಎಂಜಿನಿಯರಿಂಗ್, ಡಿಪ್ಲೊಮಾ ಹಾಗೂ ಎಂಬಿಎ ಪದವೀಧರರು. ಕೆಲವೆಡೆ ಕೆಲಸಕ್ಕೆ ಸೇರಿದರೂ ವೇತನ ಸಾಕಾಗಿರಲಿಲ್ಲ. ಹೀಗಾಗಿ ಕೆಲಸ ಬಿಟ್ಟಿದ್ದರು. ಐಷಾರಾಮಿ ಜೀವನ ನಡೆಸಬೇಕೆಂದು ಕಳ್ಳತನಕ್ಕೆ ಇಳಿದಿದ್ದರು’ ಎಂದು ಪೊಲೀಸರು ಹೇಳಿದರು.

‘ಬೈಕ್ ಲಾಕ್ ತೆರೆಯುವುದು ಹೇಗೆ ? ಕಳ್ಳತನ ಮಾಡುವುದು ಹೇಗೆ’ ಎಂಬ ಬಗ್ಗೆ ಆರೋಪಿಗಳು, ಯೂಟ್ಯೂಬ್‌ನಲ್ಲಿ ವಿಡಿಯೊ ನೋಡಿ ತಿಳಿದುಕೊಂಡಿದ್ದರು. ನಂತರ ಸಂಚು ರೂಪಿಸಿ ಲಾಕ್ ಮುರಿದು ಬೈಕ್ ಕಳ್ಳತನ ಮಾಡಿದ್ದರು’ ಎಂದೂ ತಿಳಿಸಿದರು.

‘ಪೊಲೀಸ್ ನೇಮಕಾತಿ: ಶೇ 33ರಷ್ಟು ಮಹಿಳಾ ಮೀಸಲಾತಿ’

ಬೆಂಗಳೂರು: ಪೊಲೀಸ್ ಇಲಾಖೆ ಸುಧಾರಣೆ ಕ್ರಮಗಳ ಬಗ್ಗೆ ರಾಜ್ಯ ಆಡಳಿತ ಸುಧಾರಣಾ ಆಯೋಗ ವರದಿಯೊಂದನ್ನು ಸಿದ್ಧಪಡಿಸಿದ್ದು, ಅದನ್ನು ಗೃಹ ಇಲಾಖೆಗೆ ನೀಡಿದೆ.

ಆಯೋಗದ ಅಧ್ಯಕ್ಷರೂ ಆದ ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯ ಭಾಸ್ಕರ್, ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಮಂಗಳವಾರ ಭೇಟಿ ಮಾಡಿ ವರದಿ ಹಸ್ತಾಂತರಿಸಿದರು. ವರದಿಯಲ್ಲಿರುವ ಶಿಫಾರಸುಗಳ ಬಗ್ಗೆ ಚರ್ಚಿಸಿದರು.

‘ಪೊಲೀಸ್ ಇಲಾಖೆಯಲ್ಲಿ ಮಹಿಳಾ ಸಿಬ್ಬಂದಿ ಪ್ರಮಾಣ ಶೇ 8.3ರಷ್ಟಿದೆ. ಕಾನ್‌ಸ್ಟೆಬಲ್‌ನಿಂದ ಸಬ್ ಇನ್‌ಸ್ಪೆಕ್ಟರ್‌ವರೆಗಿನ (ಪಿಎಸ್‌ಐ) ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕು’ ಎಂಬ ಶಿಫಾರಸು ವರದಿಯಲ್ಲಿದೆ.

‘ಪೊಲೀಸ್ ಠಾಣೆಗಳ ಮೂಲಕ 32 ನಾಗರಿಕ ಸೇವೆಗಳನ್ನು ಒದಗಿಸಲಾಗುತ್ತಿದೆ. ಪ್ರತಿಯೊಂದು ಠಾಣೆಯಲ್ಲಿ ನಾಗರಿಕ ಸೇವೆಗಳ ಸಹಾಯ ಕೇಂದ್ರ ಸ್ಥಾಪಿಸಬೇಕು. ಮುಂಜಾಗ್ರತಾ ಕ್ರಮವಾಗಿ ಶಾಂತಿ ಕಾಪಾಡಲು ಸಿಆರ್‌ಪಿಸಿ 107-110ರ ಅಡಿ ಕ್ರಮ ಜರುಗಿಸುವ ಅಧಿಕಾರ ತಹಶೀಲ್ದಾರ್ ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅವರಿಗಿದೆ. ಇದೇ ಅಧಿಕಾರವನ್ನು ಜಿಲ್ಲಾ ಎಸ್ಪಿಗಳಿಗೂ ನೀಡಬೇಕು. ಪೊಲೀಸ್ ಕಾಯ್ದೆಯಡಿ ಸೂಚಿಸಲಾಗಿರುವ ದಂಡದ ಮೊತ್ತವನ್ನು ಪರಿಷ್ಕರಿಸಬೇಕು’ ಎಂಬ ಅಂಶವನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಡಾರ್ಕ್‌ನೆಟ್, ಬಿಟ್‌ಕಾಯಿನ್ ಹಾಗೂ ಇತರೆ ಸೈಬರ್ ಅಪರಾಧಗಳು ಹೆಚ್ಚುತ್ತಿವೆ. ಇವುಗಳನ್ನು ಭೇದಿಸಲು ವಿಶೇಷ ಜ್ಞಾನದ ಅವಶ್ಯಕತೆ ಇದೆ. ಆದರೆ, ಅಗತ್ಯ ಅರ್ಹತೆ ಹಾಗೂ ತರಬೇತಿ ಇಲ್ಲದ ಅಪರಾಧ ಹಾಗೂ ಸಂಚಾರ ಪೊಲೀಸರನ್ನೇ ಸೈಬರ್ ಠಾಣೆಗೆ ನಿಯೋಜಿಸಲಾಗುತ್ತಿದೆ. ಠಾಣೆಗೆ ಒಬ್ಬರು ಅಥವಾ ಇಬ್ಬರನ್ನು ಎಂಸಿಎ, ಬಿಸಿಎ, ಡಿಪ್ಲೊಮಾ ಪದವೀಧರರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬೇಕು. ಪ್ರತಿ ಕಂದಾಯ ಜಿಲ್ಲೆಯಲ್ಲಿ ಮಿನಿ ವಿಧಿವಿಜ್ಞಾನ ಪ್ರಯೋಗಾಲಯ ಸ್ಥಾಪಿಸಬೇಕು. ಲಾಕಪ್ ಕೈದಿಗಳಿಗೆ ದಿನಕ್ಕೆ ಎರಡು ಊಟಗಳನ್ನು ನೀಡಲಾಗುತ್ತಿದೆ. ದಿನಕ್ಕೆ ಮೂರು ಊಟ ನಿಗದಿಪಡಿಸಿ, ಅದರ ಮೊತ್ತವನ್ನು ಹೆಚ್ಚಿಸಬೇಕು. ಕಾರ್ಯ ನಿಯೋಜನೆ ವೇಳೆ ಪುರುಷ ಹಾಗೂ ಮಹಿಳಾ ಸಿಬ್ಬಂದಿ ನಡುವಿನ ಅಸಮಾನತೆಯನ್ನು ಕಡಿಮೆ ಮಾಡಿ, ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂಬ ಶಿಫಾರಸುಗಳು ಸಹ ವರದಿಯಲ್ಲಿವೆ.

ಚಿತ್ರಾವಳಿ



ನಗರದ ಸರ್ಪಭೂಷಣ ಮಠದಲ್ಲಿ ನಡೆದ ಅಲ್ಲಮಪ್ರಭು ಜಯಂತಿ ಕಾರ್ಯಕ್ರಮವನ್ನು ಲೇಖಕ ಎಸ್‌.ಷಡಕ್ಷರಿ ಉದ್ಘಾಟಿಸಿದರು. ಕನ್ನಡ ಉಪನ್ಯಾಸಕ ರುದ್ರೇಶ್ ಅದರಂಗಿ, ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಮಠದ ಅಧ್ಯಕ್ಷ ಮಲ್ಲಿಕಾರ್ಜುನ ದೇವರು, ಕರ್ನಾಟಕ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ಎಸ್‌.ಪರಮಶಿವಯ್ಯ ಹಾಗೂ ಇತರರು ಇದ್ದಾರೆ.



ಸಾಮಾಜಿಕ ಹೋರಾಟಗಾರ ಆಯುಸೇನ್ ಬಿ.ಗೋಪಾಲ ಅವರ ಜನ್ಮದಿನವನ್ನು ಕಾವೇರಿ ಅತಿಥಿ ಗೃಹದಲ್ಲಿ ಆಚರಿಸಲಾಯಿತು. ರಂಗತಜ್ಞ ಎ.ಆರ್‌.ಗೋವಿಂದಸ್ವಾಮಿ, ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಸಮನ್ವಯ ಸಮಿತಿ ಅಧ್ಯಕ್ಷ ಶಿವಶಂಕರ, ನಾವು ಭಾರತೀಯರು ಸಂಘಟನೆಯ ಮುತ್ತಪ್ಪ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕೇಶವಮೂರ್ತಿ, ಪತ್ರಕರ್ತ ಗೋವಿಂದರಾಜ್ ಹಾಗೂ ಇತರರು ಇದ್ದಾರೆ.

ಸಂಪುಟ ಉಪಸಮಿತಿ ಸಭೆ ಬಳಿಕ ಸಚಿವ ಅಶೋಕ ಮಾಹಿತಿ

ಅನಗತ್ಯ ಹುದ್ದೆಗಳ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಕ್ಕೆ 'ಬಿಳಿಯಾನೆ'ಯಾಗಿರುವ ವಿವಿಧ ಇಲಾಖೆಗಳಲ್ಲಿರುವ ಅನಗತ್ಯ ಹುದ್ದೆಗಳನ್ನು ರದ್ದು ಮಾಡುವುದು ಮತ್ತು ಇಲಾಖೆಗಳ ವಿಲೀನಕ್ಕೆ ಸಂಬಂಧಿಸಿದಂತೆ ಮಂಗಳವಾರ ಸಂಪುಟ ಉಪಸಮಿತಿಯಲ್ಲಿ ಕೆಲವು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಈಗ ಇರುವ ನಾಲ್ಕು ವಿಭಾಗೀಯಾಧಿಕಾರಿ ಹುದ್ದೆಗಳನ್ನು ರದ್ದು ಮಾಡುವುದು, ಜಿಲ್ಲೆಗೆ ಒಬ್ಬ ಡಿಸಿಎಫ್ ಮಾತ್ರ ನೇಮಿಸುವುದು. ಈಗ ಕೆಲವು ಜಿಲ್ಲೆಗಳಲ್ಲಿ 3 ರಿಂದ 4 ನಾಲ್ಕು ಡಿಸಿಎಫ್‌ಗಳಿದ್ದಾರೆ. ಅಷ್ಟು ಡಿಸಿಎಫ್‌ಗಳ ಅಗತ್ಯವಿಲ್ಲ. ಅಧಿಕಾರಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಫಾರೆಸ್ಟರ್‌ಗಳನ್ನು ನೇಮಿಸಿಕೊಳ್ಳಲು ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕೃಷಿ ಇಲಾಖೆಗೆ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯನ್ನು ವಿಲೀನಗೊಳಿಸುವುದು, ಅರಣ್ಯ ಇಲಾಖೆಯಲ್ಲಿ ಇರುವ ಮೂರು ಮಂಡಳಿಗಳನ್ನು ರದ್ದು ಮಾಡಿ ಒಂದು ಮಂಡಳಿಯನ್ನು ಮಾತ್ರ ಉಳಿಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದರು.

ಅಲ್ಲದೆ, ಕೆಲವು ಜಿಲ್ಲೆಗಳಲ್ಲಿ ಅಭಿವೃದ್ಧಿಗಾಗಿ ಹಲವು ಮಂಡಳಿಗಳನ್ನು ರಚಿಸಲಾಗಿದೆ. ಒಂದಕ್ಕಿಂತ ಹೆಚ್ಚು ಮಂಡಳಿಗಳು ಇದ್ದರೆ ಅವುಗಳನ್ನು ರದ್ದು ಮಾಡಿ, ಒಂದನ್ನು ಮಾತ್ರ ಉಳಿಸಿಕೊಳ್ಳುವುದು ಸೂಕ್ತ ಎಂದು ತೀರ್ಮಾನಿಸಲಾಯಿತು. ಉದಾಹರಣೆಗೆ ಬೆಂಗಳೂರು ಸುತ್ತಮುತ್ತ ರಾಮನಗರ, ಮಾಗಡಿ, ಆನೇಕಲ್, ದೇವನಹಳ್ಳಿ ಅಭಿವೃದ್ಧಿ ಮಂಡಳಿಗಳಿವೆ. ರಾಮನಗರ ಮತ್ತು ಮಾಗಡಿ ಮಂಡಳಿಗಳನ್ನು ಒಂದು ಮಾಡಬಹುದು. ಜಿಲ್ಲೆಗೆ ಒಂದು ಅಭಿವೃದ್ಧಿ ಮಂಡಳಿ ಇದ್ದರೆ ಸಾಕಾಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಇದೇ ರೀತಿ ಬೆಂಗಳೂರಿನಲ್ಲೂ ಹಲವು ಮಂಡಳಿಗಳು ಇವೆ. ಅವುಗಳನ್ನು ಬಿಎಂಎಆರ್‌ಡಿಯಲ್ಲಿ ವಿಲೀನಗೊಳಿಸುವ ಬಗ್ಗೆಯೂ ಸಲಹೆ ಕೇಳಿ ಬಂದಿತು. ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆಯಲ್ಲಿರುವ ಆಡಳಿತ ಸುಧಾರಣೆ ವಿಭಾಗದಲ್ಲಿರುವ ಮನೀಷ್ ಮೌದ್ಗಿಲ್ ಅವರು, ತಮಗೆ ಇಲ್ಲಿ ಕೆಲಸವೇ ಇಲ್ಲ. ಈ ವಿಭಾಗದ ಅಗತ್ಯವೇ ಇಲ್ಲ ಎಂದು ಹೇಳಿದರು. ಅದೇ ರೀತಿ ವಾರ್ತಾ ಇಲಾಖೆಯೂ ಅನುತ್ಪಾದಕವಾಗಿದ್ದು ಇಲ್ಲೂ ಕೆಲವು ಸುಧಾರಣೆ ಮಾಡಲು ಸಲಹೆಗಳು ಸಭೆಯಲ್ಲಿ ಕೇಳಿ ಬಂದಿದೆ ಎಂದರು.

ಹಿಂದೆ ಅನಗತ್ಯವಾಗಿ ಹಲವು ಮಂಡಳಿ, ವಿಭಾಗ, ಇಲಾಖೆಗಳು ಮತ್ತು ಹುದ್ದೆಗಳನ್ನು ಸೃಷ್ಟಿಸಲಾಗಿತ್ತು. ಈಗ ಇವು ಆರ್ಥಿಕವಾಗಿ ಹೊರೆಯಾಗಿ ಪರಿಣಮಿಸಿವೆ. ಯಾವುದನ್ನು ರದ್ದು ಮಾಡಬೇಕು, ಯಾವುದನ್ನು ವಿಲೀನಗೊಳಿಸಬೇಕು ಎಂಬ ಬಗ್ಗೆ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿಯವರಿಗೆ ನೀಡಿ, ಜಾರಿಗೊಳಿಸಲು ಸಲಹೆ ನೀಡಲಾಗುವುದು ಎಂದೂ ಅಶೋಕ ಹೇಳಿದರು.

ಅನಗತ್ಯ ಹುದ್ದೆಗಳನ್ನು ರದ್ದು ಮಾಡುವ ಬಗ್ಗೆ ಅಧಿಕಾರಿಗಳ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಅದಕ್ಕೆ ಸೊಪ್ಪು ಹಾಕುವ ಪ್ರಶ್ನೆಯೇ ಇಲ್ಲ. ಸರ್ಕಾರದ ಹೊರೆ ತಗ್ಗಿಸುವುದು, ಎಲ್ಲ ಸಿಬ್ಬಂದಿ ಮತ್ತು ನೌಕರರಿಗೂ ಕೆಲಸ ಇರಬೇಕು. ಕೆಲಸ ಮಾಡದೇ ಯಾರೂ ಕೂರಬಾರದು ಎಂದು ಅವರು ಹೇಳಿದರು.

ಬಾಬು ಜಗಜೀವನ್ ರಾಂ ಜನ್ಮದಿನಾಚರಣೆಯಲ್ಲಿ ಗೊಂದಲ ಸೃಷ್ಟಿ

ಆದಿ ಜಾಂಬವ ಮುಖಂಡರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಉಪಪ್ರಧಾನಿ ಬಾಬು ಜಗಜೀವನ್ ರಾಂ ಅವರ ಘನತೆಗೆ ತಕ್ಕಂತೆ ಜನ್ಮದಿನಾಚರಣೆ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಿಲ್ಲ ಎಂದು ಆರೋಪಿಸಿ ಆದಿಜಾಂಬವ ಸಂಘಟನೆಯ ಮುಖಂಡರು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದ ವೇಳೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕಾರ್ಯಕ್ರಮದಲ್ಲಿ ಗೊಂದಲ ಉಂಟಾಯಿತು.

'ಜಗಜೀವನ್ ರಾಂ ಅವರು ದೇಶಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಹಸಿರು ಕ್ರಾಂತಿಗೆ ಕಾರಣರೂ ಆಗಿದ್ದಾರೆ. ಆದರೆ, ಬ್ಯಾಂಕ್ವೆಟ್ ಹಾಲ್‌ನಲ್ಲಿ ಜನ ಬಂದಿಲ್ಲ. ಕಾರ್ಯಕ್ರಮವನ್ನು ಸಮರ್ಪಕವಾಗಿ ಸಂಘಟಿಸದೇ ಇರುವುದೇ ಕಾರಣ' ಎಂದು ಮುಖಂಡರು ದೂರಿದರು. ಪೊಲೀಸರು ಮಧ್ಯ ಪ್ರವೇಶಿಸಿ ಮುಖಂಡರನ್ನು ಸಮಾಧಾನಪಡಿಸಿದರು.

'ಮಾದಿಗ ಸಮುದಾಯಕ್ಕೆ ನ್ಯಾಯ ಸಿಗುತ್ತಿಲ್ಲ. ಸರ್ಕಾರದ ಯಾವುದೇ ಯೋಜನೆಗಳೂ ಮಾದಿಗ ಸಮುದಾಯಕ್ಕೆ ತಲುಪುತ್ತಿಲ್ಲ' ಎಂದು ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭಾಷಣ ಮಾಡುವಾಗ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. 'ನಿಮ್ಮ ಅಹವಾಲು ಸ್ವೀಕರಿಸಿ, ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸಲಾಗುವುದು' ಎಂದು ಬೊಮ್ಮಾಯಿ ಭರವಸೆ ನೀಡಿದರು.

ಮಾದಿಗ ಸಮುದಾಯಕ್ಕೆ ಶೇ 6 ಮೀಸಲು, ದಲಿತ ಮುಖಂಡರ ಮೇಲಿನ ಮೊಕದ್ದಮೆ ವಾಪಸ್ ಪಡೆಯುವುದು, ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಮುಖಂಡರು ₹1000 ಕೋಟಿ ಅನುದಾನದ ಬೇಡಿಕೆ ಸಲ್ಲಿಸಿದರು.



ಬೈಕ್ ವಿತರಣೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗಾಗಿ ಖರೀದಿಸಿದ್ದ 100 ರಾಯಲ್ ಎನ್‌ಫೀಲ್ಡ್ ಬೈಕ್‌ಗಳನ್ನು ಸಿಬ್ಬಂದಿಗಳಿಗೆ ಮಂಗಳವಾರ ವಿತರಿಸಲಾಯಿತು. ವಿಧಾನಸೌಧ ಎದುರು ಜರುಗಿದ ಕಾರ್ಯಕ್ರಮದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಹಾಜರಿದ್ದರು ಪ್ರಜಾವಾಣಿ ಚಿತ್ರ

'ಸವ್ಯಸಾಚಿ' ಪುಸ್ತಕ ಬಿಡುಗಡೆ 10ಕ್ಕೆ

ಬೆಂಗಳೂರು: ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ನೌಕರರ ಒಕ್ಕೂಟವು ಶಾಸಕ ಜಿ.ಪರಮೇಶ್ವರ ಅವರ ಕುರಿತು ಪ್ರೊ. ಮಾದೇವ್ ಭರಣಿ ಅವರ ಸಂಪಾದಿತ 'ಸವ್ಯಸಾಚಿ' ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಆವರಣದಲ್ಲಿ ಇದೇ 10ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಂ.ಜಡ್.ಕುರಿಯನ್, 'ಕಾರ್ಯಕ್ರಮವನ್ನು ಇಂಡೋ ಶ್ರೀಲಂಕಾ ಇಂಟರ್‌ನ್ಯಾಷನಲ್ ಬುದ್ಧಿಸ್ಟ್ ಅಸೋಸಿಯೇಷನ್ ಅಧ್ಯಕ್ಷರಾದ ಕೆ.ಸಿರಿ ಸುಮೇಧಾ ಥೇರಾ ಉದ್ಘಾಟಿಸಲಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಪುಸ್ತಕ ಬಿಡುಗಡೆ ಮಾಡಲಿದ್ದಾರೆ' ಎಂದರು.

'ಬೆಳಿಗ್ಗೆ 8.30ರಿಂದ ಸಂಗೀತಾ ಕಟ್ಟಿ ಮತ್ತು ಬಳಗದಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಏ.9ರಂದು ಸಂಜೆ 6.30ರಿಂದ ಜನಕಥಾ ಕೀರ್ತನ ಹಾಗೂ ಗಾಯಕ ಕೆಂಕೆರೆ ಮಲ್ಲಿಕಾರ್ಜುನ ಅವರಿಂದ 'ಜಾನಪದ ಝೇಂಕಾರ' ಗಾಯನ ನಡೆಯಲಿದೆ' ಎಂದೂ ಹೇಳಿದರು.

ಕಳ್ಳತನಕ್ಕೆ ಯತ್ನ: ಆರೋಪಿ ಬಂಧನ

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯ ಅಂಗಡಿಯೊಂದಕ್ಕೆ ನುಗ್ಗಿ ಲಾಕರ್ ಕಳ್ಳತನ ಮಾಡಲು ಯತ್ನಿಸಿದ್ದ ಆರೋಪದಡಿ ರೋಹಿತ್ (21) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಅಧ್ಯಯನ ತಂಡ ಕಳುಹಿಸಲು ಕೇಂದ್ರಕ್ಕೆ ಮನವಿ

'ಬೆಂಗಳೂರಿಗೆ ಕುಡಿಯುವ ನೀರು ಕೊಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಕರ್ನಾಟಕ ಸೇರಿದಂತೆ ಕಾವೇರಿ ಕಣಿವೆ ವ್ಯಾಪ್ತಿಯ 3 ರಾಜ್ಯಗಳಿಗೆ ಅಧ್ಯಯನ ತಂಡವನ್ನು ಕಳಿಸಿ, ವಾಸ್ತವಾಂಶದ ವರದಿ ತರಿಸಿಕೊಳ್ಳಬೇಕು ಎಂದು ಜೆಡಿಎಸ್ ಸದಸ್ಯ ಎಚ್.ಡಿ. ದೇವೇಗೌಡ ಕೋರಿದರು.

ರಾಜ್ಯಸಭೆಯಲ್ಲಿ ಮಂಗಳವಾರ ಶೂನ್ಯವೇಳೆ ಈ ವಿಷಯ ಪ್ರಸ್ತಾಪಿಸಿದ ಅವರು, ಕುಡಿಯುವ ನೀರಿಗಾಗಿ ಬೆಂಗಳೂರು ನಗರದ ಜನತೆ ಭಿಕ್ಷೆ ಬೇಡುವ ಸ್ಥಿತಿಗೆ ತಲುಪಿರುವುದು ದುರದೃಷ್ಟಕರ ಹಾಗೂ ಅತ್ಯಂತ ನೋವಿ ಸಂಗತಿ ಎಂದರು.

'ಕಾವೇರಿ ಜಲವಿವಾದ ನ್ಯಾಯಮಂಡಳಿಯಿಂದ ಕರ್ನಾಟಕಕ್ಕೆ ಸಂಪೂರ್ಣ ನ್ಯಾಯ ದೊರೆತಿಲ್ಲ. ಅಂದಾಜು 1.30 ಕೋಟಿ ಜನಸಂಖ್ಯೆ ಹೊಂದಿರುವ ರಾಜಧಾನಿ ಬೆಂಗಳೂರಿಗೆ ಕೇವಲ 4.75 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಿರುವುದು ವಿಷಾದನೀಯ' ಎಂದರು.

'ಕಾವೇರಿ ಕಣಿವೆ ವ್ಯಾಪ್ತಿಯಲ್ಲಿ ಯಾವುದೇ ಜಲಾಶಯ ನಿರ್ಮಿಸುವಂತೆ ಕೋರುವುದಿಲ್ಲ. ಬದಲಿಗೆ, ಬೆಂಗಳೂರು ನಗರದ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸುವತ್ತ ಸರ್ಕಾರ ಮುಂದಾಗಬೇಕು' ಎಂದು ಅವರು ಮನವಿ ಮಾಡಿದರು.

'ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ಕರ್ನಾಟಕಕ್ಕೆ ಕಳೆದ 200 ವರ್ಷಗಳಿಂದ ಎಷ್ಟು ಪ್ರಮಾಣದ ಅನ್ಯಾಯ ಆಗಿದೆ ಎಂಬ ಕುರಿತು ಸದನದಲ್ಲಿ ಕೂಲಂಕುಷವಾಗಿ ಪ್ರಸ್ತಾಪಿಸಬಲ್ಲೆ. ಕುಡಿಯುವ ನೀರಿನ ಅತಿಯಾದ ಸಮಸ್ಯೆ ಕರ್ನಾಟಕದಾದ್ಯಂತ ಇದೆ. ಆದರೆ, ಕಡೆಯ ಪಕ್ಷ ಬೆಂಗಳೂರು ನಗರಕ್ಕೆ ಅಗತ್ಯ ಪ್ರಮಾಣದ ನೀರನ್ನು ಹಂಚಿಕೆ ಮಾಡಲು ಪಕ್ಷಭೇದ ಮರೆತು ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

ಡೆಮು ಬದಲಿಗೆ 16 ಬೋಗಿಗಳ ಮೆಮು • ಅರಸೀಕೆರೆ– ಚನ್ನಪಟ್ಟಣ ನಡುವೆ ರೈಲು

ತುಮಕೂರು–ಬೆಂಗಳೂರು: 8ರಿಂದ ಮೆಮು ರೈಲು

ತುಮಕೂರು: ಬೆಂಗಳೂರು–ತುಮಕೂರು ನಡುವೆ ವಿದ್ಯುದೀಕರಣ ಕೆಲಸ ಪೂರ್ಣಗೊಂಡಿದ್ದು, ಈ ಎರಡು ನಗರಗಳ ನಡುವೆ ಡೆಮು ರೈಲಿಗೆ ಬದಲಾಗಿ ಮೆಮು ರೈಲು ಸಂಚಾರ ಏ. 8ರಿಂದ ಆರಂಭವಾಗಲಿದೆ.

ಈವರೆಗೆ ತುಮಕೂರು–ಯಶವಂತಪುರ ಮಧ್ಯೆ 8 ಬೋಗಿಗಳ ಡೆಮು ರೈಲು ಸಂಚರಿಸುತ್ತಿದ್ದು, ಈಗ ಮೆಮು ರೈಲು ಸಂಚರಿಸಲಿದೆ. ನಗರದಿಂದ ಬೆಳಿಗ್ಗೆ 8 ಗಂಟೆಗೆ ಹೊರಡುತ್ತಿದ್ದ ಡೆಮು ರೈಲಿಗೆ ಬದಲಾಗಿ 16 ಬೋಗಿಗಳ ಮೆಮು ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ತುಮಕೂರು ಕಡೆಗೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ನಿಲ್ದಾಣದಿಂದ ಬೆಳಿಗ್ಗೆ 9.30ಕ್ಕೆ ಹೊಸ ರೈಲು ಸಂಚಾರ ಆರಂಭಗೊಳ್ಳಲಿದ್ದು, 11 ಗಂಟೆಗೆ ತುಮಕೂರು ತಲುಪಲಿದೆ. ಇದೇ ರೈಲು ತುಮಕೂರಿನಿಂದ ಬೆಳಗ್ಗೆ 11.15ಕ್ಕೆ ಹೊರಟು ಬೆಂಗಳೂರಿನ ಕೆಎಸ್‌ಆರ್ ನಿಲ್ದಾಣವನ್ನು 1.25ಕ್ಕೆ ತಲುಪಲಿದೆ. ಕೆಎಸ್‌ಆರ್ ನಿಲ್ದಾಣದಿಂದ ಮಧ್ಯಾಹ್ನ 1.50ಕ್ಕೆ ಹೊರಟು ತುಮಕೂರು ನಗರವನ್ನು ಮಧ್ಯಾಹ್ನ 3.20ಕ್ಕೆ ತಲುಪಲಿದೆ. ತುಮಕೂರಿನಿಂದ ಮಧ್ಯಾಹ್ನ 3.50ಕ್ಕೆ ಹೊರಟು, ಕೆಎಸ್‌ಆರ್ ರೈಲು ನಿಲ್ದಾಣಕ್ಕೆ 5.25ಕ್ಕೆ ಸೇರಲಿದೆ.

ಅರಸೀಕೆರೆಗೂ ರೈಲು: ಬೆಂಗಳೂರು– ಅರಸೀಕೆರೆ ಮಧ್ಯೆ ಸಂಚರಿಸುತ್ತಿದ್ದ ಎಂಟು ಬೋಗಿಗಳ ಡೆಮು ರೈಲಿಗೆ ಬದಲಾಗಿ 17 ಐಸಿಎಫ್ ಕೋಚ್‌ಗಳ ಸಾಂಪ್ರದಾಯಿಕ ರೈಲುಗಳ ಸಂಚಾರ ಕೂಡಾ ಏ. 8ರಿಂದ ಪ್ರಾರಂಭವಾಗಲಿದೆ. ಈವರೆಗೂ ಅರಸೀಕೆರೆಯಿಂದ ಕೆಎಸ್‌ಆರ್ ವರೆಗೆ ಮಾತ್ರ ಸಂಚರಿಸುತ್ತಿದ್ದ ಈ ರೈಲನ್ನು ಚನ್ನಪಟ್ಟಣದವರೆಗೆ ವಿಸ್ತರಿಸಲಾಗಿದೆ. ಇದರಿಂದ ಉದ್ಯೋಗಕ್ಕಾಗಿ ಕೆಂಗೇರಿ ಕಡೆಗೆ ಸಂಚರಿಸುತ್ತಿದ್ದ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಇದೇ ರೈಲು ಸಂಜೆ 4.50ಕ್ಕೆ ಚೆನ್ನಪಟ್ಟಣದಿಂದ ವಾಪಸ್ಸಾಗಲಿದ್ದು, ಅರಸೀಕೆರೆ ತಲುಪಲಿದೆ.

ಅರಸೀಕೆರೆ– ತುಮಕೂರು– ಬೆಂಗಳೂರು ನಡುವೆ ಡೆಮು ರೈಲು ಸಂಚರಿಸುತ್ತಿದ್ದು, ಅಧಿಕ ಜನ ದಟ್ಟಣೆಯಿಂದಾಗಿ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿತ್ತು. ಈಗ ಹೆಚ್ಚಿನ ಬೋಗಿಗಳ ರೈಲು ಆರಂಭದಿಂದ ಬೆಂಗಳೂರಿಗೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ತುಮಕೂರು– ಬೆಂಗಳೂರು ರೈಲ್ವೆ ಪ್ರಯಾಣಿಕರ ವೇದಿಕೆ ತಿಳಿಸಿದೆ.

ನಗರದಲ್ಲಿ ಇಂದು

'ಶಾಸನಗಳ ಅಧ್ಯಯನ ಮತ್ತು ಸಂರಕ್ಷಣೆಯಲ್ಲಿ ಆಧುನಿಕ ವಿಧಾನಗಳು' ಕಮ್ಮಟ: ಬೆಳಿಗ್ಗೆ 10ಕ್ಕೆ ಉದ್ಘಾಟನೆ, ಅತಿಥಿಗಳು–ಬಿಪಿನ್ ಚಂದ್ರ ನೇಗಿ, ವಿ.ನಾಗರಾಜ್, ಮಾತನಾಡುವವರು–ಪಿ.ವಿ.ಕೃಷ್ಣಮೂರ್ತಿ, ಪಿ.ಎಲ್.ಉದಯ್ ಕುಮಾರ್, ಸಂಜೆ 4ಕ್ಕೆ ಸಮಾರೋಪ, ಅತಿಥಿಗಳು–ಗೋಮತಿ ದೇವಿ, ಆಯೋಜನೆ–ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಮಿಥಿಕ್ ಸೊಸೈಟಿ ಹಾಗೂ ಭಾರತೀಯ ಇತಿಹಾಸ ಸಂಶೋಧನಾ ಪರಿಷತ್, ಸ್ಥಳ–ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಣೆ ಮತ್ತು ಚಿನ್ನದ ಪದಕ ಪ್ರದಾನ: ಅತಿಥಿ–ಸಿ.ಎ.ಕಿಶೋರ್, ಆಯೋಜನೆ ಮತ್ತು ಸ್ಥಳ–ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಾತೃಶ್ರೀ ಸುಶೀಲಾ ದೇವಿ ಆರ್.ಮಾನೆ ಸಭಾಂಗಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಸಂದೀಪ್ ನಾರಾಯಣ್, ಎಲ್.ರಾಮಕೃಷ್ಣನ್, ಜಯಚಂದ್ರ ರಾವ್, ಜಿ.ಗುರುಪ್ರಸನ್ನ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ



ಸಂದೀಪ್ ನಾರಾಯಣ್

ರಾಜ್ಯಮಟ್ಟದ ಸಂಜೀವಿನಿ ಸರಸ್ ಮೇಳದ ಕರ್ಟನ್ ರೈಸರ್: ಉದ್ಘಾಟನೆ–ಕೌಶಲಾಭಿವೃದ್ಧಿ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ–ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಸ್ಥಳ–ದಿ ಕ್ಯಾಪಿಟಲ್ ಹೋಟೆಲ್, ಮಧ್ಯಾಹ್ನ 12

ದೇವರ ದಾಸಿಮಯ್ಯ ಜಯಂತಿ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಭಾವಚಿತ್ರಕ್ಕೆ ಮಾಲಾರ್ಪಣೆ–ಸಚಿವ ವಿ.ಸುನಿಲ್ ಕುಮಾರ್, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5

ಸ್ವದೇಶಿ ಮೇಳ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಶೀರ್ವಚನ–ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು–ಹರೀಶ ಹಂದೆ, ಸೌಮ್ಯಾರೆಡ್ಡಿ, ಭಾಷಣ–ಬಿ.ಎಂ. ಕುಮಾರಸ್ವಾಮಿ, ಆಯೋಜನೆ–ಸ್ವದೇಶಿ ಜಾಗರಣ ಮಂಚ್, ಸ್ಥಳ–ಚಂದ್ರಗುಪ್ತ ಮೌರ್ಯ ಆಟದ ಮೈದಾನ, ಜಯನಗರ, ಸಂಜೆ 5.30

ವಸಂತ ನವರಾತ್ರಿ ಶ್ರೀರಾಮೋತ್ಸವ: ಸೀತಾರಾಮ್ ಮುನಿಕೋಟೆ ಅವರಿಂದ ಹರಿಕಥೆ, ಆಯೋಜನೆ ಮತ್ತು ಸ್ಥಳ–ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30ರಿಂದ

ಮುತ್ಯಾಲಮ್ಮ ದೇವಿ ರಥೋತ್ಸವ: ಆಯೋಜನೆ–ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಸ್ಥಳ–ಮುತ್ಯಾಲಮ್ಮ ಕೆ.ಬೀದಿ, ಸೆಪ್ಪಿಂಗ್ಸ್ ರಸ್ತೆ, ಬೆಳಿಗ್ಗೆ 9ರಿಂದ ವಿವಿಧ ಕಾರ್ಯಕ್ರಮಗಳು

ಶ್ರೀರಾಮ ವೇಣುಗೋಪಾಲ ಕೃಷ್ಣಸ್ವಾಮಿ ಬ್ರಹ್ಮರಥೋತ್ಸವ: ಧ್ವಜಾರೋಹಣ, ಆಯೋಜನೆ–ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟ್, ಸ್ಥಳ–ಬ್ಯಾಟರಾಯನಪುರ, ಮೈಸೂರು ರಸ್ತೆ, ರಾತ್ರಿ 7ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

'ಯಥಾ ಪ್ರಕಾರ' ನಾಟಕ ನಾಟಕ ಪ್ರದರ್ಶನ: ನಿರ್ದೇಶನ–ಭೀಷ್ಮ ರಾಮಯ್ಯ, ಆಯೋಜನೆ–ಅಂತರಂಗ ಬಹಿರಂಗ, ಸ್ಥಳ–ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ರಾಜಕಾಲುವೆ: ಬಿಡುಗಡೆ ಆಗಲೇ ಇಲ್ಲ ಅನುದಾನ

ರಾಜಧಾನಿ ಒಡಲದನಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ₹1,560 ಕೋಟಿ ಮೊತ್ತದಲ್ಲಿ ರಾಜಕಾಲುವೆಗಳ ಅಭಿವೃದ್ಧಿ ಮಾಡುವ ಪ್ರಸ್ತಾವನೆ ನನೆಗುದಿಗೆ ಬಿದ್ದಿದ್ದು, ಮತ್ತೆ ಮಳೆ ಶುರುವಾದರೆ ಮನೆಗಳಿಗೆ ನೀರು ನುಗ್ಗುವ ಆತಂಕ ನಗರದ ಜನರನ್ನು ಕಾಡುತ್ತಿದೆ.

ನಗರದಲ್ಲಿ 842 ಕಿ.ಮೀ. ಉದ್ದದ ನಾಲ್ಕು ಪ್ರಮುಖ ರಾಜಕಾಲುವೆಗಳು ಮತ್ತು ದ್ವಿತೀಯ ಹಂತದ 97 ಕಿ.ಮೀ ರಾಜಕಾಲುವೆಗಳು ಇವೆ. 2021ರ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ತಗ್ಗು ಪ್ರದೇಶಗಳು ಜಲಾವೃತಗೊಂಡು ಪ್ರವಾಹ ಉಂಟಾಗಿತ್ತು. ಹಲವೆಡೆ ರಾಜಕಾಲುವೆಗಳ ತಡೆಗೋಡೆಗಳು ಶಿಥಿಲಗೊಂಡಿದ್ದವು.

ಆ ಸಂದರ್ಭದಲ್ಲಿ ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜಕಾಲುವೆಗಳ ಅಭಿವೃದ್ಧಿಗೆ ₹1,500 ಕೋಟಿ ಬಿಡುಗಡೆ ಮಾಡುವ ಭರವಸೆ ನೀಡಿದ್ದರು. ಪ್ರಥಮ ಹಂತದ ರಾಜಕಾಲುವೆಗಳು (60.82 ಕಿ.ಮೀ) ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳನ್ನು (97.10 ಕಿ.ಮೀ) ಅಭಿವೃದ್ಧಿಪಡಿಸಲು ಒಟ್ಟು 292 ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ ಎಂದು ಬಿಬಿಎಂಪಿ ಕ್ರಿಯಾ ಯೋಜನೆ ಸಿದ್ಧಪಡಿಸಿದೆ. ಆದರೆ, ಈವರೆಗೆ ಬಿಡಿಗಾಸು ಕೂಡ ಸರ್ಕಾರ ಬಿಡುಗಡೆಯಾಗಿಲ್ಲ. ಈ ಕುರಿತು ನಗರದ ಶಾಸಕರು 'ಪ್ರಜಾವಾಣಿ' ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.



ಕಳೆದ ನವೆಂಬರ್‌ನಲ್ಲಿ ಯಲಹಂಕದ ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್‌ಗೆ ನುಗ್ಗಿದ್ದ ಮಳೆ ನೀರು

'ಇಡೀ ಬೆಂಗಳೂರು ಸಮಸ್ಯೆಗೆ ಸಿಲುಕಲಿದೆ'



ರಾಜಕಾಲುವೆ ಅಭಿವೃದ್ಧಿ ಬಗ್ಗೆ ಮೂರು ವರ್ಷಗಳಿಂದ ಮನವಿ ಮಾಡಿದ್ದರೂ, ಸರ್ಕಾರ ತಲೆಕೆಡಿಸಿಕೊಂಡಿಲ್ಲ. ಮಳೆ ಬಂದರೆ ಬಡವರ ಮನೆಗಳಿಗೆ ನೀರು ನುಗ್ಗುತ್ತದೆ. ಮನೆ ಬಿದ್ದಾಗ ಜೆಸಿಬಿ ಸಮೇತ ಅಧಿಕಾರಿಗಳು ಬಂದು ನಿಲ್ಲುತ್ತಾರೆ. ಬೇಸಿಗೆ ಸಮಯದಲ್ಲಿ ರಾಜಕಾಲುವೆ ಸರಿಪಡಿಸಿದರೆ ಮಳೆಗಾಲದಲ್ಲಿ ಜನ ನೆಮ್ಮದಿಯಿಂದ ನಿದ್ರೆ ಮಾಡಬಹುದು. ಬೆಂಗಳೂರಿನಲ್ಲಿ ಇಷ್ಟು ಹಾನಿಯಾಗಿದ್ದರೂ ಸರ್ಕಾರ ಕಣ್ತೆರೆದುಕೊಂಡಿಲ್ಲ. ದಾಸರಹಳ್ಳಿ ಕ್ಷೇತ್ರ ಮಾತ್ರವಲ್ಲ, ಇಡೀ ಬೆಂಗಳೂರಿನಲ್ಲೇ ಸಮಸ್ಯೆ ಇದೆ. ವಾತಾವರಣ ಗಮನಿಸಿದರೆ ಯಾವಾಗ ಮಳೆ ಸುರಿಯುತ್ತದೋ ಗೊತ್ತಿಲ್ಲ. ಮಳೆ ಬರಲಿದೆ ಎಂಬುದನ್ನು ನೆನಪಿಸಿಕೊಂಡರೇ ಭಯವಾಗುತ್ತಿದೆ. ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಿ ರಾಜಕಾಲುವೆ ಅಭಿವೃದ್ಧಿಪಡಿಸಬೇಕು.

ಆರ್.ಮಂಜುನಾಥ್, ಶಾಸಕ(ದಾಸರಹಳ್ಳಿ)

'ಮಳೆ ಹಾನಿಯಾದರೆ ಸರ್ಕಾರವೇ ಹೊಣೆ'



ಹಿಂದಿನ ಮಳೆಗಾಲದಲ್ಲಿ ಮಾಡಿದ ಘೋಷಣೆ ಮಾತಿನಲ್ಲೇ ಉಳಿದಿದೆ. ಬೆಂಗಳೂರಿಗೆ ಬಿಜೆಪಿ ವಿಶೇಷ ಕೊಡುಗೆ ಏನಾದರೂ ನೀಡಿದೆಯೇ ಎಂದು ನೋಡಿದರೆ ಏನು ಇಲ್ಲ. 'ಹಳೇ ಕಲ್ಲು ಹೊಸ ಬಿಲ್ಲು' ಎಂಬುದನ್ನು ಬಿಟ್ಟರೆ ಯಾವ ಸಮಸ್ಯೆಗೂ ಪರಿಹಾರ ಸಿಕ್ಕಿಲ್ಲ. ಬೆಂಗಳೂರಿಗೆ ಹೊಸ ರೂಪ ಕೊಡುವ ಪ್ರಯತ್ನವೂ ಇಲ್ಲ. ರಾಜಕಾಲುವೆ ಅಷ್ಟೆಲ್ಲಾ ಹಾಳಾಗಿತ್ತು. ದುರಸ್ತಿ ಬಗ್ಗೆ ಮಾತನಾಡಿದವರು ಈವರೆಗೆ ಕಿಂಚಿತ್ತು ಕೆಲಸವನ್ನೂ ಶುರು ಮಾಡಿಲ್ಲ. ಮಾತಿನಲ್ಲಿ ಮರುಳು ಮಾಡುವುದನ್ನು ಬಿಜೆಪಿಯವರು ಚೆನ್ನಾಗಿ ಕಲಿತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಸರ್ಕಾರ ಏನೇನೂ ಕೆಲಸ ಮಾಡಿಲ್ಲ. ಈ ವರ್ಷ ಮತ್ತೆ ಅತಿವೃಷ್ಟಿಯಿಂದ ಹಾನಿಯಾದರೆ ಅದಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ.

ಕೃಷ್ಣ ಬೈರೇಗೌಡ, ಶಾಸಕ(ಬ್ಯಾಟರಾಯನಪುರ)

'ಮಳೆ ಬಂದರೆ ಮತ್ತೆ ಸಮಸ್ಯೆ'



ಪ್ರವಾಹ ಸಂದರ್ಭದಲ್ಲಿ ನಗರ ಸುತ್ತಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜಕಾಲುವೆ ಅಭಿವೃದ್ಧಿ ಬಗ್ಗೆ ಪ್ರಸ್ತಾಪಿಸಿ ಹಣ ಬಿಡುಗಡೆ ಮಾಡುವುದಾಗಿ ಹೇಳಿದ್ದರು. ಈವರೆಗೆ ಅನುದಾನ ಬಿಡುಗಡೆ ಮಾಡಿಯೇ ಇಲ್ಲ. ಈಗ ಮತ್ತೆ ಮಳೆ ಆರಂಭವಾಗುತ್ತಿದ್ದು, ಜೋರು ಮಳೆ ಬಂದರೆ ಸಮಸ್ಯೆ ಎದುರಿಸಬೇಕಾಗುತ್ತದೆ. ಈ ಬಗ್ಗೆ ಸದನದಲ್ಲೂ ಪ್ರಸ್ತಾಪಿಸಿದ್ದೆ. ಎಷ್ಟೇ ಮಾತನಾಡಿದರೂ ಜನಪರ ಕೆಲಸಗಳ ಬಗ್ಗೆ ಬಿಜೆಪಿ ಆಸಕ್ತಿ ವಹಿಸುವುದಿಲ್ಲ. ವಿಷಯಾಂತರ ಮಾಡಿ ರಾಜಕೀಯ ಮಾಡಿಕೊಂಡೇ ಕಾಲಹರಣ ಮಾಡುತ್ತಿದ್ದಾರೆ. ಈ ರೀತಿಯ ರಾಜಕಾರಣ ಹೆಚ್ಚು ದಿನ ನಡೆಯುವುದಿಲ್ಲ.

ರಾಮಲಿಂಗಾರೆಡ್ಡಿ, ಶಾಸಕ(ಬಿಟಿಎಂ ಲೇಔಟ್)

ರಸ್ತೆ ದುಃಸ್ಥಿತಿ: ವಲಯವಾರು ಸಭೆಗೆ ಹೈಕೋರ್ಟ್ ಆದೇಶ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚುವ ಅಥವಾ ದುರಸ್ತಿ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ವಲಯವಾರು ಸಭೆಗಳನ್ನು ನಡೆಸಿ, ಕ್ರಿಯಾ ಯೋಜನೆ ರೂಪಿಸಿ ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಹೈಕೋರ್ಟ್ ಬಿಬಿಎಂಪಿಗೆ ಆದೇಶಿಸಿದೆ.

ಬೆಂಗಳೂರಿನ ರಸ್ತೆ ದುಸ್ಥಿತಿ ಕುರಿತು ಕೋರಮಂಗಲದ ವಿಜಯ್ ಮೆನನ್ 2015ರಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ 'ಅಮೆರಿಕನ್ ರೋಡ್ ಟೆಕ್ನಾಲಜಿ ಸಲ್ಯೂಷನ್ಸ್ ಸಂಸ್ಥೆ' ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ನಮ್ಮ ಕಂಪನಿ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡುತ್ತಿದೆ. ಸಿಬಿಡಿ ಪ್ರದೇಶವಲ್ಲದೆ ಇತರೆ ಪ್ರದೇಶಗಳಲ್ಲೂ ರಸ್ತೆ ಗುಂಡಿಗಳನ್ನು ಮುಚ್ಚಲು ಕಂಪನಿ ಸಿದ್ಧವಿದೆ. ಸಂಸ್ಥೆಗೆ ಸದ್ಯ ಸಿಬಿಡಿ ಪ್ರದೇಶದಲ್ಲಿ ಕೇವಲ 182 ಕಿ.ಮೀ ರಸ್ತೆ ಗುಂಡಿ ಮುಚ್ಚುವುದಕ್ಕೆ ಗುತ್ತಿಗೆ ಕೊಡಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪಾಲಿಕೆ ಪರ ವಕೀಲ ವಿ.ಶ್ರೀನಿಧಿ, 'ಕೇಂದ್ರ ಪ್ರದೇಶದಲ್ಲಿ 215 ಕಿ.ಮೀ ಗುತ್ತಿಗೆ ನೀಡಲು ಟೆಂಡರ್ ಕರೆಯಲಾಗಿದೆ. ನಂತರ ವಲಯವಾರು ಟೆಂಡರ್ ನೀಡಿ ಎಲ್ಲೆಡೆ ಆಧುನಿಕ ತಂತ್ರಜ್ಞಾನ ಬಳಸಿ ರಸ್ತೆ ಗುಂಡಿ ಮುಚ್ಚಲಾಗುವುದು ಮತ್ತು ದುರಸ್ತಿ ಮಾಡುವ ಕೆಲಸ ಮಾಡಲಾಗುವುದು' ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪಾಲಿಕೆ ತನ್ನ ವ್ಯಾಪ್ತಿಯ ಎಂಟೂ ವಲಯಗಳಲ್ಲಿ ರಸ್ತೆ ಅಗೆಯುವ ಏಜೆನ್ಸಿಗಳನ್ನು ಗುರುತಿಸಿ ಅವುಗಳೊಂದಿಗೆ ಬಿಬಿಎಂಪಿ ಅಧಿಕಾರಿಗಳು ಸಭೆ ನಡೆಸಬೇಕು. ರಸ್ತೆಗಳ ಜಂಟಿ ಸರ್ವೆ ನಡೆಸಿ ಕ್ರಿಯಾ ಯೋಜನೆ ರೂಪಿಸಬೇಕು' ಎಂದು ಆದೇಶಿಸಿತು.

'ಅಮೆರಿಕನ್ ರೋಡ್ ಟೆಕ್ನಾಲಜಿ ಸಲ್ಯೂಷನ್ಸ್ ಸಂಸ್ಥೆ ರಸ್ತೆ ಗುಂಡಿ ಮುಚ್ಚಲು ಆಸಕ್ತಿ ವ್ಯಕ್ತಪಡಿಸಿದೆ. ಆದ್ದರಿಂದ, ಈ ಸಂಸ್ಥೆ ಜೊತೆ ಸೇರಿ ಅಧಿಕಾರಿಗಳು ಯೋಜನೆ ರೂಪಿಸಬೇಕು. ಸಮೀಕ್ಷಾ ಕಾರ್ಯದಲ್ಲಿ ಜಲಮಂಡಳಿ, ಗೇಲ್ ಸೇರಿದಂತೆ ಯಾವ ಸಂಸ್ಥೆಗಳು ಕಾಮಗಾರಿ ಕೈಗೊಂಡಿವೆಯೋ ಅವುಗಳನ್ನೂ ತೊಡಗಿಸಿಕೊಳ್ಳಬೇಕು' ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಹೈಕೋರ್ಟ್ ಕಟಕಟೆಯಲ್ಲಿ ಪಿ.ಎಂ. ಮುನಿರಾಜು ಗೌಡ ಸಾಕ್ಷಿ

'ಮುನಿರತ್ನ ಸೀರೆ ಹಂಚಿದ್ದನ್ನು ಕಂಡವರಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುನಿರತ್ನ (ಮುನಿರತ್ನಂ ಸುಬ್ರಮಣ್ಯ ನಾಯ್ಡು) ಅವರು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಮಹಿಳಾ ಮತದಾರರಿಗೆ ಸೀರೆಗಳನ್ನು ಹಂಚಿ ಅವರ ಅಸಲಿ ವೋಟರ್ ಕಾರ್ಡುಗಳನ್ನು ಸಂಗ್ರಹಿಸಿ ಇಟ್ಟುಕೊಂಡ ಘಟನೆಯನ್ನು ಪ್ರತ್ಯಕ್ಷವಾಗಿ ಕಂಡವರು ನನಗೆ ತಿಳಿಸಿರುತ್ತಾರೆ...

ಈಗಿನ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿರುವ ಮುನಿರತ್ನ ಅವರು 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಅಂದು ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಯಗೊಂಡಿದ್ದ ಪಿ.ಎಂ. ಮುನಿರಾಜು ಗೌಡ, ಹೈಕೋರ್ಟ್‌ನ ಸಾಕ್ಷಿ ಕಟಕಟೆಯಲ್ಲಿ ನಿಂತು ಮುಖ್ಯ ವಿಚಾರಣೆಯ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ.

'ಮುನಿರತ್ನ ಅವರು 15ನೇ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗೆಲುವು ಸಾಧಿಸುವಲ್ಲಿ ಹಲವಾರು ಚುನಾವಣಾ ಅಕ್ರಮಗಳನ್ನು ಎಸಗಿರುವ ಕಾರಣ ಅವರ ಅಂದಿನ ಆಯ್ಕೆಯನ್ನು ಜನತಾ ಪ್ರತಿನಿಧಿ ಕಾಯ್ದೆ–1951ರ ಕಲಂ 123ರ ಅನುಸಾರ ಅನೂರ್ಜಿತ ಎಂದು ಸಾರಬೇಕು' ಎಂದು ಕೋರಿ ವಿಧಾನಪರಿಷತ್‌ನ ಬಿಜೆಪಿ ಸದಸ್ಯರೂ ಆಗಿರುವ ಪಿ.ಎಂ.ಮುನಿರಾಜು ಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯ ಎರಡನೇ ದಿನದ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಮುಂದುವರೆಸಿತು.

ಮುಖ್ಯಾಂಶಗಳು

- ಎರಡನೇ ದಿನದ ಸುದೀರ್ಘ ವಿಚಾರಣೆ
- ಸಾಕ್ಷಿಯಿಂದ ದೃಢೀಕೃತ ದಾಖಲೆ ಸಲ್ಲಿಕೆ
- ಇದೇ 11ಕ್ಕೆ ವಿಚಾರಣೆ ಪುನಃ ಮುಂದೂಡಿಕೆ

ಮುಖ್ಯ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್ ಅವರ ಪ್ರಶ್ನೆಗಳಿಗೆ ಉತ್ತರಿಸಿದ ಮುನಿರಾಜು ಗೌಡ, 'ಮುನಿರತ್ನ ಸೀರೆ ಹಂಚುತ್ತಿರುವ ಭಾವಚಿತ್ರಗಳನ್ನು ಅವರದೇ ಫೇಸ್‌ಬುಕ್‌ನಲ್ಲಿ ಹಾಕಿಕೊಂಡಿರುವುದನ್ನು ನಾನಿಲ್ಲಿ ಹಾಜರುಪಡಿಸುತ್ತಿದ್ದೇನೆ' ಎಂದು ದೃಢೀಕೃತ ದಾಖಲೆಗಳನ್ನು ಸಲ್ಲಿಸಿದರು.

'ಮುನಿರತ್ನ ಅವರು 2018ರ ಫೆಬ್ರುವರಿ ಮೊದಲ ವಾರದಂದು ಒಂದು ಕರಪತ್ರವನ್ನು ಮುದ್ರಿಸಿ ಆರ್‌ಆರ್‌ನಗರ ವಿಧಾನಸಭಾ ಕ್ಷೇತ್ರದ ಎಲ್ಲ ಮತದಾರರಿಗೆ ಹಂಚಿದರು. ಈ ಕರಪತ್ರದಲ್ಲಿ 11.02.2018ರಂದು ಮಹಾಶಿವರಾತ್ರಿ ಹಬ್ಬವಿದ್ದು ಅದರ ಪ್ರಯುಕ್ತ ಮಹಿಳಾ ಮತದಾರರಿಗೆ ಸೀರೆಗಳನ್ನು ಕೊಡುವುದಾಗಿ ಭರವಸೆ ನೀಡಲಾಗಿತ್ತು. ಅದರಂತೆ, 11ರಂದು ಮುನಿರತ್ನ, ಲಗ್ಗೆರೆಯ ನಾಮನಿರ್ದೇಶಿತ ಸದಸ್ಯ ಎಚ್.ಎಸ್.ಸಿದ್ದೇಗೌಡ, ಯಶವಂತಪುರದ ಬಿಬಿಎಂಪಿ ಸದಸ್ಯ ಜಿ.ಕೆ.ವೆಂಕಟೇಶ್, ಜೆ.ಪಿ.ಪಾರ್ಕ್ ವಾರ್ಡ್‌ನ ಪರಾಜಿತ ಅಭ್ಯರ್ಥಿ ಶ್ರೀಮತಿ ಸುನಂದಮ್ಮ, ಲಕ್ಷ್ಮಿದೇವಿನಗರದ ಶ್ರೀವೇಲು ನಾಯ್ಕರ್, ಜಾಲಹಳ್ಳಿ ವಾರ್ಡ್‌ನ ಶ್ರೀನಿವಾಸಮೂರ್ತಿ ಮತ್ತು ಇತರರು ನೇರವಾಗಿ ಭಾಗಿಯಾಗಿ ಮಹಿಳಾ ಮತದಾರರಿಗೆ ಸೀರೆಯನ್ನು ಹಂಚಿದರು' ಎಂದು ಮುನಿರಾಜುಗೌಡ ವಿವರಿಸಿದರು.

'ಈ ಘಟನೆಗೆ ಸಾಕ್ಷಿಯಾಗಿ ಪಿ.ಪುರುಷೋತ್ತಮ್, ಆನಂದಕುಮಾರ್, ಜಿ.ಸಂತೋಷ್‌ಕುಮಾರ್ ಮತ್ತು ಮಂಜುನಾಥ್ ಪ್ರತ್ಯಕ್ಷವಾಗಿ ಕಂಡಿರುತ್ತಾರೆ ಹಾಗೂ ಈ ಸಂಗತಿಯನ್ನು ಅವರು ನನಗೆ ತಿಳಿಸಿರುತ್ತಾರೆ' ಎಂದು ಮುನಿರಾಜುಗೌಡ ತಿಳಿಸಿದರು. ಕಲಾಪದ ಅವಧಿ ಪೂರ್ಣಗೊಂಡ ಕಾರಣ ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಲಾಗಿದೆ.

ವಾಟರ್ ಕ್ಯಾನ್, ಕುಕ್ಕರ್, ಕಿಚನ್ ತವಾ ಭರವಸೆ...!

'ಮುನಿರತ್ನ ಅವರು ಜೆ.ಪಿ.ಪಾರ್ಕ್ ಗ್ರೌಂಡ್, ಕೊಟ್ಟಿಗೆಪಾಳ್ಯ ದೇವಸ್ಥಾನ, ಜಾಲಹಳ್ಳಿ ಸರ್ಕಾರಿ ಶಾಲೆ ಮೈದಾನ, ಲಗ್ಗೆರೆ ಸ್ಕೂಲ್ ಗ್ರೌಂಡ್ ಮತ್ತು ಮಂಜುಶ್ರೀ ಕಲ್ಯಾಣ ಮಂಟಪದಲ್ಲಿ ಮಹಿಳಾ ಮತದಾರರಿಗೆ ಸೀರೆಗಳನ್ನು ಹಂಚಿದರು. ಸೀರೆಗಳನ್ನು ಹಂಚುವಾಗ ಮುನಿರತ್ನ ಮತ್ತು ಅವರ ಸಹಚರರು ಮತದಾರರಿಂದ ಒರಿಜನಲ್ ವೋಟರ್ ಐಡಿ ಕಾರ್ಡುಗಳನ್ನು ಪಡೆದುಕೊಂಡರು. ಇದನ್ನು ಪಡೆದುಕೊಳ್ಳುವಾಗ ಆದಷ್ಟು ಬೇಗ ವಾಟರ್ ಕ್ಯಾನ್, ಕುಕ್ಕರ್ ಮತ್ತು ಕಿಚನ್ ತವಾಗಳನ್ನು ನೀಡುವುದಾಗಿ ಭರವಸೆ ನೀಡಿದರು. ಈ ಕಾರಣಕ್ಕಾಗಿ ವೋಟರ್ ಐಡಿ ಕಾರ್ಡುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತಿರುವುದಾಗಿಯೂ ಮಹಿಳಾ ಮತದಾರರಿಗೆ ತಿಳಿಸಿದರು' ಎಂದು ಮುನಿರಾಜು ಗೌಡ ಸಾಕ್ಷಿ ನುಡಿದರು.

ಕಾಲೇಜು ಶಿಕ್ಷಣ ಇಲಾಖೆ ಅಧಿಸೂಚನೆ

ಪದವಿ: ಬೋಧಕರ ವರ್ಗಾವಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು, ಕ್ರೀಡಾ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರ ಪೈಕಿ, ಶೇ 15ರಷ್ಟು ಮಂದಿಯ ವರ್ಗಾವಣೆಗೆ ಅವಕಾಶ ಕಲ್ಪಿಸಿ ಕಾಲೇಜು ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದೆ.

ವರ್ಗಾವಣೆ ನಿಯಮಗಳ ಪ್ರಕಾರ ಮಂಜೂರಾದ ಒಟ್ಟು ಬೋಧಕ ಹುದ್ದೆಗಳಲ್ಲಿ ಶೇ 9ರಷ್ಟು ಕಡ್ಡಾಯ ವರ್ಗಾವಣೆ, ವಿಶೇಷ ಪ್ರಕರಣಗಳಲ್ಲಿ ಕೋರಿಕೆಯಡಿ ಶೇ 6ರಷ್ಟು (ಪತಿ-ಪತ್ನಿ ಪ್ರಕರಣಗಳಲ್ಲಿ ಶೇ 3 ಹಾಗೂ ವಿಧವೆ, ಸಿಂಗಲ್ ಪೇರೆಂಟ್, ಮಹಿಳಾ ವಿಚ್ಛೇದಿತರ ಪ್ರಕರಣ, ಅಂಗವಿಕಲರ ಪ್ರಕರಣ ಮತ್ತು ಗಂಭೀರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವ ಸಿಬ್ಬಂದಿ ಪ್ರಕರಣಗಳಲ್ಲಿ ತಲಾ ಶೇ 1) ಸೇರಿ ಒಟ್ಟು ಶೇ 15ರಷ್ಟು ಮಂದಿಯ ವರ್ಗಾವಣೆಗೆ ಅವಕಾಶ ಲಭ್ಯವಾಗಲಿದೆ. ಇದರಿಂದಾಗಿ ಸುಮಾರು 900 ಮಂದಿಗೆ ವರ್ಗಾವಣೆ ಅವಕಾಶ ಸಿಗಲಿದೆ.

> **ಕಡ್ಡಾಯ ವರ್ಗಾವಣೆಯಾದ ಬೋಧಕರ ವಲಯವಾರು, ವರ್ಗವಾರು ಪಟ್ಟಿ ಪ್ರಕಟಿಸಿದ್ದು, ವರ್ಗಾವಣೆ ಪ್ರಕ್ರಿಯೆ ಏಪ್ರಿಲ್ ತಿಂಗಳಲ್ಲಿಯೇ ಪೂರ್ಣಗೊಳ್ಳಲಿದೆ**
> **ಪಿ. ಪ್ರದೀಪ್,**
> ಆಯುಕ್ತ, ಕಾಲೇಜು ಶಿಕ್ಷಣ ಇಲಾಖೆ

'ವಿಶೇಷ ಪ್ರಕರಣಗಳಲ್ಲಿ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಏಪ್ರಿಲ್ 8 ಕೊನೆಯ ದಿನ. ಕಡ್ಡಾಯ ಮತ್ತು ವಿಶೇಷ ಪ್ರಕರಣಗಳಲ್ಲಿ ಸಿಬ್ಬಂದಿಯ ತಾತ್ಕಾಲಿಕ ವರ್ಗಾವಣೆ ಪಟ್ಟಿಯನ್ನು 13ರಂದು ಪ್ರಕಟಿಸಲಾಗುವುದು. ಈ ಪಟ್ಟಿಗೆ ಆಕ್ಷೇಪಣೆಗಳಿದ್ದರೆ 18ರ ಒಳಗೆ ಆನ್‌ಲೈನ್ ಮೂಲಕ ಸಲ್ಲಿಸಬಹುದು. ವರ್ಗಾವಣೆ ಆದ್ಯತಾ ಪಟ್ಟಿ ಮತ್ತು ಕೌನ್ಸೆಲಿಂಗ್ ಮೂಲಕ ಭರ್ತಿ ಮಾಡಲಾಗುವ ಖಾಲಿ ಹುದ್ದೆಗಳ ವಿವರಗಳನ್ನು 21ರಂದು ಪ್ರಕಟಿಸಲಾಗುವುದು. ವಿಶೇಷ ಪ್ರಕರಣಗಳಡಿ ಅರ್ಜಿ ಸಲ್ಲಿಸಿದವರ ವರ್ಗಾವಣೆಗೆ ಮೊದಲ ಸುತ್ತಿನ ಕೌನ್ಸೆಲಿಂಗ್ 23ರಂದು, ಎರಡನೇ ಸುತ್ತಿನ ಕೌನ್ಸೆಲಿಂಗ್ 26ರಂದು ನಡೆಯಲಿದೆ. ಕಡ್ಡಾಯ ವರ್ಗಾವಣೆಗೆ 27ರಂದು ಕೌನ್ಸೆಲಿಂಗ್ ನಡೆಯಲಿದೆ' ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ತಿಳಿಸಿದ್ದಾರೆ.

'ಕೇವಲ ಎರಡು ವರ್ಷಗಳ ಸೇವಾ ಅವಧಿ ಮಾತ್ರ ಬಾಕಿ ಇರುವವರು, ಯುಜಿಸಿ ಮತ್ತಿತರ ಉನ್ನತ ಸಂಸ್ಥೆಗಳ ಪ್ರಾಜೆಕ್ಟ್ ಕೈಗೊಂಡಿರುವವರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿರುವವರು, ಎನ್‌ಸಿಸಿ ಅಧಿಕಾರಿಗಳಾಗಿರುವವರು ಮತ್ತು ಉಪನ್ಯಾಸಕರ ಒಕ್ಕೂಟದಲ್ಲಿ ಪದಾಧಿಕಾರಿಗಳಾಗಿ ಇರುವವರು ಅಗತ್ಯ ಪ್ರಮಾಣಪತ್ರಗಳನ್ನು ಸಲ್ಲಿಸಿ, ವರ್ಗಾವಣೆಯಿಂದ ವಿನಾಯಿತಿ ಕೋರಬಹುದು' ಎಂದೂ ಅವರು ಮಾಹಿತಿ ನೀಡಿದ್ದಾರೆ.

'ವಿಶೇಷ ಪ್ರಕರಣದಡಿ ವರ್ಗಾವಣೆಗೆ ಕೋರಿಕೆ ಸಲ್ಲಿಸುವವರು ಮತ್ತು ವರ್ಗಾವಣೆಯಿಂದ ವಿನಾಯಿತಿ ಬಯಸಿ ಮನವಿ ಸಲ್ಲಿಸುವವರು ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಅರ್ಜಿಯ ಜೊತೆಗೆ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು' ಎಂದೂ ಅವರು ವಿವರಿಸಿದ್ದಾರೆ.

'ಸಾಮೂಹಿಕ ನಾಶ ಶಸ್ತ್ರಾಸ್ತ್ರ' ಮಸೂದೆ ಮಂಡನೆ

ನವದೆಹಲಿ: 'ಸಾಮೂಹಿಕ ನಾಶ ಶಸ್ತ್ರಾಸ್ತ್ರಗಳು ಹಾಗೂ ಅವುಗಳ ವಿತರಣಾ ವ್ಯವಸ್ಥೆಗಳ (ಕಾನೂನುಬಾಹಿರ ಚಟುವಟಿಕೆಗಳ ನಿಷೇಧ) ಕಾಯ್ದೆ' ತಿದ್ದುಪಡಿಗೆ ಸಂಬಂಧಿಸಿದ ಮಸೂದೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದರು.

ಉಗ್ರರಿಗೆ ಹಣ ಪೂರೈಸುವುದರ ಮೇಲೆ ನಿಗಾ ಇಡುವ ಅಂತರರಾಷ್ಟ್ರೀಯ ಕಾರ್ಯಪಡೆ (ಎಫ್‌ಎಟಿಎಫ್) ಹಾಗೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಿಫಾರಸುಗಳಿಗೆ ಅನುಗುಣವಾಗಿ ಈ ಮಸೂದೆಯನ್ನು ಮಂಡಿಸಲಾಗಿದೆ.

2005ರಲ್ಲಿ ಜಾರಿಯಾದ ಈ ಕಾಯ್ದೆಯಲ್ಲಿ, ಶಸ್ತ್ರಾಸ್ತ್ರಗಳ ಪ್ರಸರಣಕ್ಕೆ ಹಣಕಾಸು ನೆರವು ನಿಷೇಧಿಸಲು ಅವಕಾಶ ಇರಲಿಲ್ಲ. ತಿದ್ದುಪಡಿ ಮಸೂದೆಯು ಈ ಅಂಶಗಳನ್ನು ಒಳಗೊಂಡಿದೆ.

ಈ ಶಸ್ತ್ರಾಸ್ತ್ರಗಳ ತಯಾರಿಕೆಗೆ ಬಳಸಲಾಗುವ ಸಾಮಗ್ರಿಗಳನ್ನು ಭಾರತದಿಂದ ಅಕ್ರಮವಾಗಿ ಆಮದು ಮಾಡಿಕೊಳ್ಳುವ ವ್ಯವಹಾರದಲ್ಲಿ ಪಶ್ಚಿಮ ಏಷ್ಯಾ ಹಾಗೂ ಆಫ್ರಿಕಾದಲ್ಲಿರುವ ಕೆಲ ಸಂಸ್ಥೆಗಳು ನಿರತವಾಗಿವೆ. ಇಂತಹ ಸಂಸ್ಥೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.

ಯೂಟ್ಯೂಬ್ ಸುದ್ದಿ ಚಾನೆಲ್‌ಗಳಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಭಾರತ ವಿರೋಧಿ ಪ್ರಚಾರ, ನಕಲಿ ಸುದ್ದಿಗಳನ್ನು ಹರಡುತ್ತಿರುವ ಆರೋಪದ ಮೇಲೆ 22 ಯೂಟ್ಯೂಬ್ ಸುದ್ದಿ ಚಾನೆಲ್‌ಗಳನ್ನು ನಿರ್ಬಂಧಿಸಲು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಆದೇಶಿಸಿದೆ.

ಇವುಗಳಲ್ಲಿ 18 ಭಾರತೀಯ ಯೂಟ್ಯೂಬ್ ಸುದ್ದಿ ಚಾನೆಲ್‌ಗಳು ಹಾಗೂ ನಾಲ್ಕು ಪಾಕಿಸ್ತಾನಕ್ಕೆ ಸೇರಿದ್ದಾಗಿವೆ. ಕಳೆದ ವರ್ಷ ಫೆಬ್ರವರಿಯಲ್ಲಿ ಐಟಿ ನಿಯಮಗಳು–2021 ರ ಅಧಿಸೂಚನೆಯ ನಂತರ ಭಾರತೀಯ ಯೂಟ್ಯೂಬ್ ಆಧಾರಿತ ಸುದ್ದಿ ಚಾನೆಲ್‌ಗಳ ವಿರುದ್ಧ ಕ್ರಮ ಕೈಗೊಂಡಿರುವುದು ಇದೇ ಮೊದಲು ಎಂದು ಸಚಿವಾಲಯ ತಿಳಿಸಿದೆ.

22 ಯೂಟ್ಯೂಬ್ ಚಾನೆಲ್‌ಗಳು, ಮೂರು ಟ್ವಿಟರ್ ಖಾತೆಗಳು, ಒಂದು ಫೇಸ್‌ಬುಕ್ ಖಾತೆ ಮತ್ತು ಒಂದು ಸುದ್ದಿ ವೆಬ್‌ಸೈಟ್ ಅನ್ನು ನಿರ್ಬಂಧಿಸಲು ಇಲಾಖೆ ಸೋಮವಾರ ಆದೇಶ ಹೊರಡಿಸಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಈ ಚಾನೆಲ್‌ಗಳು ಭಾರತಕ್ಕೆ ಸಂಬಂಧಿಸಿದ ವಿವಿಧ ಸೂಕ್ಷ್ಮ ವಿಷಯಗಳ ಬಗ್ಗೆ ನಕಲಿ ಸುದ್ದಿಗಳನ್ನು ಹರಡುತ್ತಿವೆ. ಕಾಶ್ಮೀರ, ಸೇನೆ ಮತ್ತಿತರ ವಿಷಯ ಕುರಿತು ತಪ್ಪು ಮಾಹಿತಿ ನೀಡುವ ಪೋಸ್ಟ್ ಮಾಡಲು ಚಾನೆಲ್‌ಗಳನ್ನು ಬಳಸಲಾಗಿದೆ ಎಂದು ಸಚಿವಾಲಯವು ತಿಳಿಸಿದೆ.

ಕಲಬುರ್ಗಿ ಹತ್ಯೆ: ಸಾಕ್ಷಿಗಳ ಅರ್ಜಿ ವಿಚಾರಣೆ–ಇಂದು ತೀರ್ಮಾನ

ಧಾರವಾಡ: ಹಿರಿಯ ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಸಾಕ್ಷಿಗಳನ್ನು ಹೊರತುಪಡಿಸಿ, ಉಳಿದ ಸಾಕ್ಷಿಗಳ ವಿಚಾರಣೆಗೆ ಅನುಮತಿ ಕೋರಿದ ಅರ್ಜಿಯ ವಿಚಾರಣೆಯನ್ನು ಇಲ್ಲಿನ ನಾಲ್ಕನೇ ಹೆಚ್ಚುವರಿ ನ್ಯಾಯಾಲಯ ಬುಧವಾರ ಕೈಗೆತ್ತಿಕೊಳ್ಳಲಿದೆ.

2015ರ ಆ.30ರಂದು ನಡೆದ ಹತ್ಯೆ ಪ್ರಕರಣದ ಪ್ರಮುಖ ಸಾಕ್ಷಿಗಳ ವಿಚಾರಣೆಯನ್ನು ತತ್‌ಕ್ಷಣ ನಡೆಸುವುದಿಲ್ಲ. ಉಳಿದ ಸಾಕ್ಷಿಗಳ ವಿಚಾರಣೆಗೆ ನ್ಯಾಯಾಲಯ ಅನುಮತಿ ನೀಡಬೇಕು ಎಂದು ಆರೋಪಿ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಇದಕ್ಕೆ ಸರ್ಕಾರಿ ಪರ ವಕೀಲರು ತಕರಾರು ಅರ್ಜಿ ಸಲ್ಲಿಸಿದರು. ಹೀಗಾಗಿ ಇದರ ವಿಚಾರಣೆಯನ್ನು ಏ.6ರಂದು ನಡೆಸಲಾಗುವುದು ಎಂದು ನ್ಯಾಯಾಲಯ ತಿಳಿಸಿತು.



'ಪೆಟ್ರೋಲ್, ಡೀಸೆಲ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ಕೇಂದ್ರ ಸರ್ಕಾರ, ಜನಸಾಮಾನ್ಯರ ಜೀವಕ್ಕೆ ಕುತ್ತು ತರುತ್ತಿದೆ. ರಾಜ್ಯ ಸರ್ಕಾರ ಸಹ ವಿದ್ಯುತ್ ದರ ಏರಿಸಿ ಜನರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು

ಕಷ್ಟದಲ್ಲೂ ವಿದ್ಯುತ್ ಶಾಕ್:ಎಎಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್, ಬೆಲೆ ಏರಿಕೆ, ನಿರುದ್ಯೋಗ ಸಂಕಷ್ಟಗಳಿಂದ ತತ್ತರಿಸಿರುವ ಜನರಿಗೆ ವಿದ್ಯುತ್ ದರ ಏರಿಸಿ ರಾಜ್ಯ ಸರ್ಕಾರ ಶಾಕ್ ನೀಡುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಟೀಕಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ವಿದ್ಯುತ್ ದರ ಏರಿಸಿ, ಜನಸಾಮಾನ್ಯರಿಗೆ ತೊಂದರೆ ನೀಡಲಾಗುತ್ತಿದೆ. ಒಂದೂವರೆ ವರ್ಷದಲ್ಲಿ ಮೂರು ಬಾರಿ ವಿದ್ಯುತ್ ದರ ಏರಿಸಲಾಗಿದೆ' ಎಂದರು.

'ಅತಿ ಕಡಿಮೆ ವಿದ್ಯುತ್ ಉತ್ಪಾದಿಸುವ ಹಾಗೂ ಎಎಪಿ ಆಡಳಿತದ ದೆಹಲಿಯಲ್ಲಿ ಪ್ರತಿ ಮನೆಗೆ ತಿಂಗಳಿಗೆ 200 ಯುನಿಟ್‌ನಷ್ಟು ಉಚಿತ ವಿದ್ಯುತ್ ನೀಡಲು ಸಾಧ್ಯವಾಗಿದೆ. ರಾಜ್ಯದಲ್ಲಿ ದರ ಏರಿಕೆಗೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ' ಎಂದು ವ್ಯಂಗ್ಯವಾಡಿದರು.

'ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ₹511 ಕೋಟಿ ವಸೂಲಿಯಲ್ಲಿ ವಿಫಲ ಸೇರಿದಂತೆ ಅನೇಕ ಕಾರಣಗಳಿಂದ ವಿದ್ಯುತ್ ಸರಬರಾಜು ಕಂಪನಿಗಳು ನಷ್ಟಕ್ಕೆ ಸಿಲುಕಿವೆ. ಸರ್ಕಾರದ ತಪ್ಪಿನಿಂದ ಆಗುತ್ತಿರುವ ನಷ್ಟವನ್ನು ಗ್ರಾಹಕರ ಮೇಲೆ ಹೊರಿಸುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಕ್ಷದ ಮುಖಂಡ ಪ್ರಕಾಶ್ ನೆಡುಂಗಡಿ, 'ರಾಜ್ಯದ ಜನರಿಂದ ದುಬಾರಿ ಶುಲ್ಕ ಪಡೆಯುವ ರಾಜ್ಯ ಸರ್ಕಾರ ಹೊರ ರಾಜ್ಯಗಳಿಗೆ ಅಗ್ಗದ ದರದಲ್ಲಿ ವಿದ್ಯುತ್ ಪೂರೈಸುತ್ತಿದೆ. ಯುನಿಟ್‌ಗೆ ಕೇವಲ ₹2.38ರಂತೆ ಬೇರೆ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡಲಾಗುತ್ತಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ದರ ಏರಿಕೆ: ಗಾಯದ ಮೇಲೆ ಬರೆ'

ಬೆಂಗಳೂರು: 'ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆ ಹೆಚ್ಚಳ ಮಾಡಿದೆ. ಆ ಮೂಲಕ ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿದ್ದ ನಾಗರಿಕರಿಗೆ ಗಾಯದ ಮೇಲೆ ಬರೆ ಎಳೆದಿದೆ' ಎಂದು ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘ ಟೀಕಿಸಿದೆ.

'ರಾಜ್ಯದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುತ್ತಿದ್ದು ಅದನ್ನು ನೆರೆಯ ರಾಜ್ಯಗಳಿಗೆ ಕಡಿಮೆ ದರಕ್ಕೆ ಮಾರಾಟ ಮಾಡಲಾಗುತ್ತಿದೆ. ಕೋವಿಡ್‌ನಿಂದಾಗಿ ವಿದ್ಯುತ್ ಬಳಕೆಯೂ ಕಡಿಮೆಯಾಗಿದೆ ಎಂಬ ವರದಿಗಳಿವೆ. ಸ್ಥಳೀಯ ಸಂಘ ಸಂಸ್ಥೆಗಳು ಬಾಕಿ ಮೊತ್ತವನ್ನು ರಾಜ್ಯ ಸರ್ಕಾರದಿಂದ ವಸೂಲಿ ಮಾಡುವಲ್ಲಿ ಎಸ್ಕಾಂಗಳು ವಿಫಲವಾಗಿವೆ. ಸಾಗಾಣಿಕೆ ಹಾಗೂ ವಿತರಣೆಯಲ್ಲಿನ ಸೋರಿಕೆ ತಗ್ಗಿಸಲೂ ಇಲಾಖೆ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಪ್ರಕಟಣೆಯಲ್ಲಿ ಆರೋಪಿಸಿದೆ.

'ಕೆಇಆರ್‌ಸಿ ಕೂಡಲೇ ವಿದ್ಯುತ್ ದರ ಏರಿಕೆ ನಿರ್ಧಾರ ಹಿಂಪಡೆಯಬೇಕು. ರಾಜ್ಯ ಸರ್ಕಾರ ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಬೇಕು' ಎಂದರು.

'ಜನವಿರೋಧಿ ನೀತಿ'

ಬೆಂಗಳೂರು: 'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ನಾಗರಿಕರು ತತ್ತರಿಸಿದ್ದಾರೆ. ಇಂತಹ ಸ್ಥಿತಿಯಲ್ಲೇ ಸರ್ಕಾರವು ವಿದ್ಯುತ್ ದರ ಏರಿಸಿ 'ಶಾಕ್' ನೀಡಿದೆ. ಸರ್ಕಾರದ ಜನವಿರೋಧಿ ನೀತಿಗೆ ಇದು ಸಾಕ್ಷಿ' ಎಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಟೀಕಿಸಿದೆ.

'ವಿದ್ಯುತ್ ದರ ಏರಿಕೆಯಿಂದ ಹೋಟೆಲ್, ಕೈಗಾರಿಕೆಗಳು ಹಾಗೂ ಇತರ ಉದ್ಯಮ ಕ್ಷೇತ್ರಗಳಿಗೆ ಪೆಟ್ಟು ಬೀಳಲಿದೆ. ವಿದ್ಯುತ್ ಇಲಾಖೆಯಲ್ಲಿನ ವಿತ್ತೀಯ ಕೊರತೆ ನೀಗಿಸಲು ದರ ಏರಿಕೆ ಅನಿವಾರ್ಯ ಎಂದು ಸರ್ಕಾರ ಸಮರ್ಥನೆ ನೀಡುತ್ತಿದೆ. ವಿದ್ಯುತ್ ಉತ್ಪಾದನೆ, ಸರಬರಾಜು ಹಾಗೂ ನಿರ್ವಹಣೆಯಲ್ಲಿ ಆಗಿರುವ ಭ್ರಷ್ಟಾಚಾರದಿಂದ ಅಪಾರ ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮ ಏನು' ಎಂದು ಸಮಿತಿ ಪ್ರಶ್ನಿಸಿದೆ.

'ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ, ಗೃಹಬಳಕೆ ಸಿಲಿಂಡರ್ ದರ ಗಗನಮುಖಿಯಾಗಿದೆ. ಆರ್ಥಿಕ ಹಿಂಜರಿತ, ಕೋವಿಡ್‌ನಿಂದ ಜನ ಕೆಲಸ ಕಳೆದುಕೊಂಡು ಬೀದಿಗೆ ಬಂದಿದ್ದಾರೆ. ಹೀಗಿರುವಾಗ ವಿದ್ಯುತ್ ದರ ಹೆಚ್ಚಿಸಿದ ಸರ್ಕಾರದ ನಡೆ ನಾಚಿಕೆಗೇಡಿತನದ್ದು' ಎಂದು ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಉಮಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಸರ್ಕಾರ ವಿದ್ಯುತ್ ದರ ಏರಿಕೆ ನಿರ್ಧಾರ ಕೈಬಿಡದಿದ್ದರೆ ಹೋರಾಟ ಅನಿವಾರ್ಯ' ಎಂದರು.

ರಾಜ್ಯ ತ್ಯಜಿಸಿದ ಉದ್ದಿಮೆಗಳ ಸಮೀಕ್ಷೆ ಮಾಡಲಿ: ಡಿಕೆಶಿ

ಬೆಂಗಳೂರು: 'ರಾಜ್ಯದಲ್ಲಿ ದಿನ ಬೆಳಗಾದರೆ ಅಶಾಂತಿ ಮೂಡುತ್ತಿದ್ದು, ಬಂಡವಾಳ ಹೂಡಿಕೆಗೆ ಯಾರೂ ಬರುತ್ತಿಲ್ಲ. ನೆರೆ ರಾಜ್ಯಗಳ ಜತೆ ನಾವು ಸ್ಪರ್ಧೆ ಮಾಡುತ್ತೇವೆ. ಇಲ್ಲಿಂದ ಬೇರೆ ರಾಜ್ಯಗಳಿಗೆ ಎಷ್ಟು ಉದ್ದಿಮೆಗಳು ಹೋಗಿವೆ ಎಂದು ಸರ್ಕಾರ ಸಮೀಕ್ಷೆ ಮಾಡಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ರಾಜ್ಯದಲ್ಲಿನ ಅಶಾಂತಿಯ ವಾತಾವರಣದ ಕಾರಣಕ್ಕೆ ಇಲ್ಲಿಗೆ ಬರಲು ಹಿಂಜರಿಯುತ್ತಿರುವ ಉದ್ಯಮಿಗಳನ್ನು ಹೊರರಾಜ್ಯದವರು ಆಹ್ವಾನಿಸುತ್ತಿದ್ದಾರೆ. ಆದರೆ, ನಮ್ಮ ಮುಖ್ಯಮಂತ್ರಿ, ಮಂತ್ರಿಗಳು ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡುತ್ತೇವೆ, ಉದ್ಯೋಗ ಸೃಷ್ಟಿಸಿ ಯಾರನ್ನೂ ಬೇರೆ ರಾಜ್ಯಗಳಿಗೆ ಹೋಗಲು ಬಿಡುವುದಿಲ್ಲ ಎಂದು ಹೇಳಲು ತಯಾರಿಲ್ಲ. ರಾಜ್ಯದ ಪರಿಸ್ಥಿತಿ ಬಗ್ಗೆ ಮಾತನಾಡಿದ ಬಯೋಕಾನ್ ಮುಖ್ಯಸ್ಥೆಗೂ ಉತ್ತರ ಕೊಡಲು ಒಬ್ಬರಿಗೂ ಸಾಧ್ಯವಾಗಿಲ್ಲ' ಎಂದರು.

'ನಾನು ಕೂಡ ನಗರಾಭಿವೃದ್ಧಿ ಸಚಿವನಾಗಿದ್ದೆ. ಆಂಧ್ರಪ್ರದೇಶದವರು 15 ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳ ಮೂಲಕ ಸ್ಪರ್ಧೆಗೆ ನಿಂತಿದ್ದಾರೆ. ದೊಡ್ಡ ಉದ್ಯಮಿಗಳನ್ನು ಆಕರ್ಷಿಸುತ್ತಿದ್ದಾರೆ. ಬಿಜೆಪಿಯವರು ಅವರಿಗೆ ಪ್ರತಿಕ್ರಿಯಿಸದೆ ನನ್ನ ಟ್ವೀಟ್‌ಗೆ ಉತ್ತರಿಸುತ್ತಾರೆ. ಬಿಜೆಪಿಯವರು ಏನೇ ಹೇಳಿದರೂ ನನಗೆ ಕರ್ನಾಟಕ ಮುಖ್ಯ. ಇಲ್ಲಿ ಬಂಡವಾಳ ಹೂಡಿಕೆ ಹೆಚ್ಚಿಸಿ, ಉದ್ಯೋಗ ಸೃಷ್ಟಿಸುವುದು ಮೊದಲ ಆದ್ಯತೆ' ಎಂದರು.

ಅರಸೀಕೆರೆ ತಾಲ್ಲೂಕಿನ ಅಣ್ಣೇನಹಳ್ಳಿಯಲ್ಲಿ ಅಧಿಕಾರಿಗಳ ಕಾರ್ಯಾಚರಣೆ

ಜೀತದ ಮಡಿತ: 55 ಕಾರ್ಮಿಕರ ರಕ್ಷಣೆ

ಪ್ರಜಾವಾಣಿ ವಾರ್ತೆ

ಅರಸೀಕೆರೆ: ದೂರದ ಊರುಗಳಿಂದ ಬಂದಿದ್ದವರನ್ನು ಅಣ್ಣೇನಹಳ್ಳಿಯಲ್ಲಿ ಅಕ್ರಮವಾಗಿ ಕೂಡಿಟ್ಟು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಪೊಲೀಸರು 55 ಕಾರ್ಮಿಕರನ್ನು ರಕ್ಷಿಸಿದ್ದಾರೆ. ಅವರನ್ನು ಕರೆತಂದ ಮಧ್ಯವರ್ತಿ ಮುನೇಶ್ ಪತ್ತೆಗೆ ತಂಡ ರಚಿಸಲಾಗಿದೆ.

ಚಿಕ್ಕಮಗಳೂರು, ದಾವಣಗೆರೆ, ಹುಬ್ಬಳ್ಳಿ, ಮಧುಗಿರಿ, ಪಾವಗಡ, ಮಂಡ್ಯ, ತಮಿಳುನಾಡು ಸೇರಿದಂತೆ ವಿವಿಧೆಡೆಗಳಿಂದ ಬಂದಿದ್ದ ಕಾರ್ಮಿಕರನ್ನು ಎರಡು ಪ್ರತ್ಯೇಕ ಶೆಡ್‌ಗಳಲ್ಲಿ ಕೂಡಿಟ್ಟಿದ್ದ ಆರೋಪಿ ಶುಂಠಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದ. ಕೆಲಸ ಮುಗಿಸಿ ಬಂದ ನಂತರ ಎಲ್ಲರನ್ನೂ ಶೆಡ್‌ನಲ್ಲಿ ಕೂಡಿ ಹಾಕುತ್ತಿದ್ದ. ಅವರಿಗೆ ಹೊರ ಹೋಗಲು ಬಿಡುತ್ತಿರಲಿಲ್ಲ.

ಖಚಿತ ಮಾಹಿತಿ ಮೇರೆಗೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್. ನಂದಿನಿ, ಡಿವೈಎಸ್‌ಪಿ ಅಶೋಕ್, ಗ್ರಾಮಾಂತರ ಸಿಪಿಐ ಕೆ.ಎಂ.ವಸಂತ, ಪಿಎಸ್‌ಐ ಲಕ್ಷ್ಮಣ್ ನೇತೃತ್ವದಲ್ಲಿ ಮಂಗಳವಾರ ಕಾರ್ಯಾಚರಣೆ ನಡೆಸಿ, 45 ಪುರುಷರು, ಹತ್ತು ಮಹಿಳೆಯರನ್ನು ರಕ್ಷಿಸಿದರು.

ಬಿ.ಎನ್.ನಂದಿನಿ ಮಾತನಾಡಿ, 'ಕಾರ್ಮಿಕರನ್ನು ಶುಂಠಿ ಕೆಲಸಕ್ಕೆಂದು ಕರೆ ತಂದು ಬೇರೆ ಬೇರೆ ಕೆಲಸಕ್ಕೆ ದುಡಿಸಿಕೊಳ್ಳಲಾಗಿದೆ. ಕೆಲವರು ಎರಡು ವರ್ಷ, ಕೆಲವರು ಆರು ತಿಂಗಳು, ಇನ್ನೂ ಕೆಲವರು ವಾರಗಳಿಂದ ಬಂಧಿಯಾಗಿದ್ದರು. ಹಲವರು ಎಷ್ಟೋ ದಿನಗಳಿಂದ ಸ್ನಾನವನ್ನೂ ಮಾಡದೆ, ಕೊಳಕು ಬಟ್ಟೆಯಲ್ಲೇ ಉಸಿರುಗಟ್ಟುವ ವಾತಾವರಣದಲ್ಲಿ ದಿನದೂಡುತ್ತಿದ್ದರು' ಎಂದು ಮಾಹಿತಿ ನೀಡಿದರು.

'ಕಾರ್ಮಿಕರಿಗೆ ಸರಿಯಾದ ಕೂಲಿ ಮತ್ತು ಮೂಲಸೌಲಭ್ಯ ಕಲ್ಪಿಸಿಲ್ಲ. ಅವರನ್ನು ಅಕ್ರಮವಾಗಿ ದುಡಿಸಿಕೊಳ್ಳಲು ಮುನೇಶ್ ಜೊತೆಗೆ ಕುಮಾರ, ಲಕ್ಕಿ, ಮನು ಎಂಬುವವರೂ ಕೈ ಜೋಡಿಸಿದ್ದಾರೆ. ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದರು.

ಡಿವೈಎಸ್‌ಪಿ ಅಶೋಕ್ ಮಾತನಾಡಿ, 'ಕಾರ್ಮಿಕರಿಗೆ ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯದಲ್ಲಿ ವಸತಿ ಸೌಲಭ್ಯ ಕಲ್ಪಿಸಿ, ಬಟ್ಟೆ, ಸ್ನಾನ ಮತ್ತು ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ಆರೋಗ್ಯ ತಪಾಸಣೆ ನಡೆಸಲಾಗುವುದು. ಉಪವಿಭಾಗಾಧಿಕಾರಿ ಜಗದೀಶ್ ಅವರು ಕಾರ್ಮಿಕರಿಂದ ಮಾಹಿತಿ ಪಡೆದ ಬಳಿಕ, ಪರಿಹಾರ ಕಲ್ಪಿಸಲಾಗುವುದು' ಎಂದು ತಿಳಿಸಿದರು.



ಅರಸೀಕೆರೆ ತಾಲ್ಲೂಕಿನ ಅಣ್ಣೇನಹಳ್ಳಿಯಲ್ಲಿ ಪೊಲೀಸರು ರಕ್ಷಿಸಿರುವ ಕಾರ್ಮಿಕರು

ಡಿಸಿಸಿ ಬ್ಯಾಂಕ್: ಅಧ್ಯಯನದ ಬಳಿಕ ವಿಲೀನ ಪ್ರಸ್ತಾವ



ಎಸ್.ಟಿ. ಸೋಮಶೇಖರ್

ಶಿರಾ: 'ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಮಧ್ಯವರ್ತಿ (ಡಿಸಿಸಿ) ಬ್ಯಾಂಕ್‌ಗಳು ವಿಲೀನಗೊಂಡ ರಾಜ್ಯಗಳಿಗೆ ಉನ್ನತ ಅಧಿಕಾರಿಗಳ ತಂಡವನ್ನು ಶೀಘ್ರವೇ ಅಧ್ಯಯನ ಪ್ರವಾಸಕ್ಕೆ ಕಳುಹಿಸಿ, ವರದಿ ಪಡೆಯಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ತಾಲ್ಲೂಕಿನ ಹನುಮಂತಪುರದಲ್ಲಿ ಮಂಗಳವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ವಿಲೀನದ ಬಳಿಕ ಆಯಾ ರಾಜ್ಯಗಳಲ್ಲಿರುವ ಸ್ಥಿತಿಗತಿ ಪರಿಶೀಲಿಸಿ ಕರ್ನಾಟಕದಲ್ಲೂ ವಿಲೀನ ಪ್ರಕ್ರಿಯೆ ಕೈಗೊಳ್ಳಬೇಕೆ ಅಥವಾ ಬೇಡವೆ ಎಂಬುದರ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುತ್ತದೆ' ಎಂದರು.

'ಇಲ್ಲಿ ಡಿಸಿಸಿ ಬ್ಯಾಂಕುಗಳು ದೊಡ್ಡ ಆರ್ಥಿಕ ಸಂಸ್ಥೆಗಳಾಗಿವೆ. ವಿಲೀನ ನಿರ್ಧಾರ ಕೈಗೊಳ್ಳುವುದು ಸುಲಭವಲ್ಲ' ಎಂದರು.

ಶೀಟುಗಳು ಬಿದ್ದು ಮಹಿಳೆ ಸಾವು

ಹಾವೇರಿ: ಗುತ್ತಲ ಪಟ್ಟಣದ ಕುಂಬಾರ ಓಣಿಯಲ್ಲಿ ಮಳೆಯಿಂದಾಗಿ ಮನೆಯ ತಗಡಿನ ಶೀಟುಗಳು ಹಾರಿ ಬಿದ್ದು ಮಮತಾಜ್ ಬಾಲೇಬಾಯಿ (47) ಎಂಬುವವರು ಸಾವಿಗೀಡಾಗಿದ್ದಾರೆ.

ತಮ್ಮ ಮನೆಯ ಶೀಟುಗಳು ಗಾಳಿಗೆ ಹಾರಿ ಹೋಗಿದ್ದರಿಂದ ಮನೆಯ ಮುಂಭಾಗದಲ್ಲಿ ನಿಂತಿದ್ದ ಮಮತಾಜ್ ಅವರ ಮೇಲೆ ಪಕ್ಕದ ಮನೆಯ ತಗಡಿನ ಶೀಟು, ಸಿಮೆಂಟ್ ಇಟ್ಟಿಗೆಗಳು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಗೋಕಾಕ ತಾಲ್ಲೂಕಿನ ಘಟಪ್ರಭಾದಲ್ಲಿ ಆಲಿಕಲ್ಲು ಸಹಿತ ಜೋರು ಮಳೆ ಬಿದ್ದಿದೆ.

'ಯುವ ನೀತಿಯಲ್ಲಿ ಯುವ ವಿಕಾಸ ಇರಬೇಕು'

ಬೆಂಗಳೂರು: 'ನಗರ ಕೇಂದ್ರಿತವಾಗುತ್ತಿರುವ ಯುವ ಸಮೂಹವನ್ನು ವಿಕೇಂದ್ರೀಕರಣಗೊಳಿಸಲು ಮಾರ್ಗದರ್ಶನ ನೀಡುವ ಅಂಶಗಳನ್ನು ನೂತನ 'ಯುವನೀತಿ–2021'ರಲ್ಲಿ ಅಳವಡಿಸಬೇಕು' ಎಂದು ಯುವ ನೀತಿ ರಚನಾ ಸಮಿತಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹೇಳಿದರು.

ಯುವನೀತಿ ರೂಪಿಸಲು ರಚಿಸಿರುವ ಡಾ. ಬಾಲಸುಬ್ರಹ್ಮಣ್ಯಂ ನೇತೃತ್ವದಲ್ಲಿ ಸಮಿತಿಯ ಜೊತೆ ಸಚಿವರು ಮಂಗಳವಾರ ಸಭೆ ನಡೆಸಿದರು. ಈ ವೇಳೆ ಸಮಿತಿಯು ಕರಡು ವರದಿ ಸಲ್ಲಿಸಿತು.

3 ಮಸೂದೆಗಳಿಗೆ ರಾಜ್ಯಪಾಲರ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, ಕರ್ನಾಟಕ ಬಂದೀಖಾನೆಗಳ ಕಾಯ್ದೆ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಗಳ ತಿದ್ದುಪಡಿ ಮಸೂದೆಗಳಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ್ದಾರೆ.

ಶಿಕ್ಷೆಗೊಳಗಾದ ಮತ್ತು ಶಿಸ್ತು ಕ್ರಮಕ್ಕೆ ಒಳಗಾದ ಸರ್ಕಾರಿ ನೌಕರರು, ಸಹಕಾರಿ ಸಂಸ್ಥೆಗಳ ನೌಕರರು ಮತ್ತು ಪದಾಧಿಕಾರಿಗಳು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸುವ ಪ್ರಸ್ತಾವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಯಲ್ಲಿದೆ. ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಜನಸಂಖ್ಯೆಯ ಮಿತಿ ನಿಗದಿಪಡಿಸುವ, ಜಿಲ್ಲಾ ಯೋಜನಾ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸುವುದಕ್ಕೆ ಸಂಬಂಧಿಸಿದ ಅಂಶಗಳೂ ಇದರಲ್ಲಿವೆ.

ಕರ್ನಾಟಕ ಬಂದೀಖಾನೆಗಳ ಕಾಯ್ದೆ ತಿದ್ದುಪಡಿಯ ಮೂಲಕ, ಮೊಬೈಲ್ ಅಥವಾ ಇತರ ಯಾವುದೇ ಸಂಪರ್ಕ ಸಾಧನಗಳನ್ನು ಜೈಲಿನ ಒಳಗೆ ಕೊಂಡೊಯ್ಯದಂತೆ ನಿರ್ಬಂಧಿಸಲು ಮತ್ತು ಪೆರೋಲ್ ಅವಧಿ ಮುಗಿದ ಬಳಿಕ ಕೈದಿ ಮರಳಿ ಹಾಜರಾಗದೆ ತಲೆಮರೆಸಿಕೊಂಡರೆ ಜಾಮೀನುದಾರನಿಗೆ ಮೂರರಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಭೂಸ್ವಾಧೀನ, ಪರಿಹಾರ ಮತ್ತು ಪುನರ್ವಸತಿ ಕಾಯ್ದೆ–2013ರ ಪ್ರಕಾರವೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲೂ ಭೂಸ್ವಾಧೀನ ಪ್ರಕ್ರಿಯೆ ನಡೆಸುವುದನ್ನು ಕಡ್ಡಾಯಗೊಳಿಸುವ ಅಂಶವನ್ನು ಸೇರಿಸುವ ಉದ್ದೇಶದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಮಂಡಿಸಲಾಗಿತ್ತು.

ನಕಲಿ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ಮೈಸೂರು: ಮೃತ ಅಣ್ಣನ ಹೆಸರಿನಲ್ಲಿ 24 ವರ್ಷಗಳಿಂದ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿ ಈಚೆಗೆ ಸಿಕ್ಕಿಬಿದ್ದು ನ್ಯಾಯಾಂಗ ಬಂಧನದಲ್ಲಿರುವ ಲಕ್ಷ್ಮಣೇಗೌಡ (ಹುಣಸೂರಿನ ಹಿರಿಕ್ಯಾತನಹಳ್ಳಿಯ ಶಾಲೆಯ ಶಿಕ್ಷಕ) ಎಂಬಾತನನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಅಮಾನತುಗೊಳಿಸಿದ್ದಾರೆ.

'ಪ್ರಕರಣವು ನ್ಯಾಯಾಲಯದಲ್ಲಿದ್ದು, ಇಲಾಖಾ ಮಟ್ಟದಲ್ಲೂ ತನಿಖೆ ನಡೆಯುತ್ತಿದ್ದು, ಈಗ ಆತ ಆರೋಪಿಯಷ್ಟೆ. ಸದ್ಯದ ಮಟ್ಟಿಗೆ ಆತನನ್ನು ಸರ್ಕಾರಿ ನೌಕರ ಎಂದೇ ಪರಿಗಣಿಸಿದ್ದೇವೆ. ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲು ಈ ಪ್ರಕ್ರಿಯೆಗೆ ಮುಂದಾಗಿದ್ದೇವೆ. ನೋಟಿಸ್ ನೀಡಿ, ವಿಚಾರಣೆ ನಡೆಸಿ ಬಳಿಕ ವಜಾಗೊಳಿಸಬೇಕಾಗುತ್ತದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ದೈಹಿಕ ಶಿಕ್ಷಕ ಅಮಾನತು: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿ ನ್ಯಾಯಾಂಗ ಬಂಧನದಲ್ಲಿರುವ ಪಿರಿಯಾಪಟ್ಟಣ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಯೊಂದರ ದೈಹಿಕ ಶಿಕ್ಷಕನನ್ನು ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಅವರು ಅಮಾನತುಗೊಳಿಸಿದ್ದಾರೆ.

ನೆರವಿನ ಮೊತ್ತ ಬಳಕೆಗೆ 'ಹರ್ಷ ಚಾರಿಟೆಬಲ್ ಟ್ರಸ್ಟ್'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಜರಂಗ ದಳದ ಕಾರ್ಯಕರ್ತ ಹರ್ಷ ಹತ್ಯೆಯ ನಂತರ ದೊರೆತ ನೆರವಿನ ಹಣದಲ್ಲಿ ಒಂದಷ್ಟು ಭಾಗವನ್ನು ಕೋಮು ದ್ವೇಷದಿಂದಾಗಿ ಜೀವ ಕಳೆದುಕೊಂಡ ಹಿಂದೂ ಕುಟುಂಬಗಳಿಗೆ ನೀಡಲು ಹರ್ಷ ಕುಟುಂಬ ನಿರ್ಧರಿಸಿದೆ.

ಹರ್ಷ ಹತ್ಯೆಯ ನಂತರ ಅವರ ಕುಟುಂಬಕ್ಕೆ ₹ 2.5 ಕೋಟಿಗೂ ಅಧಿಕ ನೆರವು ಹರಿದುಬಂದಿದೆ. ಈ ಹಣದಲ್ಲಿ ಈಗಾಗಲೇ ಒಂದಷ್ಟು ಕುಟುಂಬಗಳಿಗೆ ನೆರವು ನೀಡಲಾಗಿದೆ. ಕೇರಳದ ಕಾಸರಗೋಡಿನಲ್ಲಿ ಹತ್ಯೆಯಾಗಿದ್ದ ಶಿವಮೊಗ್ಗ ಮೂಲದ ಜ್ಯೋತಿಶ್ ಅವರ ಕುಟುಂಬಕ್ಕೆ ₹ 2 ಲಕ್ಷ ನೆರವು ನೀಡಿದ್ದಾರೆ.

ಶಿವಮೊಗ್ಗದ ವಿಶ್ವನಾಥ ಶೆಟ್ಟಿ ಪುತ್ರನ ಶಿಕ್ಷಣಕ್ಕೂ ಒಂದಷ್ಟು ಹಣ ನೀಡಿ, ವಿದ್ಯಾಭ್ಯಾಸದ ಸಂಪೂರ್ಣ ಖರ್ಚು ಭರಿಸುವ ಭರವಸೆ ನೀಡಿದ್ದಾರೆ. ಹರ್ಷನ ಪಾರ್ಥಿವ ಶರೀರದ ಮೆರವಣಿಗೆಯ ವೇಳೆ ನಡೆದ ಗಲಾಟೆಯಲ್ಲಿ ಗಾಯಗೊಂಡ ಹಿಂದೂ ಕಾರ್ಯಕರ್ತರ ವೈದ್ಯಕೀಯ ವೆಚ್ಚ ಭರಿಸಿದ್ದಾರೆ.

'ಹರ್ಷ ಹೆಸರಲ್ಲಿ ಒಂದು ಚಾರಿಟಬಲ್ ಟ್ರಸ್ಟ್ ಸ್ಥಾಪಿಸುವ ಕುರಿತು ಚಿಂತನೆ ನಡೆದಿದೆ. ನಮ್ಮ ಕುಟುಂಬ ಹಾಗೂ ಹಿಂದೂ ಸಂಘಟನೆಗಳ ಪ್ರಮುಖರನ್ನು ಒಳಗೊಂಡು ಟ್ರಸ್ಟ್ ಶೀಘ್ರ ಸ್ಥಾಪಿಸಲಾಗುವುದು' ಎಂದು ಹರ್ಷ ಅವರ ತಾಯಿ ಪದ್ಮಾ ಪ್ರತಿಕ್ರಿಯಿಸಿದರು.

ಮಾಜಿ ಪೈಲ್ವಾನರ ಮಾಸಾಶನ: ₹1000 ಹೆಚ್ಚಳ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ (2022-23) ಬಜೆಟ್‌ನಲ್ಲಿ ಘೋಷಿಸಿದಂತೆ, ಸಂಕಷ್ಟದಲ್ಲಿರುವ ಕುಸ್ತಿ ಪೈಲ್ವಾನರ ಮಾಸಾಶನವನ್ನು ₹ 1,000 ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯಮಟ್ಟದ ಕುಸ್ತಿ ಪೈಲ್ವಾನರ ಮಾಸಾಶನವನ್ನು ₹ 2,500ದಿಂದ ₹ 3,500, ರಾಷ್ಟ್ರಮಟ್ಟದ ಕುಸ್ತಿ ಪೈಲ್ವಾನರ ಮಾಸಾಶನವನ್ನು ₹ 3,000ದಿಂದ ₹ 4,000, ಅಂತರರಾಷ್ಟ್ರೀಯ ಮಟ್ಟದ ಕುಸ್ತಿ ಪೈಲ್ವಾನರ ಮಾಸಾಶನವನ್ನು ₹ 4,000ದಿಂದ ₹ 5,000ಕ್ಕೆ ಹೆಚ್ಚಿಸಲಾಗಿದೆ. ಏಪ್ರಿಲ್ ಒಂದರಿಂದಲೇ ಈ ಆದೇಶ ಅನ್ವಯವಾಗಲಿದೆ.

50 ವರ್ಷ ದಾಟಿದ, ಸಂಕಷ್ಟದಲ್ಲಿರುವ ಕುಸ್ತಿ ಕ್ರೀಡಾಪಟುಗಳಿಗೆ ನೀಡುತ್ತಿರುವ ಮಾಸಾಶನ ಹೆಚ್ಚಿಸುವುದಾಗಿ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಘೋಷಿಸಿದ್ದರು.

'ರಾಜ್ಯದ ವಿವಿಧೆಡೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಮಾಸಾಶನ ಹೆಚ್ಚಿಸುವಂತೆ ಮಾಜಿ ಕುಸ್ತಿ ಪೈಲ್ವಾನರು ಬೇಡಿಕೆ ಇಟ್ಟಿದ್ದರು. ಆಗ, ಹೆಚ್ಚಿಸುವುದಾಗಿ ಭರವಸೆ ನೀಡಿದ್ದೆ. ಅದರಂತೆ, ಬಜೆಟ್‌ನಲ್ಲಿ ಮಾಸಾಶನ ಹೆಚ್ಚಿಸಿ ಘೋಷಿಸಲಾಗಿತ್ತು. ಇದೀಗ ಆದೇಶ ಹೊರಡಿಸಲಾಗಿದೆ' ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಅವರು ತಿಳಿಸಿದ್ದಾರೆ.



ಇದು ಸೂಪರ್ ಆ್ಯಪ್ ಜಮಾನ!



ಕೃಷ್ಣ ಭಟ್

ಶಾಪಿಂಗ್ ಸೆಂಟರ್‌ಗಳೆಂದರೆ ಆಕರ್ಷಣೆಯ ತಾಣ. ಎಲ್ಲವೂ ಒಂದೇ ಕಡೆ ಸಿಗಬೇಕು ಎಂಬ ಜನರ ಅನುಕೂಲದ ಮನಃಸ್ಥಿತಿಯನ್ನು ಕಾಲಕಾಲಕ್ಕೆ ಹಲವು ರೀತಿಯಲ್ಲಿ ವ್ಯಾಪಾರಿಗಳು ಬಳಕೆ ಮಾಡಿಕೊಂಡಿದ್ದಾರೆ. ಪಟ್ಟಣಗಳಲ್ಲಿ ನಿರ್ಮಾಣವಾದ ಮಾರುಕಟ್ಟೆ ಎಂಬ ಕಲ್ಪನೆಗೂ ಇದೇ ಮೂಲ. ನಂತರ ಮೆಟ್ರೋ ನಗರಗಳಲ್ಲಿ ತಲೆ ಎತ್ತಿದ ಮಾಲ್‌ಗಳ ಕಲ್ಪನೆಯೂ ಇದೇ ಮೂಲದ್ದು!

> ಮುಂದಿನ ಕೆಲವು ವರ್ಷಗಳವರೆಗೆ ಸೂಪರ್ ಆ್ಯಪ್‌ಗಳದ್ದೇ ಜಮಾನ! ಈಗಾಗಲೇ ಜನಪ್ರಿಯವಾಗಿರುವ ಆ್ಯಪ್‌ಗಳು ಒಂದೊಂದೇ ಸೇವೆಯನ್ನು ಹೆಚ್ಚಿಸಿಕೊಳ್ಳುತ್ತಾ ಸೂಪರ್ ಆ್ಯಪ್‌ಗಳಾಗುತ್ತಿವೆ.

ಇಲ್ಲಿ ಒಳಹೊಕ್ಕರೆ ಜನರಿಗೆ ಎಲ್ಲವೂ ಸಿಗಬೇಕು. ಲಾಲಿಪಾಪ್‌ನಿಂದ ಹಿಡಿದು ಚಿನ್ನದ ತುಂಡಿನವರೆಗೆ ಎಲ್ಲವೂ ಸಿಗಬೇಕು. ಜನರು ಹೆಚ್ಚು ಹೆಚ್ಚು ಸಮಯ ಇಲ್ಲಿ ಕಳೆಯಬೇಕು. ಅವರ ಕಣ್ಣಿಗೆ ಖರೀದಿ ಮಾಡಬಹುದಾದ್ದು ಏನಾದರೂ ಸಿಗುತ್ತಿರಬೇಕು – ಎಂಬುದು ಈ ಮಾಲ್ ಬ್ಯುಸಿನೆಸ್ ಮಂತ್ರ. ಒಂದು ಕರ್ಚೀಫು ಖರೀದಿ ಮಾಡಲು ಹೋದರೆ, ಐಸ್‌ಕ್ರೀಮ್ ಕಾಣಿಸುತ್ತದೆ; ಐಸ್‌ಕ್ರೀಮ್ ತಿನ್ನುತ್ತೇವೆ. ಒಂದು ಚೆಂದದ ಶರ್ಟ್ ಕಾಣಿಸುತ್ತದೆ; ಅದನ್ನೂ ಖರೀದಿಸುತ್ತೇವೆ. ಮಕ್ಕಳನ್ನು ಕರೆದುಕೊಂಡು ಹೋಗಿದ್ದರೆ, ಅವರಿಗೆ ಅಲ್ಲೇ ವಿಧ ವಿಧದ ಗೇಮ್ಸ್ ಇರುತ್ತದೆ. ಅಲ್ಲಿ ಅವರನ್ನು ಬಿಡುತ್ತೀರಿ! ಹೀಗೆ, ಎಲ್ಲಕ್ಕೂ ಅಲ್ಲೇ ಜಾಗವಿದೆ. ಇದೇ ವಿಧಾನ ಈಗ ಡಿಜಿಟಲ್ ರೂಪವನ್ನೂ ಪಡೆಯುತ್ತಿದೆ ಎಂದರೆ ನೀವು ನಂಬಬೇಕು!

ಇದಕ್ಕೆ ಹೆಸರು ಬೇರೆ ಅಷ್ಟೇ. ಇದನ್ನು 'ಸೂಪರ್ ಆ್ಯಪ್' ಎಂದು ಕರೆದಿದ್ದಾರೆ. ಈ ಸೂಪರ್ ಆ್ಯಪ್ ಕಲ್ಪನೆ ಶುರುವಾಗಿದ್ದು ಚೀನಾದಲ್ಲಿ. ಅಲ್ಲಿ ಚಾಟ್ ಆ್ಯಪ್ ಆಗಿ ಶುರುವಾದ ವಿ ಚಾಟ್ ಜನಪ್ರಿಯವಾದ ನಂತರ, ಅದು ತನ್ನನ್ನು ಹಲವು ಸೇವೆಗಳಲ್ಲಿ ತೊಡಗಿಸಿಕೊಂಡಿತು. ಸಾಲ ತೆಗೆದುಕೊಳ್ಳುವುದು, ಶಾಪಿಂಗ್ ಮಾಡುವುದು, ಹಣ ವರ್ಗಾವಣೆ ಮಾಡುವುದು – ಇಂಥ ವಿವಿಧ ರೀತಿಯ ಸೇವೆಗಳನ್ನು ಒದಗಿಸಲು ಶುರು ಮಾಡಿತು.

ಇಲ್ಲೊಂದು ರಿಯಲ್ ಎಸ್ಟೇಟ್ ಸಮಸ್ಯೆಯೂ ಇತ್ತು! ಮಾಲ್‌ಗಳು ಹೇಗೆ ಒಂದೇ ಸೂರಿನಲ್ಲಿ ಎಲ್ಲವನ್ನೂ ಕಡಿಮೆ ಸ್ಥಳವನ್ನು ಬಳಸಿಕೊಳ್ಳುತ್ತಿದ್ದವೋ ಹಾಗೆಯೇ, ಸ್ಮಾರ್ಟ್‌ಫೋನ್‌ನಲ್ಲಿ ಸ್ಟೋರೇಜ್ ಕೊರತೆಯಿಂದಾಗಿ ಜನರು ಒಂದೊಂದು ಸಾಮಗ್ರಿಯ ಶಾಪಿಂಗ್‌ಗಾಗಿಯೇ ಹಲವು ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದಕ್ಕೆ ಹಿಂಜರಿಯುತ್ತಿದ್ದರು. ಇದು ಕೂಡ ಸೂಪರ್ ಆ್ಯಪ್ ಕಲ್ಪನೆಗೆ ಇಂಬು ನೀಡಿತು.

ಸಾಮಾನ್ಯವಾಗಿ, ಸೂಪರ್ ಆ್ಯಪ್‌ಗಳು ಎರಡು ಶೈಲಿಯಲ್ಲಿ ಚಲಾವಣೆಗೆ ಬರುತ್ತವೆ. ಯಾವುದೋ ಒಂದು ಸೇವೆಯನ್ನು ಆರಂಭಿಸಿ, ಅದು ಜನಪ್ರಿಯವಾದಾಗ ಆ ಬಳಕೆದಾರರಿಗೆ ಇನ್ನಷ್ಟು ಸೌಲಭ್ಯಗಳನ್ನು ಒದಗಿಸುವ ಮೂಲಕ ತಮ್ಮ ಲಾಭದ ಪ್ರಮಾಣವನ್ನು ಹೆಚ್ಚು ಮಾಡಿಕೊಳ್ಳುವುದು ಒಂದು ಉದ್ದೇಶವಾದರೆ, ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಕಂಪನಿಯೊಂದು ತನ್ನ ಎಲ್ಲ ಸೇವೆಗಳನ್ನೂ ಒಂದೇ ಸೂರಿನಡಿ ಗ್ರಾಹಕರಿಗೆ ಒದಗಿಸುವುದು ಇನ್ನೊಂದು ವಿಧಾನ.

ಈ ಎರಡೂ ರೀತಿಯ ಸೂಪರ್ ಆ್ಯಪ್‌ಗಳು ಭಾರತದಲ್ಲಿವೆ. ಅಷ್ಟೇ ಅಲ್ಲ, ಇನ್ನು ಮುಂದಿನ ಕೆಲವು ವರ್ಷಗಳವರೆಗೆ ಈ ಸೂಪರ್ ಆ್ಯಪ್‌ಗಳದ್ದೇ ಜಮಾನ! ಈಗಾಗಲೇ ಜನಪ್ರಿಯವಾಗಿರುವ ಆ್ಯಪ್‌ಗಳು ಒಂದೊಂದೇ ಸೇವೆಯನ್ನು ಹೆಚ್ಚಿಸುತ್ತಾ ಸೂಪರ್ ಆ್ಯಪ್‌ಗಳಾಗುತ್ತ ಹೊರಡುತ್ತಿವೆ. ಅಮೆಜಾನ್ ತನ್ನ ಆ್ಯಪ್‌ನಲ್ಲಿ ಪೇಮೆಂಟ್ ಸೌಲಭ್ಯವನ್ನೂ ಒದಗಿಸಿದೆ. ಇನ್ನು ಪೇಟಿಎಂ ಮೊದಲು ಹಣ ವರ್ಗಾವಣೆಗೆ ಶುರುವಾದ ಆ್ಯಪ್, ಈಗ ಎಲ್ಲ ಸೇವೆಗಳನ್ನೂ ಒದಗಿಸುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಟಾಟಾ ಸಮೂಹ ತನ್ನ ಎಲ್ಲ ಅಂಗಸಂಸ್ಥೆಗಳ ಪ್ರತ್ಯೇಕ ಆ್ಯಪ್‌ಗಳನ್ನೆಲ್ಲ ಸೇರಿಸಿ 'ಟಾಟಾ ನ್ಯೂ' ಎಂಬ ಹೊಸ ಸೂಪರ್ ಆ್ಯಪ್ ಬಿಡುಗಡೆ ಮಾಡುವುದರಲ್ಲಿದೆ.

ವಾಟ್ಸ್‌ಆ್ಯಪ್ ಕೂಡ ಈಗಾಗಲೇ ಪೇಮೆಂಟ್, ಬ್ಯುಸಿನೆಸ್‌ಗೆಲ್ಲ ಕಾಲಿಟ್ಟಿದೆ. ಫೇಸ್‌ಬುಕ್ ಕೂಡ ಮಾರ್ಕೆಟ್‌ಪ್ಲೇಸ್ ಶುರು ಮಾಡಿದೆ. ಮುಂದಿನ ದಿನಗಳಲ್ಲಿ ಇಂತಹ ಇನ್ನಷ್ಟು ಆ್ಯಪ್‌ಗಳು ಸೂಪರ್ ಆಗುವತ್ತ ಸಾಗುತ್ತವೆ.

ಇದರಲ್ಲಿ ಇರುವ ಮುಖ್ಯ ಸಮಸ್ಯೆಯೆಂದರೆ, ಇವು ಹೀಗೆ ದೈತ್ಯವಾಗುತ್ತ ಸಾಗಿದ ಹಾಗೆ, ಆ್ಯಪ್‌ಗಳು ಪ್ರತಿಕ್ರಿಯಿಸುವ ವೇಗ ನಿಧಾನವಾಗುತ್ತದೆ. ಒಂದು ಟ್ಯಾಬ್ ತೆರೆದುಕೊಳ್ಳಲು ಒಂದು ಸೆಕೆಂಡು ನಿಧಾನವಾದರೂ ಜನರು ವಿಚಲಿತರಾಗುತ್ತಾರಂತೆ! ಇದರಿಂದ ಬಳಕೆದಾರರ ಸಂತೃಪ್ತಿಯ ಮಟ್ಟ ಕಡಿಮೆಯಾಗುತ್ತದೆ ಎಂಬ ಹೆದರಿಕೆಯೂ ಉದ್ಯಮಗಳಿಗೆ ಇದೆ. ಆದರೆ, 5ಜಿ ಬಂದ ಮೇಲೆ ಈ ಸಮಸ್ಯೆ ಬಹುಮಟ್ಟಿಗೆ ನಿವಾರಣೆಯಾದೀತು. ಇದರ ಜೊತೆಗೆ, ಬಳಕೆದಾರರ ದೃಷ್ಟಿಕೋನದಲ್ಲಾದರೆ, ಸ್ಮಾರ್ಟ್‌ಫೋನ್‌ನಲ್ಲಿ ಹೆಚ್ಚು ಹೆಚ್ಚು ಸ್ಥಳವನ್ನು ಇವು ತಿನ್ನುತ್ತವೆ.

ಏನೇ ಆದರೂ, ಸೂಪರ್ ಆ್ಯಪ್‌ಗಳು ಉದ್ಯಮಗಳಿಗೆ ತಮ್ಮ ಎಲ್ಲ ಸೇವೆಗಳನ್ನೂ ಗ್ರಾಹಕರಿಗೆ ಒಂದೇ ಕಡೆಗೆ ಒದಗಿಸುವ ಮೂಲಕ ತಮ್ಮ ಹೊಸ ಹೊಸ ಸೇವೆಗಳಿಗೆ ಪ್ರಚಾರದ ಖರ್ಚು ಕಡಿಮೆ ಮಾಡಿಕೊಳ್ಳುವ ಅನುಕೂಲವಾದರೆ, ಗ್ರಾಹಕರಿಗೆ ತಮ್ಮ ಸ್ಮಾರ್ಟ್‌ಫೋನ್‌ಗಳನ್ನು ನೀಟಾಗಿ ಇಟ್ಟುಕೊಳ್ಳುವ ಒಂದು ವಿಧಾನವೂ ಹೌದು. ❖

ಐಫೋನ್ ಎಸ್‌ಇ 2022



ಅವಿನಾಶ್ ಬಿ.

ಆ್ಯಪಲ್ ಕಂಪನಿಯ ಅತ್ಯಂತ ಅಗ್ಗದ ಫೋನ್‌ನ ಸರಣಿಯೇ ಐಫೋನ್ ಎಸ್‌ಇ. ಇದರ 3ನೇ ಆವೃತ್ತಿಯ ಅಂದರೆ 2022ರ ಮಾದರಿ ಕಳೆದ ತಿಂಗಳು ಬಿಡುಗಡೆಯಾಗಿದ್ದು, ಪ್ರಜಾವಾಣಿಗೆ ರಿವ್ಯೂಗೆ ದೊರೆತ ಈ ಫೋನ್ ಕುರಿತು ಇಲ್ಲಿದೆ ಮಾಹಿತಿ.

ಐಫೋನ್ ಎಸ್‌ಇ 2022 ಮೂಲತಃ ಆಧುನಿಕತೆ ಮತ್ತು ಪಾರಂಪರಿಕ ಶೈಲಿಗಳ ಮಿಶ್ರಣದಂತಿದೆ. ಏಕೆಂದರೆ, ಇದರಲ್ಲಿ ಹೋಂ ಬಟನ್ ಇದೆ ಮತ್ತು ಅದರಲ್ಲಿ ಟಚ್ ಐಡಿ ಫಿಂಗರ್ ಪ್ರಿಂಟ್ ಸೆನ್ಸರ್ ಇದೆ. ಆದರೆ ಐಫೋನ್ 13 ಸರಣಿಯಲ್ಲಿರುವ ಅತ್ಯಾಧುನಿಕ ಪ್ರೊಸೆಸರ್ ಕೂಡ ಇದೆ.

ವಿನ್ಯಾಸ

4.7 ಇಂಚು ಎಲ್‌ಸಿಡಿ ಡಿಸ್‌ಪ್ಲೇ ಸ್ಕ್ರೀನ್ ಮತ್ತು ಹಿಂಭಾಗದ ಕವಚದಲ್ಲಿ ಗೊರಿಲ್ಲಾ ಗ್ಲಾಸ್ 5, ವೃತ್ತಾಕಾರದ ಅಂಚುಗಳು, ತೀರಾ ತೆಳು ಮತ್ತು ಹಗುರವೂ ಇರುವುದರಿಂದ ನೋಡುವುದಕ್ಕೆ ಆಕರ್ಷಕವಾಗಿದೆ. ಸುತ್ತ ಲೋಹದ ಚೌಕಟ್ಟು, ಡಿಸ್‌ಪ್ಲೇ ಮೇಲೆ ತುಸು ಹೆಚ್ಚು ಅನ್ನಿಸಬಹುದಾದ ಬೆಝೆಲ್ (ಖಾಲಿ ಜಾಗ) ಇರುವುದು ಹಳೆಯ ಐಫೋನ್ ಅನ್ನು ಹೋಲುತ್ತದೆ. ಐಒಎಸ್ 15.4 ಕಾರ್ಯಾಚರಣೆ ವ್ಯವಸ್ಥೆ, 256 ಜಿಬಿ ಸಂಗ್ರಹಣಾ ಸಾಮರ್ಥ್ಯ ಇದರಲ್ಲಿದೆ. ಬೆಝೆಲ್ ಹೆಚ್ಚಿರುವುದರಿಂದ, ಚಿತ್ರ ಅಥವಾ ವಿಡಿಯೊ ದೊಡ್ಡದಾಗಿ ನೋಡುವುದು ಸಾಧ್ಯವಿಲ್ಲ.

ಕ್ಯಾಮೆರಾ, ಬ್ಯಾಟರಿ

ಐಫೋನ್ ಎಸ್‌ಇ 2022ರಲ್ಲಿರುವುದು ಒಂದೇ ಕ್ಯಾಮೆರಾ ಲೆನ್ಸ್. 12 ಮೆಗಾಪಿಕ್ಸೆಲ್ ಸಾಮರ್ಥ್ಯದ ಈ ಕ್ಯಾಮೆರಾ ಸೆನ್ಸರ್ ಮೂಲಕ ಅತ್ಯುತ್ತಮ ಫೋಟೊಗಳನ್ನು ಮತ್ತು 4ಕೆ ವಿಡಿಯೊಗಳನ್ನು ಕೂಡ ಸೆರೆಹಿಡಿಯಬಹುದಾಗಿದೆ. ಮೂರ್ನಾಲ್ಕು ಕ್ಯಾಮೆರಾ ಲೆನ್ಸ್‌ಗಳಿರುವ ಆಂಡ್ರಾಯ್ಡ್ ಫೋನ್‌ಗಳಿಗಿಂತಲೂ, ಅಂದರೆ ಟೆಲಿಫೋಟೊ ಅಥವಾ ಅಲ್ಟ್ರಾ ವೈಡ್ ಲೆನ್ಸ್‌ಗಳಿಲ್ಲದೆಯೂ ಉತ್ತಮವಾಗಿ ಫೋಟೊಗಳು ಮೂಡಿಬರುತ್ತವೆ. ಆಪ್ಟಿಕಲ್ ಝೂಮ್ ಇದೆ. ಪ್ರತ್ಯೇಕವಾದ ನೈಟ್ ಮೋಡ್ ಇಲ್ಲದಿರುವುದರಿಂದ ರಾತ್ರಿಯ ಫೋಟೊಗಳಲ್ಲಿ ಸ್ವಲ್ಪ ಮಸುಕು ಕಾಣಿಸುತ್ತದೆ. ಇದರ ಪೋರ್ಟ್ರೇಟ್ ಮೋಡ್‌ನಲ್ಲಿ ಹಲವು ಆಯ್ಕೆಗಳಿದ್ದು, ಸ್ಟೇಜ್ ಲೈಟ್ ಆಯ್ಕೆ ಮಾಡಿದರೆ, ಕಪ್ಪು-ಬಿಳುಪಿನ ಫೋಟೊಗಳು ಸುಂದರವಾಗಿ ಮೂಡಿಬರುತ್ತವೆ.

ಮುಂಭಾಗದಲ್ಲಿ 7 ಮೆಗಾಪಿಕ್ಸೆಲ್ ಸಾಮರ್ಥ್ಯದ ಕ್ಯಾಮೆರಾ ಇದ್ದು, ಉತ್ತಮ ಸೆಲ್ಫಿಗಳನ್ನು ಸೆರೆಹಿಡಿಯುತ್ತದೆ. ಪೋರ್ಟ್ರೇಟ್ ಮೋಡ್ (ಹಿನ್ನೆಲೆ ಮಸುಕಾಗಿರುವ) ಫೋಟೊಗಳಂತೂ ಅತ್ಯುತ್ತಮ ಎಂದು ಹೇಳಬಹುದು.

2018 mAh ಬ್ಯಾಟರಿ ಸಾಮರ್ಥ್ಯವಿದ್ದು, ಅತ್ಯಾಧುನಿಕ ಚಿಪ್ ಸೆಟ್ ಮತ್ತು ಇತರ ಹಾರ್ಡ್‌ವೇರ್‌ಗಳಿಂದಾಗಿ ಚಾರ್ಜ್ ಇಡೀ ದಿನದ ಕಾರ್ಯಾಚರಣೆಗೆ ಯಾವುದೇ ಸಮಸ್ಯೆಯಾಗುವುದಿಲ್ಲ. 20W ವೇಗದ ಚಾರ್ಜಿಂಗ್ ಬೆಂಬಲಿಸುತ್ತದೆ. ಪೂರ್ತಿ ಚಾರ್ಜ್ ಆಗಲು ಸುಮಾರು ಒಂದು ಗಂಟೆ ಸಾಕಾಗುತ್ತದೆ.

ಕಾರ್ಯಾಚರಣೆ

ಎ15 ಬಯೋನಿಕ್ ಸಿಪಿಯು ಜೊತೆಗೆ 4-ಕೋರ್ ಜಿಪಿಯು, 16-ಕೋರ್ ನ್ಯೂರಲ್ ಎಂಜಿನ್ ಮತ್ತು 4ಜಿಬಿ RAM - ಇವುಗಳ ಸಮಾಗಮದಿಂದ ಫೋನ್‌ನಲ್ಲಿ ವೆಬ್ ಅಥವಾ ಬೇರಾವುದೇ ಆ್ಯಪ್‌ಗಳಲ್ಲಿ ಜಾಲಾಡುವುದು ತೀರಾ ಸುಲಲಿತವಾಗುತ್ತದೆ. 5ಜಿ ಕೂಡ ಬೆಂಬಲವಿದೆ. ಕಂಟ್ರೋಲ್ ಸೆಂಟರ್ ಹೋಗಬೇಕಿದ್ದರೆ ಹಳೆಯ ಐಫೋನ್‌ನಂತೆ ಕೆಳಗಿನಿಂದ ಮೇಲಕ್ಕೆ ಸ್ವೈಪ್ ಮಾಡಬೇಕಾಗುತ್ತದೆ.

ವಿಡಿಯೊ ಪ್ಲೇ, ಹೆಚ್ಚು ತೂಕದ ಗೇಮ್‌ಗಳನ್ನು ಆಡುವುದಕ್ಕಾಗಲೀ ಅಥವಾ ವೆಬ್ ಪುಟಗಳ ಬ್ರೌಸಿಂಗ್‌ಗಾಗಲೀ ಯಾವುದೇ ರೀತಿಯಲ್ಲೂ ಸಮಸ್ಯೆಯಾಗಲಿಲ್ಲ. ಇದರಲ್ಲಿರುವ ಸ್ಕ್ಯಾನ್ ಟೆಕ್ಸ್ಟ್ ಎಂಬ ವೈಶಿಷ್ಟ್ಯವು ನಾವು ಬರೆದಿಟ್ಟಿರುವುದನ್ನು ಸ್ಕ್ಯಾನ್ ಮಾಡಿದರೆ, ಸ್ವಯಂಚಾಲಿತವಾಗಿ ದಾಖಲಿಸಿಕೊಂಡು ಪಠ್ಯದ ರೂಪದಲ್ಲಿ ನೋಟ್ಸ್ ಆ್ಯಪ್‌ನಲ್ಲಿ ನಮೂದಿಸುತ್ತದೆ.

ಇದರಲ್ಲಿ ಲೈಟ್ನಿಂಗ್ ಚಾರ್ಜರ್ ಪೋರ್ಟ್ ಇದ್ದು, ಚಾರ್ಜರ್ (ಅಡಾಪ್ಟರ್) ನಾವೇ ಖರೀದಿಸಬೇಕಾಗುತ್ತದೆ. ಕೆಂಪು, ಬಿಳಿ ಹಾಗೂ ಕಪ್ಪು - ಹೀಗೆ ಮೂರು ಬಣ್ಣಗಳಲ್ಲಿ ಲಭ್ಯ. ಐಪಿ 67 ಶ್ರೇಣಿಯ ಜಲನಿರೋಧಕತೆ ಮತ್ತು ದೂಳು ನಿರೋಧಕತೆಯಿದೆ. 64GB, 128GB ಹಾಗೂ 256GB ಮೂರು ಆವೃತ್ತಿಗಳಿವೆ. ಬೆಲೆ ₹43,900ರಿಂದ ಪ್ರಾರಂಭ.

ಒಟ್ಟಾರೆ ಹೇಗಿದೆ?

ತೆಳು, ಹಗುರ, ಹೊಳೆಯುವ ಗಾಜಿನ ವಿನ್ಯಾಸದ ಪುಟ್ಟ ಐಫೋನ್ ಎಸ್‌ಇ ಮಾಡೆಲ್‌ನ ಕ್ಯಾಮೆರಾ ಗುಣಮಟ್ಟ ಚೆನ್ನಾಗಿದೆ. ಕಾರ್ಯಾಚರಣೆಯೂ ಸುಲಲಿತವಾಗಿದೆ. ಡಿಸ್‌ಪ್ಲೇ ಚಿಕ್ಕದಾದರೂ ಪರವಾಗಿಲ್ಲ ಎಂದುಕೊಳ್ಳುವವರಿಗೆ ಸೂಕ್ತ. ❖

ಕಾಂಕ್ರೀಟ್ ಪರೀಕ್ಷೆಗೆ ಪ್ರೋಬ್



ಸುಧೀರ ಎಚ್. ಎಸ್.

ಬೆಂಗಳೂರಿನಲ್ಲಂತೂ 'ವೈಟ್ ಟಾಪಿಂಗ್' ಎಂಬುದು ಎಲ್ಲರಿಗೂ ಯಾವುದಾದರೂ ಒಂದು ಸಂದರ್ಭದಲ್ಲಿ ತಿಳಿದಿರುವ ಸಂಗತಿ. ಊರಿನೊಳಗಿನ ಪ್ರಮುಖ ರಸ್ತೆಗಳಲ್ಲಿದ್ದರೂ ಹೊರ ವರ್ತುಲ ರಸ್ತೆಯಲ್ಲಿ ಸಂಚರಿಸಿದರೆ ವೈಟ್ ಟಾಪಿಂಗ್‌ನಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ವೈಟ್ ಟಾಪಿಂಗ್ ಎಂಬುದು ಕಾಂಕ್ರೀಟ್‌ನಿಂದ ಕೂಡಿರುವ ರಸ್ತೆಗೆ ಬಂದಿರುವ ಹೆಸರು. ಇನ್ನು ಈಚೆಗೆ ಯಾವುದೇ ಕಟ್ಟಡಗಳನ್ನು ನೋಡಿದರೂ ಅವನ್ನು ಕಾಂಕ್ರೀಟ್‌ನಿಂದ ಕಟ್ಟಿರುತ್ತಾರೆ. ಬರಿ ಕಟ್ಟಡಗಳಲ್ಲದೆ ಸೇತುವೆಗಳನ್ನು, ಅಣೆಕಟ್ಟುಗಳನ್ನು ಕೂಡ ಕಾಂಕ್ರೀಟ್‌ನಿಂದ ಕಟ್ಟಲಾಗುತ್ತದೆ. ಕಾಂಕ್ರೀಟ್ ನಿರ್ಮಿತ ಕಟ್ಟಡಗಳಾಗಲಿ, ಸೇತುವೆಗಳಾಗಲಿ ಅಥವಾ ರಸ್ತೆಗಳಾಗಲಿ ಇವೆಲ್ಲದರಲ್ಲಿ ಸಿಮೆಂಟ್‌ನ ಜೊತೆ ಉಕ್ಕಿನ ರೀಬಾರ್‌ಗಳನ್ನು ಕಾಂಕ್ರೀಟ್ ರಚನೆಯನ್ನು ಬಲವರ್ಧಿಸಲು ಬಳಸಲಾಗುತ್ತದೆ.

ಆದರೆ ಕಾಂಕ್ರೀಟ್‌ನಲ್ಲಿರುವ ಉಕ್ಕಿನ ರೀಬಾರ್‌ಗಳು ಹಲವಾರು ಕಾರಣಗಳಿಂದ ತುಕ್ಕು ಹಿಡಿಯುತ್ತದೆ. ಇದರಿಂದ ಕಾಂಕ್ರೀಟ್ ರಚನೆಯ ಬಲ ಕ್ಷೀಣಿಸುತ್ತದೆ. ಕಾಂಕ್ರೀಟ್ ರಚನೆಯಲ್ಲಿ ನೀರಿನ ಸೋರಿಕೆ, ರಾಸಾಯನಿಕಗಳ ಸಂಪರ್ಕ, ತಪ್ಪಾದ ಲವಣಾಂಶ ಮತ್ತು ಆಮ್ಲೀಯತೆಯಂತಹ ಹಲವಾರು ಅಂಶಗಳು ಉಕ್ಕಿನ ರೀಬಾರ್‌ಗಳು ತುಕ್ಕು ಹಿಡಿಯುವುದಕ್ಕೆ ಕಾರಣವಾಗಬಹುದು. ಸಾಧಾರಣವಾಗಿ ಎಲ್ಲ ಉಕ್ಕಿನ ರೀಬಾರ್‌ಗಳಿಗೆ ಆಂಟಿಕೊರೊಸಿವ್ ಲೇಪನಗಳನ್ನು ಬಳಸಿದ್ದರೂ ಇವು ತುಕ್ಕಿಗೆ ಒಳಗಾಗುತ್ತವೆ. ಹಾಗಾಗಿ ನಮ್ಮ ಆರೋಗ್ಯವನ್ನು ಸಕಾಲಿಕವಾಗಿ ಪರೀಕ್ಷಿಸಿದಂತೆ, ಕಾಂಕ್ರೀಟ್‌ನಲ್ಲಿ ಸಕಾಲದಲ್ಲಿ ತುಕ್ಕು ಪತ್ತೆ ಹಚ್ಚುವುದು ಅನಿವಾರ್ಯವಾಗಿದೆ. ಇದನ್ನು ಮುಂಚಿತವಾಗಿಯೇ ಕಂಡುಹಿಡಿದು ಸೂಕ್ತ ಕ್ರಮವನ್ನು ಕೈಗೊಂಡರೆ ಮುಂದೆ ಆಗುವ ಅನಾಹುತಗಳನ್ನು ತಡೆಗಟ್ಟಬಹುದು.

ಕಾಂಕ್ರೀಟ್‌ನಲ್ಲಿ ಹುದುಗಿರುವ ರೆಬಾರ್‌ಗಳಲ್ಲಿನ ತುಕ್ಕು ಪ್ರಮಾಣವನ್ನು ಮಾಪಿಸಲು ವಿಜ್ಞಾನಿಗಳು ಒಂದು ಹೊಸ ತಪಾಸಕವನ್ನು ಅಭಿವೃದ್ಧಿಪಡಿಸಿದ್ದಾರೆ. ಮಾಪನವನ್ನು ಮಾಡಲು ಇದನ್ನು ಕಾಂಕ್ರೀಟ್ ರಚನೆಯ ಮೇಲ್ಮೈಯಲ್ಲಿರಿಸಿ ಪರೀಕ್ಷೆ ಮಾಡಬಹುದು. ಇದಕ್ಕೆಂದೇ ಬೇಕಾಗುವ ಪ್ರೋಬ್ ಮತ್ತು ಸಂವೇದಕ ವಿನ್ಯಾಸ ಸುಧಾರಣೆಯಿಂದ ಹೊಸ ಸಿಗ್ನಲ್ ಪ್ರೊಸೆಸಿಂಗ್ ತಂತ್ರಗಳನ್ನು ರೂಪಿಸಿ ಸಾಧಾರಣ ಮಾಪನ ತಂತ್ರಗಳಿಗಿಂತ ಹೆಚ್ಚು ಸೂಕ್ಷ್ಮ ಮತ್ತು ನಿಖರವಾಗಿ ಮಾಪನ ಮಾಡಲು ಸಾಧ್ಯವಾಗುತ್ತದೆ. ಇದಕ್ಕೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಭಾಗಶಃ ಧನಸಹಾಯ ಕೂಡ ಲಭಿಸಿದೆ.

ಕಾಂಕ್ರೀಟ್‌ನ ಒಳಗಿರುವ ಉಕ್ಕಿನಲ್ಲಿ ತುಕ್ಕು ಹಿಡಿದಿರುವುದೇ ಎಂದು ಪರೀಕ್ಷಿಸಲು ಪ್ರಸ್ತುತವಾಗಿ ಅರ್ಧ-ಕೋಶದ ಸಂಭಾವ್ಯ ಮಾಪನ ವಿಧಾನವನ್ನು ಬಳಸಲಾಗುತ್ತದೆ. ಈ ವಿಧಾನದಲ್ಲಿ ಮಾಪಿಸುವ ಉಪಕರಣ ಉಕ್ಕಿನ ಸಂಪರ್ಕ ಹೊಂದುವಷ್ಟು ಕಾಂಕ್ರೀಟ್ ರಚನೆಯನ್ನು ಕೊರೆಯಬೇಕಾಗುತ್ತದೆ. ಇದರಿಂದ ತುಕ್ಕು ಹಿಡಿದ ಮತ್ತು ತುಕ್ಕು ಹಿಡಿಯದ ಉಕ್ಕಿನಲ್ಲಿ ಉಂಟಾಗುವ ಎಲೆಕ್ಟ್ರೋಕೆಮಿಕಲ್ ಗುಣಲಕ್ಷಣಗಳ ಬದಲಾವಣೆಯನ್ನು ವೋಲ್ಟೇಜ್ ವ್ಯತ್ಯಾಸದಿಂದ ಗುರುತಿಸಲಾಗುತ್ತದೆ. ಆದರೆ ಈ ವಿಧಾನವು ಕಾಂಕ್ರೀಟ್ ರಚನೆಯನ್ನು ತೊಂದರೆಗೊಳಿಸುವುದರ ಜೊತೆ ತುಕ್ಕು ಆಗಿರುವ ಸಂಭವನೀಯ ಅಂದಾಜನ್ನು ಮಾತ್ರ ತಿಳಿಸುತ್ತದೆಯೆ ಹೊರತು ತುಕ್ಕು ಆಗಿರುವ ಪ್ರಮಾಣವನ್ನು ತಿಳಿಸುವುದಿಲ್ಲ.

ಯಾವುದೇ ರೀತಿಯಲ್ಲಿ ಕಾಂಕ್ರೀಟ್ ರಚನೆಯನ್ನು ತೊಂದರೆಗೊಳಿಸದ ಪರೀಕ್ಷಾ ವಿಧಾನಗಳು ಸಾಧ್ಯವೇ ಎಂದು ಸಂಶೋಧನೆಯಲ್ಲಿ ತೊಡಗಿದ ತಂತ್ರಜ್ಞರು, ತುಕ್ಕನ್ನು ಪತ್ತೆ ಹಚ್ಚಲು ವಸ್ತುವಿನ ವಿದ್ಯುತ್, ಕಾಂತೀಯ ಅಥವಾ ಅಕೌಸ್ಟಿಕ್ ಗುಣಲಕ್ಷಣಗಳಲ್ಲಿನ ಬದಲಾವಣೆಗಳನ್ನು ಪರೀಕ್ಷಿಸಿದ್ದಾರೆ.

ತುಕ್ಕು ಹಿಡಿದಿರುವ ವ್ಯಾಪ್ತಿಯನ್ನು ನೇರವಾಗಿ ಅಳೆಯಲು ಪಲ್ಸ್ ಎಡ್ಡಿ ಕರೆಂಟ್ ಮಾಪನ ವಿಧಾನವನ್ನು ಪ್ರಸ್ತುತ ಸಂಶೋಧನೆಯಲ್ಲಿ ಬಳಸಿದ್ದಾರೆ. ಸುರುಳಿಯ ಮೂಲಕ ಹಾದುಹೋಗುವ ಕರೆಂಟ್ ಪಲ್ಸ್ ಕಾಂತೀಯ ಕ್ಷೇತ್ರವನ್ನು ಸೃಷ್ಟಿಸುತ್ತದೆ. ಅಂತಹ ಸುರುಳಿಯನ್ನು ಲೋಹದ ಮಾದರಿಯ ಬಳಿ ಇರಿಸಿದಾಗ, ಈ ಕಾಂತೀಯ ಕ್ಷೇತ್ರವು ಮಾದರಿಯಲ್ಲಿ ಎಡ್ಡಿ ಪ್ರವಾಹಗಳನ್ನು ಉಂಟುಮಾಡುತ್ತದೆ. ಸುರುಳಿಯಿಂದ ಉತ್ಪತ್ತಿಯಾಗುವ ಮೂಲ ಕಾಂತಕ್ಷೇತ್ರವನ್ನು ವಿರೋಧಿಸುವ ದ್ವಿತೀಯಕ ಕಾಂತೀಯ ಕ್ಷೇತ್ರವನ್ನು ಎಡ್ಡಿ ಪ್ರವಾಹಗಳು ಉತ್ಪಾದಿಸುತ್ತವೆ. ಪ್ರೋಬ್ ಒಳಗಿನ ಕಾಂತೀಯ ಕ್ಷೇತ್ರ ಸಂವೇದಕವು ದ್ವಿತೀಯ ಕಾಂತೀಯ ಕ್ಷೇತ್ರವನ್ನು ಪತ್ತೆ ಮಾಡುತ್ತದೆ ಮತ್ತು ಕಾಂತೀಯ ಕ್ಷೇತ್ರದ ಬಲಕ್ಕೆ ಪ್ರತಿಕ್ರಿಯೆಯಾಗಿ ವೋಲ್ಟೇಜ್ ಅನ್ನು ಉತ್ಪಾದಿಸುತ್ತದೆ. ತುಕ್ಕು ಹಿಡಿಯುವುದರಿಂದ ಉಕ್ಕಿನ ಮೇಲ್ಮೈಯಲ್ಲಿ ನಿರೋಧಕ ಪದರ ರಚನೆಯಾಗುವುದರಿಂದ, ಎಡ್ಡಿ ಪ್ರವಾಹದ ಶಕ್ತಿಯು ಕಡಿಮೆಯಾಗುತ್ತದೆ. ಸಂವೇದಕವು ಸೆನ್ಸರ್ ಇದನ್ನು ಕಡಿಮೆಯಾದ ದ್ವಿತೀಯಕ ಕಾಂತೀಯ ಕ್ಷೇತ್ರದ ಸಾಮರ್ಥ್ಯದ ಸಹಿ ಎಂದು ಪತ್ತೆ ಮಾಡುತ್ತದೆ.

ಪಲ್ಸ್ ಎಡ್ಡಿ ಕರೆಂಟ್ ವಿಧಾನವನ್ನು ವಾಣಿಜ್ಯಕವಾಗಿ ತೈಲ, ಅನಿಲ ಮತ್ತು ನೀರಿನ ಪೈಪ್‌ಲೈನ್‌ಗಳನ್ನು ಪರೀಕ್ಷಿಸಲು ಬಳಸಲಾಗುತ್ತದೆ. ಇಲ್ಲಾದರೆ ಒಂದು ಪ್ರೋಬ್ ಅನ್ನು ಪೈಪ್‌ನ ಮೇಲ್ಮೈಗೆ ಹತ್ತಿರದಲ್ಲಿ ಅಥವಾ ನೇರವಾಗಿ ಇರಿಸಬಹುದು. ಆದರೆ ಉಕ್ಕಿನ ರೆಬಾರ್‌ಗಳು ಕಾಂಕ್ರೀಟ್‌ನೊಳಗೆ ಕೆಲವೊಮ್ಮೆ ಆಳವಾಗಿ ಸೇರಿರುತ್ತದೆ. ಹಾಗಾಗಿ ಕಾಂಕ್ರೀಟ್ ರೆಬಾರ್‌ಗಳಲ್ಲಿ ತುಕ್ಕನ್ನು ಪತ್ತೆಹಚ್ಚಲು ಈ ವಿಧಾನವನ್ನು ಬಳಸುವುದು ಸವಾಲಾಗಿದೆ. ಇದಲ್ಲದೆ, ರಿಬಾರ್‌ಗಳು ಪೈಪ್‌ಗಳಿಗಿಂತ ತೆಳ್ಳಗಿರುತ್ತವೆ ಮತ್ತು ಕಡಿಮೆ ಮೇಲ್ಮೈ ವಿಸ್ತೀರ್ಣವನ್ನು ಹೊಂದಿರುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಸೂಕ್ಷ್ಮತೆ ಮತ್ತು ದುಬಾರಿ ಶೋಧಕಗಳು ಬೇಕಾಗುತ್ತವೆ. ಇದಕ್ಕೆಂದೇ, ಸಂಶೋಧಕರು ದುಬಾರಿಯಲ್ಲದ ಎಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಿಕೊಂಡು ಉನ್ನತ-ಕಾರ್ಯಕ್ಷಮತೆಯ ಪ್ರೋಬ್ ಅನ್ನು ವಿನ್ಯಾಸಗೊಳಿಸಿದ್ದು, ಇದು ಕಡಿಮೆ ವೆಚ್ಚದ ಪರಿಹಾರವಾಗಿದೆ.

ಅನಿಸೊಟ್ರೋಪಿಕ್ ಮ್ಯಾಗ್ನೆಟೋರೆಸಿಟಿವ್ (AMR, ಎಎಂಆರ್) ಸಂವೇದಕ ಎಂದು ಕರೆಯಲ್ಪಡುವ ಹೆಚ್ಚು ಸೂಕ್ಷ್ಮವಾದ ಮ್ಯಾಗ್ನೆಟಿಕ್ ಫೀಲ್ಡ್ ಸಂವೇದಕವನ್ನು ಬಳಸಿಕೊಂಡು ಸಂಶೋಧಕರು ಪರೀಕ್ಷೆಯ ಸೂಕ್ಷ್ಮತೆಯನ್ನು ಸುಧಾರಿಸಿದ್ದಾರೆ. ಎಎಂಆರ್ ಸಂವೇದಕ ಔಟ್‌ಪುಟ್ ಸಿಗ್ನಲ್‌ನಿಂದ ತುಕ್ಕು ಆಗಿರುವ ವ್ಯಾಪ್ತಿಯನ್ನು ಗುರುತಿಸಲು ಬಳಸಬಹುದಾದ ವೈಶಿಷ್ಟ್ಯಗಳನ್ನು ಗಣನೆ ಮಾಡಲು ಪ್ರಿನ್ಸಿಪಲ್ ಕಾಂಪೊನೆಂಟ್ ಅನಾಲಿಸಿಸ್ ಎಂಬ ತಿಳಿದಿರುವ ಗಣಿತದ ತಂತ್ರವನ್ನು ಬಳಸುವ ಹೊಸ ಸಿಗ್ನಲ್ ಪ್ರೊಸೆಸಿಂಗ್ ವಿಧಾನವನ್ನು ಅವರು ಕಂಡುಹಿಡಿದಿದ್ದಾರೆ.

ಪ್ರಯೋಗಾಲಯದಲ್ಲಿ ಕೃತಕವಾಗಿ ತುಕ್ಕು ಹಿಡಿದಿರುವ ರೆಬಾರ್‌ಗಳ ಮೇಲೆ ಪರೀಕ್ಷೆಯನ್ನು ನಡೆಸಲಾಗಿದೆ. ಏಕೆಂದರೆ ನೈಸರ್ಗಿಕ ತುಕ್ಕನ್ನು ಅಭಿವೃದ್ಧಿಗೊಳ್ಳಲು ಹಲವು ವರ್ಷಗಳು ಬೇಕಾಗುತ್ತವೆ. ಪರೀಕ್ಷೆಯಿಂದ 5.5 ಸೆಂ.ಮೀ. ದೂರದಲ್ಲಿ ರಿಬಾರ್‌ನಲ್ಲಿ ತುಕ್ಕನ್ನು ಪತ್ತೆ ಮಾಡಬಹುದೆಂದು ಸಂಶೋಧಕರು ಗಮನಿಸಿದರು. ಇದು ತುಕ್ಕಿನ ವ್ಯಾಪ್ತಿಯ ಪರೀಕ್ಷೆಯಲ್ಲಿಯ ಇದುವರೆಗಿನ ಯಾವುದೇ ರೀತಿಯ 'ಕಾಂಕ್ರೀಟ್ ರಚನೆಯನ್ನು ತೊಂದರೆಗೊಳಿಸದ ಪರೀಕ್ಷಾ ವಿಧಾನ'ಗಳಲ್ಲಿ ಇದುವರೆಗೆ ವರದಿ ಮಾಡಲಾಗಿರುವುದಕ್ಕಿಂತಲೂ ಇದು ಹೆಚ್ಚು ನಿಖರವಾದದ್ದು.

ಕಟ್ಟಡಗಳು, ರಸ್ತೆಗಳು, ಸೇತುವೆಗಳು – ಇವುಗಳ ನಿರ್ಮಾಣದಲ್ಲಿ ಭಾಗಿಗಳಾಗುವ ಹಲವು ಹಂತದ ವೃತ್ತಿಪರರು ಈ ಸಾಧನವನ್ನು ಬಳಸಿ, ತಮ್ಮ 'ಕಾಂಕ್ರೀಟ್ ನಿರ್ಮಾಣ'ದಲ್ಲಿ ಉಂಟಾಗಿರುವ ತುಕ್ಕಿನ ಪ್ರಮಾಣವನ್ನು ನೇರವಾಗಿ ಅಳೆಯಬಹುದು. ತುಕ್ಕಿನಿಂದ ಉಂಟಾಗುವ ಅಪಾಯಗಳಿಂದ ಪಾರಾಗಲು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಆಗ ಸಾಧ್ಯವಾಗುತ್ತದೆ.

ಬೆಂಗಳೂರಿನ ತುಮಕೂರು ರಸ್ತೆಯ ಫ್ಲೈ ಓವರ್‌ನಲ್ಲಿ ಕಾಣಿಸಿಕೊಂಡಿರುವ ತೊಂದರೆಯನ್ನು ಪತ್ತೆಹಚ್ಚಲು ಇದು ಸೂಕ್ತವೇ ಎಂಬುದನ್ನು ತಜ್ಞರೇ ಅಧ್ಯಯನ ನಡೆಸಿ ತಿಳಿಸಬೇಕು. ಒಂದಂತೂ ನಿಜ, ಹೇಗೆ ಸ್ಕ್ಯಾನಿಂಗ್ ಪರೀಕ್ಷೆಯು ನಮ್ಮ ಶರೀರದ ಆಂತರಿಕ ಸ್ಥಿತಿಯನ್ನು ತಿಳಿಸುವುದೋ, ಹಾಗೆಯೇ ಕಾಂಕ್ರೀಟ್ ಒಳಗಿರುವ ಉಕ್ಕಿನಲ್ಲಿ ತುಕ್ಕು ಹಿಡಿದಿದೆಯೇ ಎಂಬುದನ್ನು ಈ ಪ್ರೋಬ್ ತಿಳಿಸಬಲ್ಲದು. ❖

ಪಿಯುಸಿ ಪರೀಕ್ಷೆ ದಿಕ್ಸೂಚಿ

ಕ್ಷೇತ್ರಫಲ

ಗಣಿತಶಾಸ್ತ್ರ

ಮಾದರಿ ಪ್ರಶ್ನೆಗಳು

32) $\int x \cos x\, dx$ ಕಂಡುಹಿಡಿಯಿರಿ

$f(x) = x$ (ಮೊದಲನೇ ಉತ್ಪನ್ನ) ಮತ್ತು $g(x) = \cos x$ (ಎರಡನೇ ಉತ್ಪನ್ನ) ಇರಲಿ ನಂತರ ಭಾಗಶಃ ಅನುಕಲನದಿಂದ

$$\int x\cos x dx = x\int \cos x dx - \int\left[\frac{d}{dx}(x)\int \cos x\, dx\right]dx$$

$$= x\sin x - \int \sin x dx = x\sin x + \cos x + C$$

ನಾವು $f(x) = \cos x$ ಮತ್ತು $g(x) = x$ ಎಂದು ತೆಗೆದುಕೊಂಡಾಗ, ನಂತರ

$$\int x\cos x dx = \cos x\int x dx - \int\left[\frac{d}{dx}(\cos x)\int x dx\right]dx$$

$$= (\cos x)\frac{x^2}{2} + \int \sin x\frac{x^2}{2}dx$$

33) $\int_0^1 \frac{\tan^{-1} x}{1+x^2}dx$ ಕಂಡುಹಿಡಿಯಿರಿ.

ಉತ್ತರ:– $t = \tan^{-1} x$ ಎಂದು ಆದೇಶಿಸಿದರೆ

$dt = \frac{1}{1+x^2}dx$

ಆಗುವುದು ಮತ್ತು $x = 0$ ಆದಾಗ $t = 0$ ಮತ್ತು $x = 1$ ಆದಾಗ $t=\pi/4$ ಆಗುವುದು. ಹಾಗಾಗಿ x, 0 ದಿಂದ 1 ಕ್ಕೆ ಬದಲಾವಣೆಯಾದಂತೆ 't' 0 ದಿಂದ $\pi/4$ ಗೆ ಬದಲಾವಣೆಯಾಗುತ್ತದೆ.

$$\int_0^1 \frac{\tan^{-1}x}{1+x^2}dx = \int_0^{\frac{\pi}{4}} t\, dt = \left[\frac{t^2}{2}\right]_0^{\pi/4} = \frac{1}{2}\left[\frac{\pi^2}{16} - 0\right] = \frac{\pi^2}{32}.$$

34) $\int\left[\sqrt{\cot x} + \sqrt{\tan x}\right]dx$ ನ್ನು ಕಂಡುಹಿಡಿಯಿರಿ.

ಉತ್ತರ:–

$$I = \int\left[\sqrt{\cot x} + \sqrt{\tan x}\right]dx = \int\sqrt{\tan x}(1+\cot x)dx$$

$\tan x = t^2$ ಆದಾಗ $\sec^2 x\, dx = 2t\, dt$

ಅಥವಾ

$$dx = \frac{2t\, dt}{1+t^4}$$ ಆಗ $$I = \int t\left(1+\frac{1}{t^2}\right)\frac{2t}{(1+t^4)}dt$$

$$= 2\int\frac{(t^2+1)}{t^4+1}dt = 2\int\frac{\left(1+\frac{1}{t^2}\right)dt}{\left(t^2+\frac{1}{t^2}\right)} = 2\int\frac{\left(1+\frac{1}{t^2}\right)dt}{\left(t-\frac{1}{t}\right)^2+2}$$


$t-\frac{1}{t} = y$ ಹಾಕಿ, ಆಗ $\left(1+\frac{1}{t^2}\right)dt = dy$ ಆಗ

$$I = 2\int\frac{dy}{y^2+\left(\sqrt{2}\right)^2} = \sqrt{2}\tan^{-1}\frac{y}{\sqrt{2}} + C = \sqrt{2}\tan^{-1}\frac{\left(t-\frac{1}{t}\right)}{\sqrt{2}} + C$$

$$= \sqrt{2}\tan^{-1}\left(\frac{t^2-1}{\sqrt{2}t}\right) + C = \sqrt{2}\tan^{-1}\left(\frac{\tan x - 1}{\sqrt{2\tan x}}\right) + C$$

35) X–ಅಕ್ಷ, $y = x$ ಸರಳರೇಖೆ ಮತ್ತು $x^2+y^2= 32$ ವೃತ್ತಗಳಿಂದ ಆವೃತವಾದ ಮೊದಲ ಚತರ್ಥಾಂಕದಲ್ಲಿನ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ:–



$y = x$...... (1) ಮತ್ತು

$x^2 + y^2 = 32$ .... (2) ಗಳು ದತ್ತ ಸಮೀಕರಣಗಳು

ಇವೆರಡೂ ಸಮೀಕರಣಗಳನ್ನು ಏಕಕಾಲಿಕವಾಗಿ ಬಿಡಿಸಿದಾಗ ಅವು ಪ್ರಥಮ ಚತುರ್ಥಾಂಕದಲ್ಲಿ B(4, 4) ರಲ್ಲಿ ಸಂಧಿಸುತ್ತದೆ ಎಂದು ತಿಳಿಯುತ್ತದೆ.

ಅನ್ನು X–ಅಕ್ಷಕ್ಕೆ ಲಂಬವಾಗಿ ಎಳೆಯಿರಿ.

∴ ಬೇಕಾದ ಕ್ಷೇತ್ರಫಲ =

OBMO ಪ್ರದೇಶ ಕ್ಷೇತ್ರಫಲ + BMAB ಪ್ರದೇಶದ ಕ್ಷೇತ್ರಫಲ

OBMO ಪ್ರದೇಶದ ಕ್ಷೇತ್ರಫಲ $= \int_0^4 y dx = \int_0^4 x\, dx$

$$= \left(\frac{x^2}{2}\right)_0^4 = 8$$

BMAB ಪ್ರದೇಶದ ಕ್ಷೇತ್ರಫಲ $= \int_4^{4\sqrt{2}} y\, dx = \int_4^{4\sqrt{2}} \sqrt{32-x^2}\, dx$

$$= \left[\frac{1}{2}\cdot x\sqrt{32-x^2} + \frac{1}{2}\times 32\times\sin^{-1}\frac{x}{4\sqrt{2}}\right]_4^{4\sqrt{2}}$$

$$= \left(\frac{1}{2}\times 4\sqrt{2}\times 0 + \frac{1}{2}\times 32\times\sin^{-1}1\right) - \left(\frac{4}{2}\sqrt{32-16} + \frac{1}{2}\times 32\times\sin^{-1}\frac{4}{4\sqrt{2}}\right)$$

$$= 16\times\frac{\pi}{2} - 8 - 16\times\frac{\pi}{4} = (4\pi - 8) \quad \text{... (4)}$$

(3) ಮತ್ತು (4) ನ್ನು ಕೂಡಿದಾಗ

ಬೇಕಾದ ಕ್ಷೇತ್ರಫಲ = 4π ಎಂದಾಗುತ್ತದೆ

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾಳೆ ಏನು ಎಂಬ ಪ್ರಶ್ನೆಗಿಂತಲೂ ಇಂದು ಹೇಗೆ ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.

-ಶಿವರಾಮ ಕಾರಂತ

ಜನರನ್ನು ಸಂಕಷ್ಟಕ್ಕೆ ತಳ್ಳಿದ ಬೆಲೆ ಏರಿಕೆ ಮಾನವೀಯತೆ ಮರೆತ ಸರ್ಕಾರದ ನಡೆ

ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಪೈಪೋಟಿಗೆ ಬಿದ್ದಂತೆ ಬೆಲೆ ಏರಿಸುತ್ತಿರುವ ಪರಿಣಾಮ ಜನಸಾಮಾನ್ಯರು ಸುಲಭವಾಗಿ ಜೀವನ ನಿರ್ವಹಣೆ ಮಾಡಲಾಗದಂತಹ ವಾತಾವರಣ ಸೃಷ್ಟಿಯಾಗಿದೆ. ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಿಸಿದ ಬೆನ್ನಹಿಂದೆಯೇ ವಿದ್ಯುತ್ ದರವನ್ನೂ ಏರಿಸುವ ಮೂಲಕ ಗಾಯದ ಮೇಲೆ ಬರೆ ಎಳೆಯಲಾಗಿದೆ. ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಲಾಗದೆ, ಹಣದುಬ್ಬರವನ್ನೂ ನಿಯಂತ್ರಿಸಲಾಗದೆ ಕೈಚೆಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರನ್ನು ಸಂಪೂರ್ಣವಾಗಿ ಅಸಹಾಯಕ ಸ್ಥಿತಿಗೆ ತಳ್ಳಿ ತಮಾಷೆ ನೋಡುತ್ತಿವೆ. ಹೋಟೆಲ್‌ಗಳು ಸಹ ಆಹಾರ ದರವನ್ನು ಶೇ 10ರಷ್ಟು ಹೆಚ್ಚಿಸಿವೆ. ಕೋವಿಡ್ ನಂತರದ ಕಾಲಘಟ್ಟದಲ್ಲಿ ಉದ್ಯೋಗ ನಷ್ಟ, ಸಂಬಳ ಕಡಿತ, ವಹಿವಾಟು ಕುಸಿತ ಮೊದಲಾದ ಸಂಕಷ್ಟಗಳಿಂದ ಸಿಲುಕಿರುವ ಜನರ ಬದುಕು ಈಗಿನ ಬೆಲೆ ಏರಿಕೆಯ ಹೊಡೆತದಿಂದ ಮತ್ತಷ್ಟು ದುಸ್ತರವಾಗಿದೆ. 2021ರ ದೀಪಾವಳಿ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ತನ್ನ ಪ್ರಜೆಗಳ ಮೇಲೆ ಇದ್ದಕ್ಕಿದ್ದಂತೆ ಮಮತೆ ಉಕ್ಕಿ ಬಂತು. ಅದುವರೆಗೆ, ತೈಲೋತ್ಪನ್ನಗಳ ಬೆಲೆ ಏರಿಕೆಗೂ ತನಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದ ಸರ್ಕಾರ, 'ಹಬ್ಬದ ಕೊಡುಗೆ'ಯಾಗಿ ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಲ್ಲಿ ಕಡಿತ ಮಾಡಿತು. ದೇಶದ ಜನ ಈಗಷ್ಟೇ ಯುಗಾದಿ ಹಬ್ಬ ಮುಗಿಸಿದ್ದಾರೆ. ಅಷ್ಟರಲ್ಲಿ ತೈಲೋತ್ಪನ್ನಗಳ ದರ ಮತ್ತೆ ಗಗನಮುಖಿಯಾಗಿದೆ. ಎರಡೂ ಹಬ್ಬಗಳ ನಡುವಿನ ನಾಲ್ಕು ತಿಂಗಳ ಅವಧಿಯಲ್ಲಿ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಸ್ಥಿರವಾಗಿದ್ದರ ಮರ್ಮದ ಹಿಂದೆ ಈಗ ಯಾವ ಗುಟ್ಟೂ ಉಳಿದಿಲ್ಲ. ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಕಾರಣಕ್ಕಾಗಿ 137 ದಿನಗಳ ಕಾಲ ಸ್ಥಿರವಾಗಿದ್ದ ತೈಲ ಬೆಲೆಯು ಸರ್ಕಾರದ ಆಣತಿಯಂತೆ ಈಗ ಮತ್ತೆ ರೆಕ್ಕೆ ಬಿಚ್ಚಿದೆ ಅಷ್ಟೆ.



ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ತಡೆಯೊಡ್ಡಿ ಜನಸಾಮಾನ್ಯರ ನೋವಿಗೆ ಸ್ಪಂದಿಸಬೇಕಾದುದು, ಪ್ರಜೆಗಳ ಹಿತ ಬಯಸುವ ಯಾವುದೇ ಸರ್ಕಾರದ ಮುಖ್ಯ ಹೊಣೆ

ಜನಸಾಮಾನ್ಯರ ಹಿತಾಸಕ್ತಿ ರಕ್ಷಿಸುವ ಉದ್ದೇಶವೇ ತನಗೆ ಮುಖ್ಯ ಎಂದು ಕೇಂದ್ರ ಸರ್ಕಾರ ಹೇಳಿಕೊಂಡಿದೆ. ತೈಲ ಬೆಲೆ ಏರಿಕೆಯ ಪರಿಣಾಮವು ಜನರ ಬದುಕಿಗೆ ಅಗತ್ಯವಾದ ಎಲ್ಲ ವಸ್ತುಗಳ ದರದ ಮೇಲೂ ಆಗುತ್ತದೆ ಎನ್ನುವುದು ಸರ್ಕಾರದ ಹೊಣೆ ಹೊತ್ತವರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ನಾಲ್ಕು ತಿಂಗಳ ಅವಧಿಯಲ್ಲಿ ಜನರ ವರಮಾನದಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಏನಾದರೂ ಆಗಿದೆಯೇ? 'ಇಲ್ಲ' ಎನ್ನುವುದು ಸ್ವಯಂಸ್ಪಷ್ಟ. ಹಾಗಿರುವಾಗ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾಡಿರುವುದರಲ್ಲಿ ಜನರ ಹಿತಾಸಕ್ತಿ ರಕ್ಷಿಸುವಂತಹ ಯಾವ ಅಂಶ ಅಡಗಿದೆ? ಇವುಗಳೊಂದಿಗೆ ಈಗ ವಿದ್ಯುತ್ ದರ ಹೆಚ್ಚಳದ ಆಘಾತವನ್ನೂ ರಾಜ್ಯದ ಜನ ಅನುಭವಿಸಬೇಕಿದೆ. ಜನರ ಏದುಸಿರಿಗೆ ಕಾರಣವಾದ ಸರ್ಕಾರಗಳ ಈ ಕಣ್ಣಾಮುಚ್ಚಾಲೆ ಆಟವನ್ನು ಬಯಲು ಮಾಡಿ, ಅವುಗಳ ಧೋರಣೆಯ ವಿರುದ್ಧ ದೊಡ್ಡದಾಗಿ ಧ್ವನಿ ಎತ್ತಬೇಕಿದ್ದ, ಬೆಲೆ ಏರಿಕೆ ನಿರ್ಧಾರದ ಹಿಂದೆ ಸರಿಯುವಂತೆ ಮಾಡಬೇಕಿದ್ದ ವಿರೋಧಪಕ್ಷಗಳು ತಮ್ಮ ವಿರೋಧವನ್ನು ಕೇವಲ ಟ್ವೀಟ್ ಮಾಡುವುದಕ್ಕೆ ಸೀಮಿತಗೊಳಿಸಿವೆ. ಜನರ ನೋವಿಗೆ ಸ್ಪಂದಿಸುವಲ್ಲಿ, ಅವುಗಳೆಲ್ಲ ಒಟ್ಟಾಗಿ ನಿಂತು ಸರ್ಕಾರವನ್ನು ಪ್ರಶ್ನಿಸುವಲ್ಲಿ ಅವು ಸಂಪೂರ್ಣ ವಿಫಲವಾಗಿವೆ.

ತೈಲ, ವಿದ್ಯುತ್ ದರ ಏರಿಕೆಯು ಕಡಿಮೆ ಆದಾಯ ಇರುವ ವರ್ಗಗಳ ತಿಂಗಳ ಖರ್ಚಿನ ಮೇಲೆ ವಿಪರೀತ ಒತ್ತಡ ಉಂಟುಮಾಡುತ್ತದೆ ಎಂಬುದರಲ್ಲಿ ಅನುಮಾನ ಇಲ್ಲ. ಚುನಾವಣೆ ಬಂದಾಗ ಬೆಲೆ ಇಳಿಸಿದಂತೆ ಮಾಡಿ, ಫಲಿತಾಂಶ ಬಂದ ಬಳಿಕ ಕೊಟ್ಟದ್ದನ್ನೆಲ್ಲ ಕಸಿಯುವ ಇಂತಹ ಪ್ರವೃತ್ತಿ ಸರಿ ಅಲ್ಲ. ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ತುಳಿದ ಹಾದಿಯನ್ನು ಜನರಿಗೆ ಸೇವೆ ಒದಗಿಸುವ ಸರ್ಕಾರದ ಇತರ ಸಂಸ್ಥೆಗಳೂ ಹಿಡಿದರೆ ಜನ ಇನ್ನಷ್ಟು ಸಂಕಷ್ಟದ ದವಡೆಗೆ ಸಿಲುಕುತ್ತಾರೆ. ವಿದ್ಯುತ್ ಪೂರೈಕೆ ಜಾಲದಲ್ಲಿ ಆಗುತ್ತಿರುವ ಸೋರಿಕೆಯನ್ನು ತಡೆಗಟ್ಟಿದರೆ ಎಸ್ಕಾಂಗಳು ಜನರ ಮೇಲೆ ಹೆಚ್ಚಿನ ಹೊರೆ ಹಾಕುವ ಪ್ರಮೇಯವೇ ಬರುವುದಿಲ್ಲ. ಆದರೆ, ಎಸ್ಕಾಂಗಳಿಗೆ ಹಿಡಿದಂತಿರುವ ಸೋರಿಕೆ ತಡೆಗಟ್ಟುವುದಕ್ಕಿಂತ ಬೆಲೆ ಏರಿಕೆಯೇ ಸುಲಭದ ದಾರಿಯಾಗಿ ಸಿಕ್ಕಿದೆ. ದರ ಏರಿಕೆಗೆ ತಡೆಯೊಡ್ಡಿ ಜನಸಾಮಾನ್ಯರ ನೋವಿಗೆ ಸ್ಪಂದಿಸಬೇಕಾದುದು ಪ್ರಜೆಗಳ ಹಿತ ಬಯಸುವ ಯಾವುದೇ ಸರ್ಕಾರದ ಮುಖ್ಯ ಹೊಣೆ. ಜನರ ಸಂಕಷ್ಟದ ಸಮಯದಲ್ಲಿ ಆರ್ಥಿಕ ಲೆಕ್ಕಾಚಾರದ ಬದಲು ಮಾನವೀಯ ಅಂತಃಕರಣವನ್ನು ಅದು ತೋರಿಸಬೇಕು. ಆದರೆ, ಆ ಮನಃಸ್ಥಿತಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಇಲ್ಲ ಎಂಬುದನ್ನು ಅವುಗಳ ಧೋರಣೆ ಎತ್ತಿ ತೋರಿದೆ. ಏಕೆಂದರೆ, ಜನರ ಸಂಕಷ್ಟವನ್ನು ಕಣ್ಣಾರೆ ಕಂಡಮೇಲೂ ಎರಡೂ ಸರ್ಕಾರಗಳು ಅವರ ಮೇಲೆ ಅಮಾನವೀಯವಾಗಿ ಹೊರೆ ಹೊರಿಸಿವೆ.

ದಿನದ ಟ್ವೀಟ್

ದೃಢೀಕರಣದ ಅಗತ್ಯವಿದೆಯೇ?



ಆಸ್ಕರ್ ಮತ್ತು ಗ್ರ್ಯಾಮಿ ಪ್ರಶಸ್ತಿಗೆ ಸಂಬಂಧಿಸಿದ ಸಮಾರಂಭಗಳಲ್ಲಿ ಲತಾಜೀ ಅವರ ಬಗ್ಗೆ ಯಾವುದೇ ಗಮನಾರ್ಹವಾದ ಉಲ್ಲೇಖವಿಲ್ಲ ಎಂದಾದರೆ, ಅದು ಅವರಿಗೆ ಆಗುವ ನಷ್ಟವೇ ವಿನಾ ನಮಗಲ್ಲ. ಶ್ರೇಷ್ಠವಾದ ಮತ್ತು ಯಾವುದೇ ದೃಢೀಕರಣದ ಅಗತ್ಯವೇ ಇಲ್ಲದ ವಿಷಯಗಳಿಗೂ ಭಾರತೀಯರು ಪಶ್ಚಿಮದ ದೇಶಗಳಿಂದ ದೃಢೀಕರಣವನ್ನು ಬಯಸುವುದೇಕೆ?

ಅಭಿಷೇಕ್ ಸಿಂಘ್ವಿ, ಕಾಂಗ್ರೆಸ್ ವಕ್ತಾರ

ಕಿಡಿನುಡಿ



ಬೆಂಗಳೂರಿನಲ್ಲಿ ಮೂಲಸೌಕರ್ಯವನ್ನು ಸುಧಾರಿಸಲು ಯಾವ ಸರ್ಕಾರಕ್ಕೂ (ಕಾಂಗ್ರೆಸ್ ಅಥವಾ ಬಿಜೆಪಿ) ಏಕೆ ಸಾಧ್ಯವಾಗಲಿಲ್ಲ ಎಂಬುದು ಅರ್ಥವಾಗದೇ ಇರುವುದಕ್ಕೆ ಅದೇನೂ ರಾಕೆಟ್ ವಿಜ್ಞಾನವೇನಲ್ಲ. ವಿಷಯ ತುಂಬಾ ಸರಳವಾಗಿದೆ. ಸಮಸ್ಯೆಯ ಮೂಲವೇ ಭ್ರಷ್ಟ ಬಿಬಿಎಂಪಿ. ಇಂದು ಚೆನ್ನಾಗಿ ರೂಪಿಸಿದ ರಸ್ತೆಯೊಂದನ್ನು ಮರುದಿನವೇ ಅಗೆದುಹಾಕುವ ನಿದರ್ಶನವನ್ನು ಬೆಂಗಳೂರು ನಗರದಲ್ಲಿ ಮಾತ್ರ ಕಾಣಲು ಸಾಧ್ಯ.

ಅಮಿತ್ ರೈ, ನಾಗರಿಕ

25 ವರ್ಷಗಳ ಹಿಂದೆ

ಭಾನುವಾರ, 6-4-1997

- **ರಾಜ್ಯದಲ್ಲೂ 'ಎಸ್ಮಾ' ಜಾರಿ: ಲಾರಿ ಮುಷ್ಕರ ನಿಷೇಧ**

ಬೆಂಗಳೂರು, ಏ. 5– ಲಾರಿ ಮುಷ್ಕರ ನಿಯಂತ್ರಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ ಅದನ್ನು ಅಕ್ರಮ ಎಂದು ಸಾರಿರುವುದರ ಜತೆಗೇ ಸರಕು ಸಾಗಣೆಯನ್ನು ಅಗತ್ಯ ಸೇವಾ ನಿರ್ವಹಣೆ ಕಾಯ್ದೆ (ಎಸ್ಮಾ) ಅಡಿ ತಂದಿದೆ.

ಸರ್ಕಾರದ ನಿರ್ಧಾರವನ್ನು ಉಲ್ಲಂಘಿಸಿ ಮುಷ್ಕರದಲ್ಲಿ ಪಾಲ್ಗೊಳ್ಳುವ ಸರಕು ಸಾಗಣೆ ವಾಹನಗಳ ಮಾಲೀಕರ ವಿರುದ್ಧ ಈ ಕಾಯ್ದೆ ಅನ್ವಯ ಕಾನೂನು ಕ್ರಮ ಕೈಗೊಳ್ಳುವುದಾಗಿ ಸಾರಿಗೆ ಕಮಿಷನರ್ ಸುಭಾಷ್ ಭರಣಿ ಇಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರದ ಆದೇಶ ಉಲ್ಲಂಘಿಸಿ ಮುಷ್ಕರದಲ್ಲಿ ತೊಡಗುವ, ಮುಂದುವರಿಸುವ ವಾಹನಗಳ ಮಾಲೀಕರಿಗೆ ಒಂದು ವರ್ಷ ಜೈಲು ಶಿಕ್ಷೆ ಅಥವಾ ಎರಡು ಸಾವಿರ ರೂಪಾಯಿ ದಂಡ ಅಥವಾ ಎರಡನ್ನೂ ಒಟ್ಟಿಗೇ ವಿಧಿಸುವುದಕ್ಕೆ ಈ ಕಾಯ್ದೆಯಲ್ಲಿ ಅವಕಾಶವಿದೆ.

- **'ದೇವೇಗೌಡರನ್ನು ಪ್ರಧಾನಿ ಸ್ಥಾನದಿಂದ ತೆಗೆದರೆ ಪರಿಹಾರ ಸಾಧ್ಯ'**

ನವದೆಹಲಿ, ಏ. 5 (ಯುಎನ್ಐ)– 'ಎಚ್.ಡಿ. ದೇವೇಗೌಡರನ್ನು ಪ್ರಧಾನಿ ಪಟ್ಟದಿಂದ ತೆಗೆದುಹಾಕಿದರೆ ಮಾತ್ರ ಪ್ರಸಕ್ತ ರಾಜಕೀಯ ಬಿಕ್ಕಟ್ಟಿಗೆ ಪರಿಹಾರ ಸಾಧ್ಯ' ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಮಾಜಿ ಪ್ರಧಾನಿ ವಿ.ಪಿ. ಸಿಂಗ್ ಅವರಿಗೆ ಹೇಳುವ ಮೂಲಕ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಂಡಿದೆ.

ಸಿಂಗ್ ಅವರು ಚಿಕಿತ್ಸೆ ಪಡೆಯುತ್ತಿರುವ ಅಪೋಲೊ ಆಸ್ಪತ್ರೆಯಲ್ಲಿ ಅವರನ್ನು ಭೇಟಿ ಮಾಡಿದ ಕೇಸರಿ, ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿದರು. ತಮ್ಮ ಹಾಗೂ ಕಾಂಗ್ರೆಸ್ ನಾಯಕರ ವಿರುದ್ಧ ಪ್ರಧಾನಿ ಅವರು ತಳೆದಿರುವ ಮನೋಭಾವದ ಬಗ್ಗೆ ಕೇಸರಿ ದೂರಿದರು ಎನ್ನಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 6-4-1972


- **ಪುರಸಭೆಗಳಿಗೆ ವಾಹನ ತೆರಿಗೆ ಹಂಚಿಕೆ: ಅನ್ಯಾಯ ನಿವಾರಣೆಗೆ ನಿರ್ಧಾರ**

ಬೆಂಗಳೂರು, ಏ. 5– ಕಳೆದ ಒಂದೆರಡು ದಶಕಗಳಿಂದ ರಾಜ್ಯದ ಬಹುತೇಕ ಪುರಸಭೆಗಳಿಂದ ನೂರಾರು ಮನವಿ, ಪ್ರಾರ್ಥನೆಗಳಿಗೆ ಕಾರಣವಾದ 'ಮೋಟಾರು ವಾಹನ ತೆರಿಗೆಯ ಪಾಲು ಹಂಚಿಕೆಯಲ್ಲಿರುವ ಅನ್ಯಾಯವನ್ನು' ಸರಿಪಡಿಸಲು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ನಿರ್ಧರಿಸಿದ್ದಾರೆ.

'ಬಹಳ ವರ್ಷಗಳಿಂದ ಸರ್ಕಾರ ಈ ಸಮಸ್ಯೆಯನ್ನು ಎದುರಿಸಲಿಲ್ಲ, ಬಗೆಹರಿಸಲೂ ಇಲ್ಲ. ಈಗಲಾದರೂ ಅದನ್ನು ಬಗೆಹರಿಸಿ, ಪುರಸಭೆಗಳಿಗೆ ಹೆಚ್ಚು ಆದಾಯ ದೊರಕಿಸುವುದು ಸೂಕ್ತ' ಎಂದು ಮುಖ್ಯಮಂತ್ರಿಯವರು ಇಂದು ಸಂಜೆ ಲಾಲ್‌ಬಾಗ್‌ನಲ್ಲಿ ಬೆಂಗಳೂರು ನಗರಸಭೆ ಏರ್ಪಡಿಸಿದ್ದ ಪೌರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.

ಶೈಕ್ಷಣಿಕ ಪುನಶ್ಚೇತನಕ್ಕಾಗಿ ದೊಡ್ಡ ಮಟ್ಟದಲ್ಲಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುವ ಅಗತ್ಯವಿದೆ

ಶೈಕ್ಷಣಿಕ ಬದುಕು ಮರುಕಟ್ಟೋಣ



ವಿಶ್ಲೇಷಣೆ

ಟಿ.ಆರ್.ಚಂದ್ರಶೇಖರ

ಕೊರೊನಾ ಸಾಂಕ್ರಾಮಿಕದ ಕಾರಣದಿಂದಾಗಿ ನಮ್ಮ ಬಹುಪಾಲು ಮಕ್ಕಳು ಎರಡು ವರ್ಷಗಳ ಕಾಲ ಶಿಕ್ಷಣದಿಂದ ವಂಚಿತರಾದರು. ನಿಜ, ಶಿಕ್ಷಣ ಇಲಾಖೆಯು ಸಾಂಕ್ರಾಮಿಕದ ಕಾರಣದಿಂದ ವ್ಯತ್ಯಯವಾದ ಪಠ್ಯ ಬೋಧನೆಯನ್ನು ಸರಿದೂಗಿಸಲು ಆನ್‌ಲೈನ್ ತರಗತಿಗಳನ್ನು ಶ್ರಮವಹಿಸಿ ನಡೆಸಿತು. ಶಿಕ್ಷಕರು ಸಹ ಸೋಂಕಿಗೆ ಹೆದರದೆ ಮಕ್ಕಳಿಗೆ ಪಾಠ ಮಾಡಲು ಅನೇಕ ರೀತಿಯಲ್ಲಿ ಪ್ರಯತ್ನ ನಡೆಸಿದರು. ಆದರೆ ಸಾಂಕ್ರಾಮಿಕದ ತೀವ್ರತೆ ಎಷ್ಟಿತ್ತೆಂದರೆ, ಈ ಯಾವ ಪ್ರಯತ್ನಗಳಿಗೂ ನಮ್ಮ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಯಲಾಗಲಿಲ್ಲ. ಏಕೆಂದರೆ ಆ ಮಕ್ಕಳ ಕುಟುಂಬಗಳ ಬದುಕೇ ಮೂರಾಬಟ್ಟೆಯಾಯಿತು. ಪಾಲಕರು ಉದ್ಯೋಗ ಕಳೆದುಕೊಂಡರು. ಕೂಡಿಟ್ಟಿದ್ದ ಹಣವೆಲ್ಲ ಖಾಲಿಯಾಯಿತು. ಬಡಕುಟುಂಬಗಳಲ್ಲಿ ಮಕ್ಕಳು ಕೂಲಿಗೆ ಹೋಗಬೇಕಾಯಿತು.

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿನ, ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳ ಮೇಲೆ ಇದು ಬೀರಿದ ಪರಿಣಾಮ ಅಪಾರ. ರಾಜ್ಯದಲ್ಲಿ 1 ಕೋಟಿಗೂ ಹೆಚ್ಚಿರುವ ಒಟ್ಟು ಶಾಲಾ ಮಕ್ಕಳಲ್ಲಿ ಶೇ 61.59ರಷ್ಟು ಹಿಂದುಳಿದ ವರ್ಗದ ಮಕ್ಕಳಿದ್ದರೆ, ಶೇ 19.03ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ 7.61ರಷ್ಟು ಪರಿಶಿಷ್ಟ ಪಂಗಡದ ಮಕ್ಕಳಿದ್ದಾರೆ. ಈ ಗುಂಪಿನ ಮಕ್ಕಳಲ್ಲಿ ಶೇ 41.5ರಷ್ಟು ಒಬಿಸಿ, 52.25ರಷ್ಟು ಪರಿಶಿಷ್ಟ ಜಾತಿ ಮತ್ತು ಶೇ 61.91ರಷ್ಟು ಪರಿಶಿಷ್ಟ ಪಂಗಡದ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ನಗರ ಪ್ರದೇಶದ ಸ್ಥಿತಿವಂತ ಕುಟುಂಬದವರ ಮಕ್ಕಳು ಎಲ್ಲ ಅಡೆತಡೆಗಳನ್ನೂ ನೀಗಿಕೊಂಡು ಶಿಕ್ಷಣವನ್ನು ಮುಂದುವರಿಸಿದರು. ಉಳಿದ ಮಕ್ಕಳಿಗೆ ಇಂಟರ್‌ನೆಟ್ ಸಂಪರ್ಕ ಸಾಧ್ಯವಾಗದೆ, ವಿದ್ಯುತ್ ಕೊರತೆಯಿಂದಾಗಿ ಮತ್ತು ದುಡಿಮೆಯ ಒತ್ತಡದಿಂದಾಗಿ ಡಿಜಿಟಲ್ ಮೂಲಕ ಸುಗಮ ಕಲಿಕೆ ಸಾಧ್ಯವಾಗಿಲ್ಲ.

ಈ ಸಮಸ್ಯೆಯನ್ನು ಒಕ್ಕೂಟ ಸರ್ಕಾರವು 2022-23ನೇ ಸಾಲಿನ ಬಜೆಟ್ ಭಾಷಣದಲ್ಲಿ ಹೀಗೆ ಗುರುತಿಸಿದೆ: 'ಸಾಂಕ್ರಾಮಿಕದಿಂದ ಶಾಲೆಗಳು ಮುಚ್ಚಿಹೋದ ಕಾರಣ, ನಮ್ಮ ಮಕ್ಕಳು, ವಿಶೇಷವಾಗಿ ಗ್ರಾಮೀಣ ಪ್ರದೇಶದ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ದುರ್ಬಲ ವರ್ಗದ ಮಕ್ಕಳು ಎರಡು ವರ್ಷಗಳ ಶಾಲಾ ಶಿಕ್ಷಣವನ್ನು ಕಳೆದುಕೊಂಡಿದ್ದಾರೆ. ಇವರಲ್ಲಿ ಅತಿ ಹೆಚ್ಚು ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಕಲಿಯುವವರಾಗಿದ್ದಾರೆ. ಈ ಸಮಸ್ಯೆಯನ್ನು ಎದುರಿಸುವ ಸಲುವಾಗಿ ಪರಿಹಾರಾತ್ಮಕ ಕಲಿಕೆಯ ಅಗತ್ಯವನ್ನು ನಾವು ಮನಗಂಡಿದ್ದೇವೆ. ಈ ಸಮಸ್ಯೆಯ ಹಿನ್ನೆಲೆಯಲ್ಲಿ ಪರಿಹಾರಾತ್ಮಕ ಶಿಕ್ಷಣವನ್ನು ಹೇಗೆ ಕಟ್ಟಬೇಕು ಎಂಬುದನ್ನು ಗುರುತಿಸಲಾಗಿದೆ. ಈ ಉದ್ದೇಶಕ್ಕಾಗಿ 'ಒಂದು ತರಗತಿ- ಒಂದು ಟಿ.ವಿ. ವಾಹಿನಿ' ಎಂಬ 'ಪಿಎಮ್-ವಿದ್ಯಾ' ಕಾರ್ಯಕ್ರಮದಲ್ಲಿನ 12 ವಾಹಿನಿಗಳ ಸಂಖ್ಯೆಯನ್ನು 200ಕ್ಕೆ ಏರಿಸಲಾಗುವುದು. ಈ ಕಾರ್ಯಕ್ರಮದಿಂದ ರಾಜ್ಯ ಸರ್ಕಾರಗಳು 1ರಿಂದ 12ನೇ ತರಗತಿವರೆಗಿನ ಮಕ್ಕಳಿಗೆ ಪರಿಹಾರಾತ್ಮಕ ಶಿಕ್ಷಣ ಕೊಡುವುದು ಸಾಧ್ಯವಾಗುತ್ತದೆ'.

ಒಕ್ಕೂಟ ಸರ್ಕಾರವು ಸಮಸ್ಯೆಯನ್ನೇನೋ ಗುರುತಿಸಿದೆ. ಆದರೆ ಅದು ರೂಪಿಸುತ್ತಿರುವ ಡಿಜಿಟಲ್ ಪರಿಹಾರದಿಂದ ಸಮಸ್ಯೆಯ ನಿವಾರಣೆ ಸಾಧ್ಯವಿಲ್ಲ. 'ಒಂದು ದೇಶ- ಒಂದು ತರಗತಿ' ಎನ್ನುವ ಚೌಕಟ್ಟಿನಲ್ಲಿ ಸರ್ಕಾರವು ಪರಿಹಾರವನ್ನು ಯೋಚಿಸುತ್ತಿದೆ. ಈ ಪರಿಹಾರಾತ್ಮಕ ಪುನಶ್ಚೇತನ ಕಾರ್ಯಕ್ರಮಕ್ಕೆ ಒಕ್ಕೂಟ ಸರ್ಕಾರವು ಅನುದಾನವನ್ನು ನೀಡಿಲ್ಲ. ನಮ್ಮ ಕರ್ನಾಟಕ ಸರ್ಕಾರ ಇಂತಹ ಒಂದು ಬೃಹತ್ ಸಮಸ್ಯೆಯನ್ನು ಗುರುತಿಸಲೂ ಹೋಗಿಲ್ಲ. ಪರಿಹಾರದ ಬಗ್ಗೆ ಯಾವ ಸೂಚನೆಯೂ ರಾಜ್ಯದ 2022-23ನೇ ಸಾಲಿನ ಬಜೆಟ್ಟಿನಲ್ಲಿ ಇಲ್ಲ. ಕರ್ನಾಟಕ ಆರ್ಥಿಕ ಸಮೀಕ್ಷೆ 2021-22ರಲ್ಲಿಯೂ ಇದರ ವಿಶ್ಲೇಷಣೆಯಿಲ್ಲ. ಬರೀ ಪರೀಕ್ಷೆ, ಪರೀಕ್ಷೆ ಎಂದು ನಮ್ಮ ಶಿಕ್ಷಣ ಸಚಿವರು ಚಡಪಡಿಸಿದರೇ ವಿನಾ ಸಾಂಕ್ರಾಮಿಕದಿಂದ ಜರ್ಜರಿತರಾದ ಗ್ರಾಮೀಣ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಮಕ್ಕಳ ಶೈಕ್ಷಣಿಕ ಬದುಕನ್ನು ಮರುಕಟ್ಟುವ ಬಗ್ಗೆ ಯೋಚಿಸಿದಂತೆ ಕಾಣಲಿಲ್ಲ. ಈ ಮಕ್ಕಳ ಸಂಖ್ಯೆ 90 ಲಕ್ಷ ಮೀರುತ್ತದೆ. ಶೈಕ್ಷಣಿಕ ಪುನಶ್ಚೇತನಕ್ಕಾಗಿ ಕಾರ್ಯಕ್ರಮ ರೂಪಿಸದಿದ್ದರೆ ಅವರ ಭವಿಷ್ಯ ಅಂಧಕಾರಮಯವಾಗುತ್ತದೆ. ಅದರಲ್ಲೂ ಹಿಂದುಳಿದ ಜಿಲ್ಲೆಗಳಲ್ಲಿ ಅನೀಮಿಯ ಎದುರಿಸುತ್ತಿರುವವರು ಮತ್ತು ಬಹುಮುಖಿ ಬಡತನವನ್ನು ಅನುಭವಿಸುತ್ತಿರುವವರ ಹಿನ್ನೆಲೆಯಲ್ಲಿ ಈ ವಿಷಯದ ಬಗ್ಗೆ ಯೋಚಿಸಬೇಕಾಗಿದೆ.

ಈಗಲೂ ಕಾಲ ಮಿಂಚಿಲ್ಲ. ಹಿಜಾಬ್, ಸಮವಸ್ತ್ರ, ಟಿಪ್ಪು ಪಾಠ ಬಿಡಬೇಕೋ- ಭಗವದ್ಗೀತೆ ಪಾಠ ಸೇರಿಸಬೇಕೋ, ಹಲಾಲ್, ಮುಸ್ಲಿಮ್ ವ್ಯಾಪಾರಿಗಳಿಗೆ ಬಹಿಷ್ಕಾರ, ದೇವಸ್ಥಾನಗಳನ್ನು ಸರ್ಕಾರಿ ಹಿಡಿತದಿಂದ ಮುಕ್ತಗೊಳಿಸುವಂತಹ ಭಾವನಾತ್ಮಕ- ವಿಭಜನಾತ್ಮಕ ಸಂಗತಿಗಳತ್ತ ಗಮನ ಕೇಂದ್ರೀಕರಿಸುವುದನ್ನು ಬಿಟ್ಟು, ಸರ್ಕಾರವು ಜನರ ಬದುಕನ್ನು, ಅವರ ಜೀವನೋಪಾಯವನ್ನು ಕಟ್ಟುವುದರ ಬಗ್ಗೆ ಮತ್ತು ಸರಿಸುಮಾರು 90 ಲಕ್ಷ ಮಕ್ಕಳ ಶೈಕ್ಷಣಿಕ ಪುನಶ್ಚೇತನದ ಬಗ್ಗೆ ಗಮನ ನೀಡಬೇಕು.


ಕೊರೊನಾ ಸಾಂಕ್ರಾಮಿಕದ ಸಮಸ್ಯೆಯಿಂದಾಗಿ ನಮ್ಮ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳಿಗೆ ಏನೆಲ್ಲ ಸಮಸ್ಯೆಗಳು ಉಂಟಾಗಿವೆ ಎಂಬುದನ್ನು ತಳಸ್ಪರ್ಶಿಯಾಗಿ ಮತ್ತು ಪ್ರಾದೇಶಿಕವಾಗಿ ಮೊದಲು ಗುರುತಿಸಬೇಕಾದ ಅಗತ್ಯವಿದೆ. ಇದಕ್ಕಾಗಿ ತಜ್ಞರ ಸಮಿತಿಯೊಂದನ್ನು ರಚಿಸಬೇಕು. ಎರಡನೆಯದಾಗಿ, ಗ್ರಾಮೀಣ ಪ್ರದೇಶದಲ್ಲಿ ಡಿಜಿಟಲೀಕರಣಕ್ಕೆ ಸ್ವಲ್ಪ ಬಿಡುವು ಕೊಟ್ಟು ನೇರ ಪಾಠ ಹೇಳುವ ವಿಧಾನ, ಪರಿಣಾಮಕಾರಿ ಕಲಿಕೆ ಹಾಗೂ ಉಪಯುಕ್ತ ವರ್ಕ್‌ಬುಕ್ಕುಗಳನ್ನು ಸಿದ್ಧಪಡಿಸುವ ಬಗ್ಗೆ ನಾವು ಯೋಚಿಸಬೇಕು. ಬೆಂಗಳೂರೇ ಕರ್ನಾಟಕವಲ್ಲ ಎಂಬುದನ್ನು ನಾವು ಮೊದಲು ಗಮನಿಸಬೇಕು. ಜಿಲ್ಲಾ ಮಟ್ಟದಲ್ಲಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ವಿಶೇಷವಾಗಿ ಪರಿಹಾರಾತ್ಮಕ ಶಿಕ್ಷಣ ನೀಡುವುದಕ್ಕೆ ನಿವೃತ್ತರಾದವರು ಮತ್ತು ಕಾಲೇಜುಗಳಲ್ಲಿ ಕಲಿಯುತ್ತಿರುವ ಆಸಕ್ತ ಯುವಜನರನ್ನು ಒಳಗೊಂಡ ಪಡೆಯೊಂದನ್ನು ರಚಿಸುವ ಅಗತ್ಯವಿದೆ.

ಶಿಕ್ಷಕರ ವರ್ಗಾವಣೆ, ಬಡ್ತಿ, ಎಸ್‌ಡಿಎಂಸಿಯಂತಹ ಸಂಗತಿಗಳನ್ನು ಸದ್ಯಕ್ಕೆ ಪಕ್ಕಕ್ಕಿಟ್ಟು, ಶಿಕ್ಷಣ ವಂಚಿತ ಮಕ್ಕಳ ಶೈಕ್ಷಣಿಕ ಪುನಶ್ಚೇತನದ ಬಗ್ಗೆ ಶಿಕ್ಷಣ ಅಧಿಕಾರಿಗಳು ಗಮನ ನೀಡಬೇಕು. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಒಕ್ಕೂಟ ಸರ್ಕಾರ ಬಜೆಟ್ಟಿನಲ್ಲಿ ಪ್ರಕಟಿಸಿರುವ ಕಾರ್ಯಯೋಜನೆಗೆ ಅನುದಾನ ನೀಡುವಂತೆ ಒತ್ತಾಯಿಸಬೇಕು. ರಾಜ್ಯದಲ್ಲಿ 2022- 23ನೇ ಸಾಲಿನ ರೂಢಿಗತ ಶೈಕ್ಷಣಿಕ ಕಾರ್ಯಕ್ರಮದ ಜೊತೆಯಲ್ಲಿ ವಿಶೇಷ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಎರಡೂ ಜೊತೆ ಜೊತೆಯಲ್ಲಿ ನಡೆಯಬೇಕು.

ಈಗಾಗಲೇ ನ್ಯಾಯಾಲಯಗಳ ಕೆಲವು ಆದೇಶಗಳಿಂದಾಗಿ ಮತ್ತು ಸರ್ಕಾರಗಳ ಅಖಂಡ ವಿಧಾನದ ಅಭಿವೃದ್ಧಿ ನೀತಿಗಳಿಂದಾಗಿ ರಾಜ್ಯದ ಹಿಂದುಳಿದ ವರ್ಗ ಹೈರಾಣಾಗಿದೆ. ಇಂದು ಆಳುವ ವರ್ಗವು ಪ್ರತಿಪಾದಿಸುತ್ತಿರುವ 'ಎಲ್ಲ ಜಾತಿಗಳಲ್ಲಿಯೂ ಬಡವರಿದ್ದಾರೆ' ಎಂಬ ಪ್ರಣಾಳಿಕೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಒಬಿಸಿಗಳಿಗೆ ನ್ಯಾಯ ದೊರೆಯುವುದಿಲ್ಲ. ಈ ಪ್ರಣಾಳಿಕೆಯ ಹುಸಿತನವನ್ನು ಗಮನಿಸಬೇಕು. ಏಕೆಂದರೆ ಪರಿಶಿಷ್ಟ ಜಾತಿಯ ಅನಕ್ಷರಸ್ಥ ದಿನಗೂಲಿ ಮಹಿಳೆಯರ ಬಡತನ ಮತ್ತು ಪ್ರಭಾವಿ ಜಾತಿಯ ಅಕ್ಷರಸ್ಥ ಮಹಿಳೆಯರ ಬಡತನವನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಸರಿಯಲ್ಲ. ಯಾವುದನ್ನು ಜಾನ್ ರಾಲ್ಸ್ 'ಭಿನ್ನತೆಯ ನಿಯಮ' ಎನ್ನುತ್ತಾನೋ ಅದನ್ನು ನಾವು ಶ್ರದ್ಧೆಯಿಂದ ಪಾಲಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ಮಕ್ಕಳ ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡು ಒಂದು ಬೃಹತ್ ಶೈಕ್ಷಣಿಕ ಪುನಶ್ಚೇತನ ಕಾರ್ಯಕ್ರಮವನ್ನು ತುರ್ತಾಗಿ ಹಮ್ಮಿಕೊಳ್ಳಬೇಕು.



ಚುರುಮುರಿ



ಪೆಟ್ರೋಲ್ ಪ್ರಸಾದ

• ಮಣ್ಣೆರಾಜು

'ಪೆಟ್ರೋಲ್ ರೇಟು ಇವತ್ತು ಎಷ್ಟು ಹೆಚ್ಚಾಗಿದೆ?' ಬಂಕ್‌ನವನಿಗೆ ಶಂಕ್ರಿ ಕೇಳಿದ.

'ಜಾಸ್ತಿಯಿಲ್ಲಾ ಸಾರ್, ಎರಡೇ ರೂಪಾಯಿ ಹೆಚ್ಚಾಗಿದೆ' ಎಂದ.

'ದಿನಾ ನಿಮ್ಮ ಬಂಕಿನಲ್ಲೇ ಪೆಟ್ರೋಲ್ ಹಾಕಿಸಿಕೊಳ್ತೀವಿ, ನಮಗೆ ಡಿಸ್ಕೌಂಟ್ ಕೊಡಿ' ಸುಮಿ ಕೇಳಿಕೊಂಡಳು.

'ಚೌಕಾಸಿ ಮಾಡಲು ಇದೇನು ತರಕಾರಿ ಅಂಗಡಿನಾ ಮೇಡಂ?...' ಬಂಕಿನವ ನಕ್ಕ.

'ಗಾಳಿ, ನೀರು, ಪೆಟ್ರೋಲ್ ಇಲ್ಲದೆ ಮನುಷ್ಯರು ಬದುಕಲಾಗೊಲ್ಲ...' ಅಂದ ಶಂಕ್ರಿ.

'ಗಾಳಿ, ನೀರು, ಪೆಟ್ರೋಲ್ ಪ್ರಕೃತಿಯ ಕೊಡುಗೆ ಕಣ್ರೀ, ಬಾವಿ ತೋಡಿದರೆ ಪೆಟ್ರೋಲ್ ಸಿಗುತ್ತೆ, ಅದಕ್ಕೆ ಇಷ್ಟೊಂದು ರೇಟಾ?' ಎಂದಳು ಸುಮಿ.

'ನೀವೂ ಬಾವಿ ತೋಡಿ ಪೆಟ್ರೋಲ್ ತೆಗೆದು ಬಳಸಿಕೊಳ್ಳಿ, ಯಾರು ಬೇಡಾಂತಾರೆ?'

'ನಮ್ಮ ಜಾಗದಲ್ಲಿ ಬಾವಿ ತೋಡಿದರೆ ನೀರು ಸಿಗೋದೂ ಕಷ್ಟ' ಅಂದ ಶಂಕ್ರಿ.

'ಶ್ರೀಲಂಕಾದಲ್ಲಿ ದುಡ್ಡು ಕೊಟ್ರೂ ಪೆಟ್ರೋಲ್ ಸಿಗ್ತಿಲ್ಲವಂತೆ. ಭಗವಂತನ ಕೃಪೆಯಿಂದ ನಮ್ಮಲ್ಲಿ ಸಿಗ್ತಿದೆ. ಪೆಟ್ರೋಲನ್ನು ದೇವರ ಪ್ರಸಾದ ಅಂದುಕೊಳ್ಳಿ ಸಾರ್' ಬಂಕಿನವ ಬುದ್ಧಿ ಹೇಳಿದ.

'ನಮ್ಮ ಬದುಕಿನ ಬಂಡಿ ಚಲಿಸಬೇಕೆಂದರೆ ಬೈಕಿಗೆ ಪೆಟ್ರೋಲ್ ಹಾಕಿಸಲೇಬೇಕು'.

'ಹೌದು, ನೀವು ಪೆಟ್ರೋಲಿಗೆ ಕೊಡುವ ಹೆಚ್ಚುವರಿ ಹಣದಿಂದ ನಮ್ಮ ಸರ್ಕಾರವೂ ನಡೆಯಬೇಕು. ಸಂಸಾರ, ಸರ್ಕಾರ ಎರಡೂ ಪೆಟ್ರೋಲನ್ನು ಅವಲಂಬಿಸಿವೆ ಅನಿಸೋದಿಲ್ವೇ? ಇಂತಹ ಪವಿತ್ರ ಪೆಟ್ರೋಲಿಗೆ ಬೆಲೆ ಕಟ್ಟಬಾರದು ಅಲ್ವಾ ಸಾರ್?' ಅಂದ.

'ಹೌದು, ಪೆಟ್ರೋಲ್ ರೇಟ್ ಜಾಸ್ತಿಯಾಯ್ತು ಅಂತ ಹೆದರಿ ಬೈಕ್ ಮಾರಿ ಸೈಕಲ್‌ನಲ್ಲಿ ಓಡಾಡಲಾಗುತ್ತಾ?' ಎಂದಳು ಸುಮಿ.

'ಸೈಕಲ್ ತುಳಿದು ಬೆವರು ಹರಿಸುವ ಬದಲು, ಅಷ್ಟೇ ಬೆವರು ಹರಿಸಿ ಹೆಚ್ಚು ದುಡಿದು ಪೆಟ್ರೋಲ್ ಖರೀದಿ ಮಾಡಿದರೆ ಸುಖವಾಗಿ ಬಾಳಬಹುದು ಸಾರ್...' ಬಂಕಿನವ ಹೇಳಿದ.

ಶಂಕ್ರಿ, ಸುಮಿ ಮರು ಮಾತನಾಡದೆ ಬೈಕಿಗೆ ಪೆಟ್ರೋಲ್ ತುಂಬಿಸಿಕೊಂಡು ಹೊರಟರು.

ಸಂಗತ

ಕಲೆಗೆಲ್ಲಿಯದು ಗಡಿಯ ಎಲ್ಲೆ?

ಸಾಹಿತ್ಯ, ಲಲಿತಕಲೆ, ನಾಟಕ, ಜಾನಪದ ಕಲೆಗಳೆಲ್ಲವೂ ಸೀಮಾತೀತವಾದವು

• ಡಾ. ಡಿ.ಎಸ್.ಚೌಗಲೆ

'ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು/ ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ/ ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಂದ ಕರಕಷ್ಟ ಕೂಡಲಸಂಗಮದೇವಾ'... ಇವು ಬಸವಣ್ಣನವರ ವಚನದ ಸಾಲುಗಳು. ಕಾಗೆ ಮತ್ತು ಕೋಳಿಗಳಿಗಿರುವ ಕೂಡಿ ಉಣ್ಣುವ, ಬಾಳುವ ತಿಳಿವು, ಸಾಮೂಹಿಕ ಬದುಕು ಹಾಗೂ ಸಹಬಾಳ್ವೆಯ ಪ್ರಜ್ಞೆ ಮನುಷ್ಯನಿಗೆ ಇಲ್ಲವಲ್ಲ ಎಂದು ವಿಷಾದವುಂಟಾಗುತ್ತದೆ. ಅಂತಹ ಪ್ರೀತಿಯ ನಡೆಯನ್ನು ಮನುಷ್ಯ ಅನುಸರಿಸುವ ಅಗತ್ಯ ಇದೆ.

ವಿಜಯಪುರದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮರಾಠಿ ಚಿತ್ರದ ಲಾವಣಿ ಹಾಡು, ನೃತ್ಯಕ್ಕೆ ಬಂದ ವಿರೋಧದ ಕಾರಣಕ್ಕಾಗಿ ಇದನ್ನು ಪ್ರಸ್ತಾಪಿಸಬೇಕಾಯಿತು. ಅದಕ್ಕೆ ಚಪ್ಪಾಳೆ ತಟ್ಟಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂ ಪೀರ್ ವಾಲಿಕಾರ ಪ್ರೋತ್ಸಾಹಿಸಿದರು. ಇದು ಕನ್ನಡಿಗರಿಗೆ ಆದ ಅವಮಾನ, ಈ ಮರಾಠಿ ಹಾಡಿಗೆ ಕನ್ನಡಿಗರು ತೀವ್ರ ಅಸಮಾಧಾನಗೊಂಡಿದ್ದಾರೆ, ಇದು ಕನ್ನಡ ವಿರೋಧಿ ನಡೆ, ಈ ದುಃಸ್ಥಿತಿಗೆ ವಾಲಿಕಾರ ಅವರು ಕ್ಷಮೆ ಕೇಳಬೇಕು ಇಲ್ಲವೇ ರಾಜೀನಾಮೆ ನೀಡಬೇಕೆಂಬ ಆಗ್ರಹ ಕೇಳಿಬಂದಿದೆ ಎಂದೆಲ್ಲ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಈ ಕಾರಣಗಳನ್ನೇ ಎದುರಿಟ್ಟುಕೊಂಡು ಕಸಾಪ ರಾಜ್ಯ ಘಟಕದ ಅಧ್ಯಕ್ಷ ಮಹೇಶ್ ಜೋಶಿ ಅವರು ವಿವರಣೆ ಕೇಳಿ ವಾಲಿಕಾರ ಅವರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

'...ನೀವು ಮರಾಠಿ ನೃತ್ಯ ಆಯೋಜಿಸಿದ್ದು ಪರಿಷತ್ತಿನ ಶತಮಾನಕ್ಕೂ ಮೀರಿದ ಇತಿಹಾಸದಲ್ಲಿ ಕಪ್ಪುಚುಕ್ಕೆ. ಮಾಧ್ಯಮದವರು, ಕನ್ನಡಪರ ಸಂಘಟನೆಗಳು ಪ್ರತಿರೋಧ ವ್ಯಕ್ತಪಡಿಸಿ ಕ್ರಮಕ್ಕೆ ಒತ್ತಾಯಿಸುತ್ತಿದ್ದಾರೆ. ನೀವು ಈ ಕುರಿತು ತಕ್ಷಣ ವಿಷಾದ ವ್ಯಕ್ತಪಡಿಸಿ ಹೇಳಿಕೆಯನ್ನು ಮಾಧ್ಯಮಗಳಿಗೆ ನೀಡಬೇಕು ಮತ್ತು ಸಮರ್ಥನೀಯವಲ್ಲದ ಘಟನೆಯ ವಿವರಣೆಯನ್ನು ಪರಿಷತ್ತಿಗೆ ನೀಡಲು ಸೂಚಿಸಿದೆ'- ಹೀಗೆಂದು ಜೋಶಿ ಫರ್ಮಾನು ಹೊರಡಿಸುತ್ತಾರೆ.

ಸಾಹಿತ್ಯ, ಸಂಸ್ಕೃತಿ ಬಗ್ಗೆ ತಿಳಿವಿಲ್ಲದೆ ಅಪ್ರಬುದ್ಧತೆ ಮತ್ತು ಅಸಹಿಷ್ಣುತೆ ಮೆರೆದರೆ ಏನೆಲ್ಲ ಘಟಿಸಲು ಸಾಧ್ಯ ಎನ್ನುವುದಕ್ಕೆ ಇದನ್ನೊಂದು ಪ್ರಕರಣವಾಗಿಸಿರುವುದೇ ಸಾಕ್ಷಿ. ಭಾಷೆ, ಸಂಸ್ಕೃತಿಗಳು ಸೂಕ್ಷ್ಮಸಂವೇದಿ ರೂಪದಲ್ಲಿ ನಿರಂತರ ಸಂಚಾರಿಭಾವದಲ್ಲಿ ತೇಲುವಂಥವು. ಆದ್ದರಿಂದ ಸ್ವೀಕರಣ ಮತ್ತು ವಿಸರ್ಜನೆ ಪ್ರಕ್ರಿಯೆ ಕೂಡ ಸಹಜ ಕ್ರಿಯೆ. ಅದಕ್ಕಾಗಿ ಸಾಂಸ್ಕೃತಿಕ ಬಾಂಧವ್ಯ ಮತ್ತು ಕೊಡುಕೊಳ್ಳುವಿಕೆಯ ನೈಸರ್ಗಿಕ ರೂಢಿ ಪರಂಪರೆಯ ಕನಿಷ್ಠ ಪ್ರಜ್ಞೆ ಇರಬೇಕಾಗುತ್ತದೆ. ಅದಿರದಿದ್ದರೆ ರಾದ್ಧಾಂತಗಳು ನಿಲ್ಲುವುದಿಲ್ಲ.

ಜೋಶಿ ಅವರು ಒಂದು ಭಾಷೆಯ ಜನಪದ ನೃತ್ಯಕಲೆಯ ಬಗ್ಗೆ ಸಂಕುಚಿತ ನಿಲುವು ತಳೆದು, ಅದನ್ನು ಕಪ್ಪುಚುಕ್ಕೆ ಎಂದಿದ್ದಾರೆ. ಭಾಷೆಯ ರಾಜಕಾರಣ ಮಾಡುವ ದಾಂದಲೆಕೋರರನ್ನು ನಾವೆಲ್ಲರೂ ಕಠೋರ ಶಬ್ದಗಳಲ್ಲಿ ಖಂಡಿಸುತ್ತಲೇ ಬಂದಿದ್ದೇವೆ. ಸಾಹಿತ್ಯ, ಲಲಿತಕಲೆ, ರಂಗಭೂಮಿ, ಜಾನಪದ ಕಲೆಗಳೆಲ್ಲವೂ ಸೀಮಾತೀತವಾದವು. ಈ ಹಿಂದೆ ಕನ್ನಡದ ಲೇಖಕರಾದ ಗಿರೀಶ ಕಾರ್ನಾಡ ಮತ್ತು ಎಸ್.ಎಲ್.ಭೈರಪ್ಪ ಅವರನ್ನು ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನಕ್ಕೆ ಅತಿಥಿಗಳನ್ನಾಗಿ ಮರಾಠಿ ಭಾಷಿಕರು ಆಹ್ವಾನಿಸಿದ್ದನ್ನು ನೆನೆಯಬೇಕು.

ಇವತ್ತು ತಕರಾರು ಎತ್ತಿ ವಿಷಾದ ವ್ಯಕ್ತಪಡಿಸಲು ಒತ್ತಡ ಹೇರಿದ ಲಾವಣಿ ನೃತ್ಯವು ಮರಾಠಿಯ 'ತಮಾಶಾ' ಜನಪದ ನಾಟಕದ ಮೂಲದ್ದು. ಆ ತಮಾಶಾ ಲೋಕನಾಟ್ಯದ ಎಳೆಯನ್ನು ಇಟ್ಟುಕೊಂಡು ಪ್ರಸಿದ್ಧ ಸಾಹಿತಿ ಡಾ. ಆನಂದ ಯಾದವ ಕಾದಂಬರಿ ರಚಿಸಿದರು. ಅದನ್ನು ಆಧರಿಸಿ 'ನಟರಂಗ' ಎಂಬ ಚಿತ್ರ 2010ರಲ್ಲಿ ಬಂತು. ಇಪ್ಪತ್ತಕ್ಕೂ ಅಧಿಕ ಪುರಸ್ಕಾರಗಳನ್ನು ಪಡೆಯಿತು.

ಕನ್ನಡ- ಮರಾಠಿ ಜಾನಪದ ರಂಗಭೂಮಿಯಲ್ಲಿ ಬಹಳಷ್ಟು ಕೊಡುಕೊಳ್ಳುವಿಕೆಯಾಗಿದೆ. ತಮಾಶಾ ಲೋಕನಾಟ್ಯವು ಕನ್ನಡದ ಸಣ್ಣಾಟಗಳ ಜನ್ಮಕ್ಕೆ ಕಾರಣವಾಗಿದೆ. ಮಹಾರಾಷ್ಟ್ರದ 'ತಮಾಶಾ'ದ ಅನುಕರಣೆಯಿಂದ ಬೆಳಗಾವಿ ಜಿಲ್ಲೆಯ ಬಸರಿಗೆ ಗ್ರಾಮದ ಜನಪದ ಕವಿಯಿಂದ 'ರಾಧಾನಾಟ' ಜನ್ಮತಾಳಿತು. ರಾಧಾನಾಟದ ಚಿಮಣಾ, ಗಲಪೋಜಿ, ಸಖಾರಾಮ ತಾತ್ಯಾ ಪಾತ್ರಗಳ ಹೆಸರೇ ಮರಾಠಿ ಆಗಿವೆ. 'ಗೊಲ್ಲತಿ' ಪ್ರಕರಣವು ತಮಾಶಾದ 'ಗೌಳಣ'ದಿಂದ ಬಂದಿದ್ದು. ಅದು ಶ್ರೀಕೃಷ್ಣ ಪಾರಿಜಾತದಲ್ಲೂ ಇದೆ. ಮಥುರೆಗೆ ಹಾಲು, ಮೊಸರು ಮಾರಲು ಹೊರಟ ಗೊಲ್ಲತಿಯರನ್ನು ಕೃಷ್ಣ ತಡೆದು ಶೃಂಗಾರಿಕವಾಗಿ ಛೇಡಿಸುವನು.



ನೂರೈವತ್ತು ವರ್ಷಗಳಿಗಿಂತ ಹೆಚ್ಚು ಕಾಲದ ಪರಂಪರೆಯ ತಮಾಶಾ ಮೊದಲು ಭೇದಿಕವಾಗಿತ್ತು (ಆಧ್ಯಾತ್ಮಿಕ). ಪೇಶ್ವೆಗಳ ಕಾಲದಲ್ಲಿ ಅದು ಶೃಂಗಾರಕ್ಕೆ ಹೊರಳಿತು. ತಮಾಶಾದ ಜೀವವೇ ಲಾವಣಿ ನೃತ್ಯ ಮತ್ತು ಢೋಲಕಿ. ಧಾರವಾಡ ರಂಗಾಯಣ ಐದಾರು ವರ್ಷಗಳ ಹಿಂದೆ 'ತಮಾಶಾ'- ಮರಾಠಿ ಮಣ್ಣಿನ ಕನ್ನಡ ಗಮ್ಮತ್ತು ಎಂದು ಈ ಜನಪದ ನಾಟಕವನ್ನು ಕನ್ನಡದಲ್ಲೇ ಆಡಿಸಿತು. ಮೂಲದ ಕೆಲವು ಮರಾಠಿ ಲಾವಣಿಗಳನ್ನೇ ಯಥಾವತ್ತಾಗಿ ಬಳಸಲಾಗಿತ್ತು. ಗಡಿಭಾಗದಲ್ಲಿ ಆಡುವ 'ಸಂಗ್ಯಾ ಬಾಳ್ಯಾ' ಪಠ್ಯದ ಲಿಪಿಯು ಮರಾಠಿಯಾದರೆ, ಭಾಷೆ ಕನ್ನಡವಾಗಿರುತ್ತದೆ. ಇದು ವಾಸ್ತವ.

ಹೀಗೆ ಕನ್ನಡ- ಮರಾಠಿ ಕೊಡುಕೊಳ್ಳುವಿಕೆ ಪ್ರಕ್ರಿಯೆ ಅತ್ಯಂತ ಸಹಜ ರೂಪದಲ್ಲಿದೆ. ಈ ಸತ್ಯವನ್ನರಿತು ಪರಸ್ಪರ ಸಂಸ್ಕೃತಿಗಳನ್ನು ಗೌರವಿಸಬೇಕು. ಅದೊಂದೇ ನಮ್ಮೆದುರಿನ ಸಹಿಷ್ಣು ಮತ್ತು ಸಹಬಾಳ್ವೆಯ ದಾರಿ.

ಲೇಖಕ: ನಾಟಕಕಾರ, ಚಿತ್ರಕಲಾವಿದ

ವಾಚಕರ ವಾಣಿ

ಪ್ರಚಾರಕ್ಕೆ ತೋರುವ ಕಾಳಜಿ ವಿಚಾರಕ್ಕೆ ಯಾಕಿಲ್ಲ?

ಮತ್ತೊಂದು ಅಂಬೇಡ್ಕರ್ ಜಯಂತಿ ಬಂದಿದೆ. ಆಳುವ ಪಕ್ಷ, ವಿರೋಧ ಪಕ್ಷಗಳು ಸೇರಿದಂತೆ ವಿವಿಧ ಸಂಘಟನೆಗಳು ಅಂಬೇಡ್ಕರ್ ಜಯಂತಿ ಆಚರಿಸಲು ಭರದಿಂದ ತಯಾರಿ ನಡೆಸುತ್ತಿವೆ. ಸರ್ಕಾರವು ಅಂಬೇಡ್ಕರ್ ಜಯಂತಿ ಕುರಿತು ಸಾಲು ಸಾಲು ಜಾಹೀರಾತು ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿರಬಹುದು. ಆದರೆ ಅದು ಜಯಂತಿ ಪ್ರಚಾರಕ್ಕಾಗಿ ವಹಿಸುವ ಮುತುವರ್ಜಿಯನ್ನು ಅಂಬೇಡ್ಕರ್ ಅವರ ವಿಚಾರಗಳನ್ನು ಅಳವಡಿಸಿಕೊಳ್ಳುವಲ್ಲಿ ತೋರಿಸುತ್ತಿಲ್ಲ.

ಈ ಹಿಂದೆ ಅಂಬೇಡ್ಕರ್ ಅವರ ವಿಚಾರಗಳು ಜನಸಾಮಾನ್ಯರಿಗೆ ಸುಲಭವಾಗಿ ಮತ್ತು ಒಂದೇ ಕಡೆ ಸಿಗುವಂತೆ ಮಾಡಲು 'ಅಂಬೇಡ್ಕರ್ ಸಮಗ್ರ ಬರಹ ಭಾಷಣಗಳು' ಎಂಬ ಶೀರ್ಷಿಕೆಯಡಿ ಸುಮಾರು 22 ಕೃತಿಗಳನ್ನು ಸರ್ಕಾರದ ವತಿಯಿಂದಲೇ ಮುದ್ರಣ ಮಾಡಿ ಎಲ್ಲೆಡೆಯೂ ಕಡಿಮೆ ದರದಲ್ಲಿ ದೊರೆಯುವಂತೆ ಮಾಡಲಾಗಿತ್ತು. ಇದೊಂದು ಮಾದರಿ ಕಾರ್ಯವಾಗಿತ್ತು. ಇದರಿಂದ ಅಂಬೇಡ್ಕರ್ ಅವರನ್ನು ಅರಿತುಕೊಳ್ಳುವ ಇಚ್ಛೆಯುಳ್ಳ ಪ್ರತಿಯೊಬ್ಬರಿಗೂ ಅನುಕೂಲವಾಗಿತ್ತು. ಆದರೆ ಈ ಪುಸ್ತಕಗಳು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿಲ್ಲ. ಈ ಸಂಬಂಧ, ಮುದ್ರಣದ ಹೊಣೆ ಹೊತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒಂದು ವರ್ಷದಿಂದ ಅನೇಕ ಬಾರಿ ಕರೆ ಮಾಡಿದಾಗಲೂ ಅದೇ ಸಿದ್ಧ ಮಾದರಿಯ 'ಪ್ರತಿಗಳು ಲಭ್ಯವಿಲ್ಲ, ಸರ್ಕಾರ ಹಣಕಾಸಿನ ಒಪ್ಪಿಗೆ ನೀಡಿದ ತಕ್ಷಣ ಪ್ರತಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ' ಎಂಬ ಉತ್ತರ ದೊರೆಯುತ್ತಿದೆ. ವಾಸ್ತವದಲ್ಲಿ ಎರಡು ವರ್ಷಗಳಿಂದ ಈ ಸರಣಿ ಪುಸ್ತಕಗಳ ಮುದ್ರಣವೇ ಸ್ಥಗಿತವಾಗಿದೆ. ಪುಸ್ತಕಗಳನ್ನು ಮುದ್ರಿಸಲೂ ಹಣವಿಲ್ಲದಷ್ಟು ಬಡವಾಗಿದೆಯೇ ಸರ್ಕಾರ? ಇದು, ಅಂಬೇಡ್ಕರ್ ಅವರ ವಿಚಾರಗಳ ಕುರಿತು ಸರ್ಕಾರ ಹೊಂದಿರುವ ಧೋರಣೆಯನ್ನು ತೋರಿಸುತ್ತದೆ. ಇದೊಂದು ಗಂಭೀರ ನಿರ್ಲಕ್ಷ್ಯವಾಗಿದ್ದು, ಸಂಬಂಧಪಟ್ಟವರು ತಕ್ಷಣವೇ ಕ್ರಮ ಕೈಗೊಂಡು, ಅಂಬೇಡ್ಕರ್ ವಿಚಾರಧಾರೆ ಎಲ್ಲರಿಗೂ ಎಲ್ಲೆಡೆಯೂ ದೊರೆಯುವಂತೆ ಮಾಡಲಿ.

ಸುರೇಶ ಮಾ. ತಾಕತರಾವ, ಹಲ್ಯಾಳ, ಅಥಣಿ

ತಾತ ಹಾಕಿದ ಮೊಕದ್ದಮೆಗೆ ಮೊಮ್ಮಕ್ಕಳ ಪರಿತಾಪ!

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರಕ್ಕೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದ ಶಾಸಕ ಮುನಿರತ್ನ ಅವರ ಗೆಲುವನ್ನು ಅನೂರ್ಜಿತ ಎಂದು ಘೋಷಿಸಬೇಕು ಎಂಬ ತಕರಾರು ಅರ್ಜಿಯನ್ನು ಹೈಕೋರ್ಟ್ ಇದೀಗ ಕೈಗೆತ್ತಿಕೊಂಡಿದೆ ಎಂದು ವರದಿಯಾಗಿದೆ. ಆ ಚುನಾವಣೆ ನಂತರ ಮುನಿರತ್ನ ಅವರು ಅಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೊಂದು ಪಕ್ಷ ಸೇರಿ, ಉಪಚುನಾವಣೆ ಸಹ ನಡೆದು, ಅದರಲ್ಲೂ ಗೆದ್ದು ಈಗ ಶಾಸಕರಾಗಿದ್ದಾರೆ, ಸಚಿವರಾಗಿದ್ದಾರೆ. ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳಿಂದ ತ್ವರಿತಗತಿಯಲ್ಲಿ ತೀರ್ಪು ಬಂದರೆ ಒಳ್ಳೆಯದು ಮತ್ತು ಅದು ಅಪೇಕ್ಷಿತ ಕೂಡಾ.

ತಡವಾಗಿ ಬರುವ ತೀರ್ಪುಗಳು ಅನೇಕ ಸಂದರ್ಭಗಳಲ್ಲಿ ಪರಿಣಾಮವನ್ನು ಗೌಣವಾಗಿಸುತ್ತವೆ. ನಾನಾ ಕಾರಣಗಳಿಂದ ವಿಚಾರಣೆಗಳು ಹತ್ತಾರು ವರ್ಷಗಳಷ್ಟು ಸುದೀರ್ಘ ಸಮಯ ತೆಗೆದುಕೊಳ್ಳುತ್ತವೆ. ಇನ್ನು ಸಿವಿಲ್ ಕೋರ್ಟುಗಳದ್ದಂತೂ ಕೇಳುವಂತೆಯೇ ಇಲ್ಲ. ತಾತ ಹಾಕಿದ ಮೊಕದ್ದಮೆಗೆ ಮಕ್ಕಳೂ ಮೊಮ್ಮಕ್ಕಳೂ ಪರಿತಪಿಸುವ ಸ್ಥಿತಿ ಬಂದೊದಗಿರುತ್ತದೆ. ನ್ಯಾಯದಾನ ಪ್ರಕ್ರಿಯೆಯು ತ್ವರಿತಗತಿಯಲ್ಲಿ ಆಗುವ ದಿಸೆಯಲ್ಲಿ ಉಪಕ್ರಮಗಳು ಜರುಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಕಾಲ– ಕಾಯಿಲೆ!

ಬೇಸಗೆಯಲ್ಲಿ
ಮಲೆನಾಡಿನಲ್ಲಿ
ಕರಾವಳಿಯಲ್ಲಿ
ಮಂಗನ ಕಾಯಿಲೆ!
ಅಂತಿರಲಿ.
ಸದಾಕಾಲ, ಸರ್ವತ್ರ
ಬಹುಪಾಲು
ರಾಜಕಾರಣಿಗಳಿಗೆ
'ಮಂಗನ ಕಾಯಿಲೆ!'

ಸಿ.ಪಿ.ಕೆ., ಮೈಸೂರು

ಬರದ ನಾಡಲ್ಲಿ ಬದಲಾಗಲಿ ಕಚೇರಿ ವೇಳೆ

ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಉತ್ತರ ಕರ್ನಾಟಕದ ಅದರಲ್ಲೂ ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಜಿಲ್ಲೆಗಳ ಸರ್ಕಾರಿ ಕಚೇರಿಯ ಸಮಯ ಬದಲಾವಣೆಯ ಬಗ್ಗೆ ಸರ್ಕಾರ ಗಮನಹರಿಸಬೇಕು. ಬರದ ನಾಡು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸರ್ಕಾರಿ ನೌಕರರು ದೈನಂದಿನ ಕಾರ್ಯ ನಿರ್ವಹಿಸಲು ಕಷ್ಟಕರವಾಗುತ್ತದೆ ಮತ್ತು ಆರೋಗ್ಯದಲ್ಲಿ ಏರುಪೇರಾಗುತ್ತದೆ. 'ದೆಹಲಿಯಲ್ಲಿ ಕಲಬುರಗಿ ಜಿಲ್ಲೆಗಿಂತ ಹೆಚ್ಚಿನ ತಾಪಮಾನ ಇದ್ದರೂ ಅಲ್ಲಿ ಕಚೇರಿ ಸಮಯ ಬದಲಾವಣೆ ಮಾಡಿಲ್ಲ' ಎಂಬ ಹೇಳಿಕೆಯು ಅಸಂಬದ್ಧವಾದುದು.

ಶಿವಾನಂದ ಹಂಡಿ, ವಿಜಯಪುರ

ಬೆಳೆಸದಿದ್ದರೆ ಓದಿನ ಅಭಿರುಚಿ...

'ಓದು ತೊರೆವ ನಾಡು ಬೆಳೆದೀತು ಹೇಗೆ?' ಎಂಬ ಸದಾಶಿವ್ ಸೊರಟೂರು ಅವರ ಲೇಖನಕ್ಕೆ (ಸಂಗತ, ಏ. 5) ಪೂರಕವಾಗಿ ಈ ಪ್ರತಿಕ್ರಿಯೆ. ಕಳೆದ ವಾರ ಪತ್ರಿಕೆಯ ಬಗ್ಗೆ ವಿಚಾರಿಸಲು ಪುಸ್ತಕದ ಅಂಗಡಿಗೆ ಹೋಗಿದ್ದೆ. 'ಬಹಳಷ್ಟು ದಿನವಾಯಿತು ಸರ್, ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಮಾರುವುದನ್ನು ಬಿಟ್ಟು' ಎಂದು ಬಹಳ ಬೇಸರದಿಂದ ಹೇಳಿದರು. ಇದಕ್ಕೆ ಕಾರಣ ಏನಾದರೂ ಇದ್ದಿರಬಹುದು. ಅನುಭವಕ್ಕೆ ಬಂದದ್ದನ್ನು ಇಲ್ಲಿ ಉಲ್ಲೇಖಿಸಿದ್ದೇನೆ. ಒಟ್ಟಾರೆ ಓದುವ ಅಭಿರುಚಿ ಕ್ಷೀಣಿಸಿರುವುದಂತೂ ದಿಟ.

ಗ್ರಂಥಾಲಯಗಳಲ್ಲಿ ಓದುಗರೇನೋ ಕಾಣುತ್ತಾರೆ. ಆದರೆ ಅವರಲ್ಲಿ ಬಹುತೇಕರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರು ಆಗಿರುತ್ತಾರೆ. ಮನೆಗಳಲ್ಲಿ ಪುಸ್ತಕದ ರಾಶಿಗಳು ಇರುತ್ತವೆ. ಅವು ಈ ಹಿಂದೆ ಮನೆಯ ಮಕ್ಕಳು ವೃತ್ತಿಪರ ಪ್ರವೇಶ ಪರೀಕ್ಷೆಗೆ ಓದಿದವು ಆಗಿರುತ್ತವೆ. ಮನೆಯಲ್ಲಿನ ವಿದ್ಯಾವಂತರು, ಶಿಕ್ಷಕರು, ವಿವಿಧ ನೌಕರರು ಮಕ್ಕಳಲ್ಲಿ ಓದಿನ ಅಭಿರುಚಿಯನ್ನು ಬೆಳೆಸಬೇಕಾಗಿದೆ. ಇಲ್ಲದೇಹೋದಲ್ಲಿ ನಾಡಿನ ಭವಿಷ್ಯದ ಪ್ರಜೆಗಳು ಬೌದ್ಧಿಕ ದಾರಿದ್ರ್ಯ ಹೊಂದುವ ಅಪಾಯ ಕಟ್ಟಿಟ್ಟ ಬುತ್ತಿ.

ಮಂಜುನಾಥ ಸ್ವಾಮಿ ಕೆ.ಎಂ., ಶ್ರೀರಾಮನಗರ, ಗಂಗಾವತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಮಸೂದೆ–2022

ಜನರ ಖಾಸಗಿತನಕ್ಕೆ ಧಕ್ಕೆ

• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ಅಪರಾಧಿ, ಆರೋಪಿ ಮತ್ತು ಯಾವುದೇ ವ್ಯಕ್ತಿಯ ದೈಹಿಕ, ಜೈವಿಕ ಮಾದರಿಗಳನ್ನು ಸಂಗ್ರಹಿಸುವ ಅಧಿಕಾರವನ್ನು ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಮತ್ತು ಜೈಲಿನ ಮುಖ್ಯ ವಾರ್ಡನ್ ದರ್ಜೆಯ ಸಿಬ್ಬಂದಿಗೂ ನೀಡುವ 'ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಮಸೂದೆ–2022'ಕ್ಕೆ ಲೋಕಸಭೆಯಲ್ಲಿ ಅನುಮೋದನೆ ದೊರೆತಿದೆ. ಅಪರಾಧಿಗಳ ಮಾತ್ರವಲ್ಲ, ದೇಶದ ಯಾವುದೇ ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆ ತರುವಂತಹ ಅಂಶಗಳಿರುವ ಈ ಮಸೂದೆಗೆ ಸದನದ ಒಳಗೆ ಮತ್ತು ಹೊರಗೆ ಭಾರಿ ವಿರೋಧ ವ್ಯಕ್ತವಾಗಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಸೂಚಿಸಿದ್ದ 24 ತಿದ್ದುಪಡಿಗಳನ್ನು ಕಡೆಗಣಿಸಿ ಆಡಳಿತ ಪಕ್ಷವು ಮಸೂದೆಯನ್ನು ಅಂಗೀಕಾರ ಮಾಡಿಕೊಂಡಿದೆ.

ಈಗ ಜಾರಿಯಲ್ಲಿರುವ ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಕಾಯ್ದೆ–1920ಕ್ಕೆ ಹಲವು ಬಾರಿ ತಿದ್ದುಪಡಿ ತರಲಾಗಿದೆ. ಆದರೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಈಗ ಜಾರಿ ತರಲು ಹೊರಟಿರುವ ತಿದ್ದುಪಡಿಯು, ಪೊಲೀಸರಿಗೆ ಮತ್ತು ಜೈಲಿನ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುತ್ತದೆ. ತಪ್ಪಿತಸ್ಥ, ಬಂಧಿತ, ಆರೋಪಿ, ಶಂಕಿತ ಮತ್ತು ಪೊಲೀಸ್ ವಶದಲ್ಲಿರುವ ವ್ಯಕ್ತಿಗಳ ಮಾತ್ರವಲ್ಲದೆ, ಯಾವುದೇ ವ್ಯಕ್ತಿಯ ಜೈವಿಕ ಮಾದರಿಗಳನ್ನು ಸಂಗ್ರಹಿಸುವ ಅಧಿಕಾರವನ್ನು ಈ ಮಸೂದೆ ನೀಡುತ್ತದೆ.

ಇದು ನಾಗರಿಕರ ಖಾಸಗಿತನಕ್ಕೆ ಧಕ್ಕೆಯುಂಟು ಮಾಡುತ್ತದೆ ಎಂಬುದು ವಿರೋಧ ಪಕ್ಷಗಳ ಕಳವಳ. ಜತೆಗೆ ಈ ಅಧಿಕಾರವು ದುರ್ಬಳಕೆ ಆಗುವ ಸಾಧ್ಯತೆ ಅತ್ಯಧಿಕವಾಗಿದೆ ಎಂಬ ಅಪಾಯವನ್ನೂ ವಿಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಗುರುತಿಸಿದ್ದಾರೆ.

ಈ ಮಸೂದೆಯು ರಾಜ್ಯಸಭೆಯಲ್ಲೂ ಅನುಮೋದನೆ ಪಡೆದು, ರಾಷ್ಟ್ರಪತಿ ಅಂಕಿತ ಪಡೆದರೆ ಕಾಯ್ದೆಯಾಗುತ್ತದೆ. ಆನಂತರ, ಪೊಲೀಸ್ ರಾಜ್ಯವೊಂದರಲ್ಲಿ ಪೊಲೀಸರಿಗೆ ಇರುವಂತಹ ಅಧಿಕಾರಗಳು ಭಾರತದ ಪೊಲೀಸರಿಗೆ ಲಭ್ಯವಾಗಲಿವೆ.

ಈಗ ಜಾರಿಯಲ್ಲಿರುವ ಕಾಯ್ದೆಯ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಅಗತ್ಯ ಬದಲಾವಣೆಗಳನ್ನು, ನಿಯಮಗಳನ್ನು ಮಾಡಿಕೊಳ್ಳುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ. ಆದರೆ, ಅನುಷ್ಠಾನದಲ್ಲಿ ತೊಡಕಾಗುವ ಅಂಶಗಳನ್ನು ಕೇವಲ ಒಂದು ಗೆಜೆಟ್ ಅಧಿಸೂಚನೆ ಮೂಲಕ ತಿದ್ದುಪಡಿ ಮಾಡುವ ಅಧಿಕಾರವನ್ನು ತಿದ್ದುಪಡಿ ಮಸೂದೆಯು ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ರಾಜ್ಯ ಸರ್ಕಾರಗಳಿಗಿಂತ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವನ್ನು ಈ ಮಸೂದೆ ನೀಡುತ್ತದೆ. 'ಇದು ಸಹ ಮಸೂದೆಯಲ್ಲಿನ ಕಳವಳಕಾರಿ ಅಂಶ' ಎಂದು ವಿಪಕ್ಷಗಳು ಹೇಳಿವೆ. ಈ ಮೂಲಕ ದೇಶದ ಪೊಲೀಸ್ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗಿಂತ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ.

ಕಳವಳಕಾರಿ ಬದಲಾವಣೆಗಳು

'ಅಪರಾಧಿಗಳ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ಸಂಗ್ರಹಿಸುವ ನಮ್ಮ ಕಾನೂನು ಶತಮಾನದಷ್ಟು ಹಳೆಯದ್ದು. ಈಗ ಜಗತ್ತು ತೀರಾ ಮುಂದೆ ಹೋಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇರುವಂತಹ ವ್ಯವಸ್ಥೆಯನ್ನು ಇಲ್ಲಿ ತರಲು ಹೊರಟಿದ್ದೇವೆ' ಎಂದು ಸರ್ಕಾರವು ಈ ಮಸೂದೆಯನ್ನು ಸಮರ್ಥಿಸಿಕೊಂಡಿದೆ. ಆದರೆ, ಈ ಮಸೂದೆ ಮೂಲಕ ಸರ್ಕಾರವು ತರಲು ಹೊರಟಿರುವ ಬದಲಾವಣೆಗಳು ಹೀಗಿವೆ.

1. ಈಗ ಜಾರಿಯಲ್ಲಿರುವ 1920ರ ಕಾಯ್ದೆಯ ಪ್ರಕಾರ ಅಪರಾಧಿ, ಆರೋಪಿಯ ಪಾದದ ಗುರುತು, ಬೆರಳ ಗುರುತಿನ ಮಾದರಿಗಳು ಮತ್ತು ಚಿತ್ರವನ್ನು ಸಂಗ್ರಹಿಸಲು ಮಾತ್ರ ಅವಕಾಶವಿದೆ.

ಆದರೆ, ನೂತನ ಮಸೂದೆಯ ಪ್ರಕಾರ ಅಪರಾಧಿ, ಆರೋಪಿ, ಶಂಕಿತ, ಬಂಧಿತ, ಪೊಲೀಸ್ ವಶದಲ್ಲಿರುವ ಮತ್ತು ತನಿಖೆಯಲ್ಲಿ ನೆರವಿಗೆ ಬರಬಹುದು ಎಂದು ಪೊಲೀಸರು ಭಾವಿಸುವ ಯಾವುದೇ ವ್ಯಕ್ತಿಯ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ಸಂಗ್ರಹಿಸಬಹುದು.



ಇದರಲ್ಲಿ ಚಿತ್ರ, ಪಾದದ ಗುರುತು ಮತ್ತು ಕೈಬೆರಳಿನ ಗುರುತುಗಳ ಮಾದರಿಗಳು, ಅಕ್ಷಿಪಟಲ, ಕೂದಲು, ವೀರ್ಯ, ಡಿಎನ್‌ಎ ಮಾದರಿಗಳು, ಬರವಣಿಗೆ ಶೈಲಿ ಮತ್ತಿತರ ವರ್ತನೆಯ ಗುಣಲಕ್ಷಣಗಳನ್ನು ಸಂಗ್ರಹಿಸಲು ಪೊಲೀಸರಿಗೆ ಮತ್ತು ಜೈಲಿನ ಅಧಿಕಾರಿಗಳಿಗೆ ಅಧಿಕಾರ ನೀಡಲಾಗುತ್ತದೆ.

2. 1920ರ ಕಾಯ್ದೆಯ ಪ್ರಕಾರ ಅಪರಾಧಿ ಅಥವಾ ತಪ್ಪಿತಸ್ಥನ ದೈಹಿಕ ಮಾದರಿಗಳನ್ನು ಮಾತ್ರ ಸಂಗ್ರಹಿಸಲು ಅವಕಾಶವಿದೆ.

ಆದರೆ, ಅಪರಾಧ ಕೃತ್ಯಕ್ಕೆ ಸಂಬಂಧವೇ ಇಲ್ಲದ ವ್ಯಕ್ತಿಯ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ಸಂಗ್ರಹಿಸಲು ನೂತನ ಮಸೂದೆಯು ಅವಕಾಶ ಮಾಡಿಕೊಡುತ್ತದೆ. ಇಂತಹ ವ್ಯಕ್ತಿಗಳಿಂದ ಮಾದರಿಗಳನ್ನು ಸಂಗ್ರಹಿಸಿ ಎಂದು ಮೊದಲ ದರ್ಜೆಯ ಮ್ಯಾಜಿಸ್ಟ್ರೇಟ್ ಆದೇಶ ನೀಡಿದರೆ ಪೊಲೀಸರಿಗೆ ಈ ಅಧಿಕಾರ ದೊರೆಯುತ್ತದೆ. ಆದರೆ ತನಿಖೆಗೆ ನೆರವಾಗಬಹುದು ಎಂದು ಪೊಲೀಸರಿಗೆ ಅನಿಸಿದರೂ, ಅಂತಹ ವ್ಯಕ್ತಿಗಳ ಮಾದರಿ ಸಂಗ್ರಹಕ್ಕೆ ಆದೇಶ ನೀಡಿ ಎಂದು ಪೊಲೀಸರು ಮ್ಯಾಜಿಸ್ಟ್ರೇಟ್ ಅವರನ್ನು ಕೋರಬಹುದು. ಇದು ದೇಶದ ಎಲ್ಲಾ ವ್ಯಕ್ತಿಗಳ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ಸಂಗ್ರಹಿಸಲು ಅವಕಾಶ ಮಾಡಿಕೊಡುತ್ತದೆ. ಇದು ಈ ಮಸೂದೆಯ ಅತ್ಯಂತ ಅಪಾಯಕಾರಿ ಅಂಶಗಳಲ್ಲಿ ಒಂದು.

3. ದೈಹಿಕ ಮಾದರಿಗಳನ್ನು ಸಂಗ್ರಹಿಸಲು ಅಪರಾಧಿಗಳು ಅಸಮ್ಮತಿ ಸೂಚಿಸಲು ಈಗ ಜಾರಿಯಲ್ಲಿರುವ ಕಾಯ್ದೆಯಲ್ಲಿ ಅವಕಾಶವಿಲ್ಲ.

ಕೇಂದ್ರ ಸರ್ಕಾರವು ಈಗ ತರಲು ಹೊರಟಿರುವ ನೂತನ ಮಸೂದೆಯಲ್ಲೂ ಈ ಅಂಶವನ್ನು ಉಳಿಸಿಕೊಳ್ಳಲಾಗಿದೆ. ಆದರೆ, ಅಪರಾಧಕ್ಕೆ ಸಂಬಂಧವೇ ಇಲ್ಲದ ಮತ್ತು ತನಿಖೆಗೆ ಸಹಕಾರಿಯಾಗಬಹುದು ಎಂದು ಪೊಲೀಸರು ಭಾವಿಸುವ ವ್ಯಕ್ತಿಗಳು ಸಹ ತಮ್ಮ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ನೀಡಲು ನಿರಾಕರಿಸಲು ಈ ಮಸೂದೆಯಲ್ಲಿ ಅವಕಾಶವೇ ಇಲ್ಲ. ಪೊಲೀಸರಿಗೆ ತನಿಖೆಯಲ್ಲಿ ನೆರವಾಗಬಲ್ಲಂತಹ ವ್ಯಕ್ತಿಗಳಿಂದಲೂ ಪೊಲೀಸರು ಬಲವಂತದಿಂದ ಮಾದರಿ ಸಂಗ್ರಹಿಸಬಹುದಾಗಿದೆ.

4. ಈ ಹಿಂದೆ ಯಾವುದೇ ಪ್ರಕರಣದಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಶಿಕ್ಷೆ ಅನುಭವಿಸಿರುವವರನ್ನು ಹೊರತುಪಡಿಸಿ, ಯಾವುದೇ ಪ್ರಕರಣದಲ್ಲಿ ಖುಲಾಸೆಯಾಗುವ ವ್ಯಕ್ತಿಯ ಜೈವಿಕ ಮಾದರಿಗಳನ್ನು ನಾಶ ಮಾಡಬೇಕು ಎಂದು 1920ರ ಕಾಯ್ದೆ ಹೇಳುತ್ತದೆ.

ನೂತನ ಮಸೂದೆಯು, ಯಾವುದೇ ಪ್ರಕರಣದಲ್ಲಿ ಖುಲಾಸೆಯಾಗುವ ಮತ್ತು ವಿಚಾರಣೆ ಇಲ್ಲದೇ ಬಿಡುಗಡೆಯಾಗುವ ಮತ್ತು ನ್ಯಾಯಾಲಯದಿಂದ ಬಿಡುಗಡೆ ಆದೇಶ ಪಡೆಯುವ ವ್ಯಕ್ತಿಗಳ ದೈಹಿಕ ಮತ್ತು ಜೈವಿಕ ಮಾದರಿಗಳನ್ನು, ಸಂಬಂಧಿತ ಪ್ರಾಧಿಕಾರವು ನಾಶ ಮಾಡಬೇಕು ಎಂದು ಹೇಳುತ್ತದೆ. ಆದರೆ ಒಂದಕ್ಕಿಂತ ಹೆಚ್ಚು ಅಪರಾಧಗಳಲ್ಲಿ ಶಿಕ್ಷೆಗೆ ಗುರಿಯಾದವರು ಮತ್ತು ಪೊಲೀಸರಿಗೆ ಅಗತ್ಯ ಎಂದೆನಿಸುವ ಅಪರಾಧಿಗಳ ಮಾದರಿಗಳನ್ನು 75 ವರ್ಷಗಳವರೆಗೆ ಸಂಗ್ರಹಿಸಿ ಇಡಲು ಈ ಮಸೂದೆ ಅವಕಾಶ ಮಾಡಿಕೊಡುತ್ತದೆ.

ಆದರೆ, ತನಿಖೆಯಲ್ಲಿ ಸಹಕಾರಿಯಾಗಬಲ್ಲ ಎಂದು ಪೊಲೀಸರಿಗೆ ಅನಿಸಿದ ವ್ಯಕ್ತಿಯ ದೈಹಿಕ ಮತ್ತು ಜೈವಿಕ ಮಾದರಿಗಳನ್ನು ನಾಶ ಮಾಡಬೇಕು ಮತ್ತು ಹೇಗೆ ನಾಶ ಮಾಡಬೇಕು ಎಂಬುದರ ಉಲ್ಲೇಖ ನೂತನ ಮಸೂದೆಯಲ್ಲಿ ಇಲ್ಲ.

5. ಈಗ ಜಾರಿಯಲ್ಲಿರುವ 1920ರ ಕಾಯ್ದೆಯ 9ನೇ ಸೆಕ್ಷನ್‌ನಲ್ಲಿ, ನೂತನ ಮಸೂದೆಯ ಮೂಲಕ ಉಪ ಸೆಕ್ಷನ್ ಒಂದನ್ನು ಸೇರಿಸಲು ಕೇಂದ್ರ ಸರ್ಕಾರ ಮುಂದಾಗಿದೆ. 'ಈ ಕಾಯ್ದೆಯಲ್ಲಿನ (ಮಸೂದೆ ಕಾಯ್ದೆಯಾದ ನಂತರ) ಯಾವುದೇ ಕ್ರಮಗಳನ್ನು ಜಾರಿಗೆ ತರಲು ತೊಡಕಾಗುವ ಅಂಶಗಳಿದ್ದರೆ ಮತ್ತು ಅಂತಹ ಅಂಶಗಳನ್ನು ತೆಗೆದು ಹಾಕುವುದು ಅಗತ್ಯ ಎನಿಸಿದರೆ, ಅಂತಹ ಅಂಶಗಳನ್ನು ಗೆಜೆಟ್ ಅಧಿಸೂಚನೆ ಅಥವಾ ಆದೇಶದ ಮೂಲಕ ತೆಗೆದು ಹಾಕಬಹುದು' ಎಂದು ಮಸೂದೆಯ 9(1)ನೇ ಸೆಕ್ಷನ್ ಹೇಳುತ್ತದೆ.

ಕಾಯ್ದೆ ಜಾರಿಗೆ ಬಂದ ಮೂರು ವರ್ಷಗಳ ಒಳಗೆ ಮಾತ್ರ ಈ 9(1)ನೇ ಸೆಕ್ಷನ್ ಅಡಿ ಬದಲಾವಣೆಗಳನ್ನು ಮಾಡಬಹುದು ಎಂದು ಮಸೂದೆ ಹೇಳುತ್ತದೆ.

ಈಗ ಜಾರಿಯಲ್ಲಿರುವ 1920ರ ಕಾಯ್ದೆಯಲ್ಲಿ ರಾಜ್ಯ ಸರ್ಕಾರಗಳಿಗೆ, ಕಾಯ್ದೆಯ ಅಡಿ ನಿಯಮಗಳನ್ನು ರಚಿಸುವ ಅಧಿಕಾರ ನೀಡಲಾಗಿದೆ. ಆದರೆ, ನೂತನ ಮಸೂದೆಯು ಕೇಂದ್ರ ಸರ್ಕಾರಕ್ಕೂ ಈ ಅಧಿಕಾರ ನೀಡುತ್ತದೆ. ಜತೆಗೆ ಕಾಯ್ದೆಯಲ್ಲಿನ ಅಂಶಗಳನ್ನು ತೆಗೆದುಹಾಕುವ ಅಧಿಕಾರವನ್ನೂ ಕೇಂದ್ರ ಸರ್ಕಾರಕ್ಕೆ ನೀಡುತ್ತದೆ.

ನಾಗರಿಕ ಹಕ್ಕುಗಳಿಗೆ ಸರ್ಕಾರದ ಕೊಕ್ಕೆ

ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಮಸೂದೆ–2022ಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ. ಮಸೂದೆಯು ವ್ಯಕ್ತಿಯ ಖಾಸಗಿತನಕ್ಕೆ ಧಕ್ಕೆ ತರುತ್ತದೆ ಎಂದು ಪ್ರತಿಪಕ್ಷಗಳ ಸದಸ್ಯರು, ವಕೀಲರು, ನಾಗರಿಕ ಹಕ್ಕುಗಳ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದಾರೆ.

ಅಂಗೀಕಾರಕ್ಕೂ ಮುನ್ನ, ಮಸೂದೆಯನ್ನು ಸಂಸದೀಯ ಸ್ಥಾಯಿಸಮಿತಿಯ ಪರಿಶೀಲನೆಗೆ ಕಳುಹಿಸಬೇಕು ಎಂದು ಆಗ್ರಹಿಸಿದ್ದ ಪ್ರತಿಪಕ್ಷಗಳು, ಮಸೂದೆಗೆ ಒಟ್ಟು 24 ತಿದ್ದುಪಡಿಗಳನ್ನು ಸೂಚಿಸಿದ್ದವು. ತೃಣಮೂಲ ಕಾಂಗ್ರೆಸ್‌ನ ಸೌಗತಾ ರಾಯ್ ಅವರು 14 ತಿದ್ದುಪಡಿಗಳನ್ನು, ಬಿಜೆಡಿಯ ಭರ್ತೃಹರಿ ಮಹತಾಬ್ ಹಾಗೂ ಆರ್‌ಎಸ್‌ಪಿಯ ಎನ್.ಕೆ. ಪ್ರೇಮಚಂದ್ರನ್ ಅವರು ತಲಾ 5 ತಿದ್ದುಪಡಿಗಳನ್ನು ಸಲ್ಲಿಸಿದ್ದರು.

ಯಾವ ಅಂಶಗಳಿಗೆ ತಿದ್ದುಪಡಿ ಸಲ್ಲಿಕೆ?: ಬಂಧಿತ ಅಥವಾ ತಪ್ಪಿತಸ್ಥ ವ್ಯಕ್ತಿಯ ಜೈವಿಕ ಮಾದರಿಗಳನ್ನು ಸಂಗ್ರಹಿಸುವ ಅಂಶವನ್ನು ಮಸೂದೆಯಲ್ಲಿ ಸೇರ್ಪಡೆ ಮಾಡಿರುವುದಕ್ಕೆ ವಿರೋಧ ವ್ಯಕ್ತವಾಗಿದೆ. ಖಾಸಗಿತನ ಕುರಿತ ಕಾಯ್ದೆ ಇಲ್ಲದಿರುವಾಗ, ಸಂಗ್ರಹಿಸಿದ ದತ್ತಾಂಶಗಳು ಎಷ್ಟರ ಮಟ್ಟಿಗೆ ಸುರಕ್ಷಿತವಾಗಿರಬಲ್ಲವು ಎಂಬ ಅನುಮಾನ ಇರುವಾಗ, ಈ ಅಂಶ ಸೇರ್ಪಡೆ ಎಷ್ಟು ಸರಿ ಎಂದು ಪ್ರೇಮಚಂದ್ರನ್ ಹಾಗೂ ಸೌಗತಾ ರಾಯ್ ಪ್ರಶ್ನಿಸಿದ್ದಾರೆ. ಈ ಅಂಶವನ್ನು ತೆಗೆದುಹಾಕುವಂತೆ ಅವರು ಒತ್ತಾಯಿಸಿದ್ದಾರೆ.

ಹೆಡ್‌ಕಾನ್‌ಸ್ಟೆಬಲ್ ಅಥವಾ ಜೈಲು ಹೆಡ್‌ವಾರ್ಡನ್ ದರ್ಜೆಯ ಸಿಬ್ಬಂದಿಗೆ ಮಾದರಿಗಳನ್ನು ಸಂಗ್ರಹಿಸುವ ಅಧಿಕಾರ ನೀಡುವುದನ್ನು ಸಂಸದರು ತೀವ್ರವಾಗಿ ವಿರೋಧಿಸಿದ್ದಾರೆ. ಡಿವೈಎಸ್‌ಪಿ ಅಥವಾ ಜೈಲು ಅಧೀಕ್ಷಕ ಅಥವಾ ಉಪ ಅಧೀಕ್ಷಕ ಶ್ರೇಣಿಗಿಂತ ಕೆಳಗಿನ ಶ್ರೇಣಿಯ ಪೊಲೀಸ್ ಸಿಬ್ಬಂದಿಗೆ ಈ ಅಧಿಕಾರ ನೀಡಬಾರದು ಎಂದು ಒತ್ತಾಯಿಸಿದ್ದಾರೆ. 'ಇನ್‌ಸ್ಪೆಕ್ಟರ್ ಅಥವಾ ಜೈಲು ಅಧೀಕ್ಷಕರು ಈ ಕರ್ತವ್ಯವನ್ನು ನಿರ್ವಹಿಸಬಹುದು' ಎಂದು ಪ್ರೇಮಚಂದ್ರನ್ ಅವರು ತಿದ್ದುಪಡಿ ಸೂಚಿಸಿದ್ದರು.

ಎಲ್ಲ ರೀತಿಯ ಪ್ರಕರಣಗಳಿಗೆ ಬದಲಾಗಿ, ಘೋರ ಅಪರಾಧ ಪ್ರಕರಣಗಳಲ್ಲಿ ಮಾತ್ರ ಆರೋಪಿ ಅಥವಾ ತಪ್ಪಿತಸ್ಥನ ಜೈವಿಕ ಮಾದರಿಗಳನ್ನು ಸಂಗ್ರಹಿಸಬೇಕು ಎಂಬ ವಾದವನ್ನು ಪ್ರೇಮಚಂದ್ರನ್ ಮಂಡಿಸಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆದುಕೊಂಡ ವ್ಯಕ್ತಿಯ ಮಾದರಿಗಳನ್ನು ಸಂಗ್ರಹಿಸಲು ಪೊಲೀಸರಿಗೆ ಅವಕಾಶ ನೀಡಬಾರದು ಎಂದು ಅವರು ಸರ್ಕಾರವನ್ನು ಆಗ್ರಹಿಸಿದ್ದರು. ತಪ್ಪಿತಸ್ಥ ವ್ಯಕ್ತಿಗೆ ಮಾತ್ರ ಈ ಅಂಶವನ್ನು ಅನ್ವಯಿಸಬೇಕು ಎಂದು ಮಹತಾಬ್ ಅವರು ತಾವು ಸಲ್ಲಿಸಿದ್ದ ತಿದ್ದುಪಡಿಯಲ್ಲಿ ಸೂಚಿಸಿದ್ದರು.

ಮಾದರಿಗಳನ್ನು ಎನ್‌ಸಿಆರ್‌ಬಿಯಲ್ಲಿ ಸಂಗ್ರಹಿಸಿಡುವ ವಿಚಾರವು ಮತ್ತೊಂದು ಚರ್ಚಾಸ್ಪದ ಅಂಶ. 75 ವರ್ಷಗಳಷ್ಟು ಸುದೀರ್ಘ ಅವಧಿವರೆಗೆ ಸಂಗ್ರಹಿಸುವುದು ಬೇಡ ಎಂದಿರುವ ಪ್ರತಿಪಕ್ಷಗಳ ಸಂಸದರು, ಈ ಮಾದರಿಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ಸಲಹೆ ನೀಡಿದ್ದರು.

ಈ ಮಸೂದೆಯ ಮೂಲಕ ನಾಗರಿಕ ಹಕ್ಕುಗಳನ್ನು ಕಿತ್ತುಕೊಳ್ಳಲು ಸರ್ಕಾರ ಮುಂದಾಗಿದೆ ಎಂದು ಲೋಕಸಭೆಯಲ್ಲಿ ಚರ್ಚೆಯ ವೇಳೆ ಕಾಂಗ್ರೆಸ್ ಸದಸ್ಯ ಮನೀಷ್ ತಿವಾರಿ ಆರೋಪಿಸಿದರು. ನಾಗರಿಕ ಸ್ವಾತಂತ್ರ್ಯ ಹಾಗೂ ಮಾನವ ಹಕ್ಕುಗಳನ್ನು ಕೊಡಮಾಡುವ ಸಂವಿಧಾನದ 14, 19 ಹಾಗೂ 21ನೇ ವಿಧಿಗಳ ಉಲ್ಲಂಘನೆ ಆಗುತ್ತದೆ ಎಂದು ಅವರು ಎಚ್ಚರಿಸಿದ್ದರು. 'ಭಾರತವು ಕಣ್ಗಾವಲು ದೇಶವಾಗಿ ಬದಲಾಗಲು ಈ ಮಸೂದೆಯು ದಾರಿ ಮಾಡಿಕೊಡುತ್ತದೆ' ಎಂದು ತಿವಾರಿ ಆತಂಕ ವ್ಯಕ್ತಪಡಿಸಿದ್ದಾರೆ.

'ದತ್ತಾಂಶ ಶೇಖರಣಾ ತತ್ವಗಳಿಗೆ ವಿರುದ್ಧ'

'ದಾಖಲೆಗಳನ್ನು 75 ವರ್ಷ ಇರಿಸಿಕೊಳ್ಳಲು ಅವಕಾಶ ನೀಡುವ ಅಂಶವು, ಪುಟ್ಟಸ್ವಾಮಿ ಹಾಗೂ ಆಧಾರ್ ತೀರ್ಪಿನಲ್ಲಿ ಹೇಳಲಾದ ದತ್ತಾಂಶ ಶೇಖರಣಾ ತತ್ವಗಳಿಗೆ ವಿರುದ್ಧವಾಗಿದೆ' ಎಂದು ದೆಹಲಿಯ ವಕೀಲೆ ವೃಂದಾ ಭಂಡಾರಿ ಅವರು ಅಭಿಪ್ರಾಯಪಟ್ಟಿದ್ದಾರೆ.

'ಈ ಮಸೂದೆಯು ವ್ಯಕ್ತಿಯನ್ನು ಗುರುತಿಸುವುದಷ್ಟೇ ಅಲ್ಲದೆ, ಆತ ಅಪರಾಧ ಎಸಗಿದ್ದಾನೆ ಎಂಬುದನ್ನು ಸಾಬೀತು ಮಾಡುತ್ತದೆ' ಎಂದು ನಾಗರಿಕ ಹಕ್ಕುಗಳ ಸಂಸ್ಥೆ ಇಂಟರ್‌ನೆಟ್ ಫ್ರೀಡಂ ಫೌಂಡೇಶನ್ ಅಭಿಪ್ರಾಯಪಟ್ಟಿದೆ. ಜೈವಿಕ ದತ್ತಾಂಶ ಎಂದರೆ ಅದು ಡಿಎನ್‌ಎ ಅನ್ನು ಒಳಗೊಂಡಿದೆಯೇ ಎಂಬುದು ಈ ಮಸೂದೆಯಲ್ಲಿ ಸ್ಪಷ್ಟವಾಗಿಲ್ಲ ಎಂದು ಸಂಸ್ಥೆ ತಿಳಿಸಿದೆ.

ಸಣ್ಣಪುಟ್ಟ ಪ್ರಕರಣಗಳು ಹಾಗೂ ಸಕಾರಣವಿಲ್ಲದೇ ವಶಕ್ಕೆ ಪಡೆಯಲಾದ ವ್ಯಕ್ತಿಯ ಜೈವಿಕ ದತ್ತಾಂಶಗಳನ್ನು ಸಂಗ್ರಹಿಸಲು ಅವಕಾಶ ಮಾಡಿಕೊಡುವ ಈ ಮಸೂದೆಯು ಪೊಲೀಸರ ಅಧಿಕಾರ ವ್ಯಾಪ್ತಿಯನ್ನು ಹಿಗ್ಗಿಸುತ್ತದೆ ಎಂದು ಹಲವರು ಕಳವಳ ವ್ಯಕ್ತಪಡಿಸಿದ್ದಾರೆ.

ಆಧಾರ: ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಕಾಯ್ದೆ–1920, ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಮಸೂದೆ–2022, ಪಿಟಿಐ





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 87

ಲಿಂಗದಿಂದ ಮೊಳಗಿದ ಓಂಕಾರ

ಸೃಷ್ಟಿಖಂಡದ ಎಂಟನೇ ಅಧ್ಯಾಯದಲ್ಲಿ ಬ್ರಹ್ಮ-ವಿಷ್ಣುವಿಗೆ ಶಿವಲಿಂಗದಿಂದ ಓಂಕಾರಧ್ವನಿ ಕೇಳಿಸಿದ ವಿವರ ಇದೆ. ಅದನ್ನ ಬ್ರಹ್ಮನು ನಾರದನಿಗೆ ಹೇಳುತ್ತಾನೆ: 'ಎಲೈ ನಾರದಮುನಿ, ನಾನು ಮತ್ತು ವಿಷ್ಣು ಗರ್ವವನ್ನು ತ್ಯಜಿಸಿ, ಶಿವನ ದರ್ಶನವನ್ನು ಮಾಡಲು ಸ್ತುತಿಸುತ್ತಿದ್ದೆವು. ಆಗ ದೀನರನ್ನು ಸಲಹುವವನು, ಗರ್ವಿಗಳ ಗರ್ವವನ್ನು ನಾಶಮಾಡುವವನೂ ಆದಂತಹ ಶಿವನು ನಮಗೆ ಅನುಗ್ರಹ ನೀಡಿದ. ಆಗ ಶಿವಲಿಂಗದಿಂದ ಓಂಕಾರರೂಪವಾದ ದೀರ್ಘವಾದ ಒಂದು ಶಬ್ದ ಸ್ಪಷ್ಟವಾಗಿ ಕೇಳಿಸಿತು. ನಾನು ಮತ್ತು ವಿಷ್ಣುವೂ ಚಕಿತರಾಗಿ ಇದಾವ ಶಬ್ದವೆಂದು ಯೋಚಿಸಿದೆವು. ನಮಗೆ ಗೊತ್ತಾಗಲಿಲ್ಲ. ಯಾವಾಗ ನಾವು ನಿಷ್ಕಲ್ಮಷವಾದ ಮತ್ತು ಶಾಂತವಾದ ಬುದ್ಧಿಯಿಂದ ನೋಡಿದೆವೋ, ಆಗಷ್ಟೇ ಶಿವಲಿಂಗದ ಬಲಭಾಗದಲ್ಲಿ ಅನಾದಿಯಾದ ಶಿವಸ್ವರೂಪವಾದ ಓಂಕಾರದ ಆಕಾರವನ್ನು ಕಂಡೆವು. ಎಡಭಾಗದಲ್ಲಿ ಉಕಾರವನ್ನೂ ನೋಡಿದೆವು. ಮಕಾರವು ಶಿವಲಿಂಗದ ಮಧ್ಯಭಾಗದಲ್ಲಿ, 'ಓಂ' ಎಂಬ ನಾದವು ಅದರ ಸಮೀಪದಲ್ಲಿ ಕಾಣಿಸಿದವು. ಶಿವಲಿಂಗದ ದಕ್ಷಿಣಭಾಗದಲ್ಲಿ ಅಕಾರವು ಸೂರ್ಯಮಂಡಲದಂತೆ ಪ್ರಕಾಶಿಸುತ್ತಿತ್ತು. ಉತ್ತರಭಾಗದಲ್ಲಿನ ಉಕಾರವು ಅಗ್ನಿಯಂತೆ ರಾರಾಜಿಸುತ್ತಿತ್ತು. ಮಧ್ಯದಲ್ಲಿ ಮಕಾರವು ಚಂದ್ರಮಂಡಲದಂತೆ ಶಾಂತವಾಗಿ ವಿರಾಜಿಸುತ್ತಿತ್ತು.

'ಲಿಂಗದ ಮೇಲ್ಭಾಗದಲ್ಲಿ ಶುದ್ಧಸ್ಫಟಿಕದಂತೆ ಶುಭ್ರವೂ, ತ್ರಿಮೂರ್ತಿಗಳಿಗೆ ಕಾರಣವೂ ಆದ, ಅಜ್ಞಾನಸಂಬಂಧವಿಲ್ಲದ, ನಿರ್ಮಲವಾದ, ಅವಯವಗಳಿಲ್ಲದ, ದುಃಖಸಂಬಂಧವಿಲ್ಲದ, ತನ್ನಲ್ಲಿ ಭೇದವಿಲ್ಲದ, ಒಳಹೊರಗುಗಳೆಂಬ ಭೇದವಿಲ್ಲದೆ ಇದ್ದರೂ ಮಾಯಾಮಯವಾದ ಒಳಹೊರಗು ಭೇದಗಳುಳ್ಳ, ಎಲ್ಲೆಡೆ ವ್ಯಾಪಕವಾಗಿರುವ, ವಿನಾಶಸ್ಥಿತಿ ಮುಂತಾದ ವಸ್ತುವಿಕಾರಗಳಿಲ್ಲದ, ಲೋಕದಲ್ಲಿಯ ವಿಷಯಗಳಿಂದಾಗುವ ಆನಂದವನ್ನುಂಟುಮಾಡುವುದಾದ, ಸತ್ಯ ಜ್ಞಾನ ಆನಂದಸ್ವರೂಪವಾದ, ಜಗತ್ತಿಗೆಲ್ಲಾ ಆಧಾರವಾದಂತಹ ಶಬ್ದಬ್ರಹ್ಮವನ್ನು ನಾನೂ ಮತ್ತು ವಿಷ್ಣು ನೋಡಿದೆವು.

'ಆಗ ವಿಷ್ಣುವು ಈ ಶಬ್ದವು ಎಲ್ಲಿಂದ ಬರುತ್ತಿದೆ – ಎಂದು ತೇಜೋಮಯವಾದ ಆ ಲಿಂಗವನ್ನು ಪರೀಕ್ಷಿಸೋಣ ಅಂದ. ಮಹತ್ತಾದ ಈ ಅಗ್ನಿಸ್ತಂಭದ ಮೂಲಭಾಗಕ್ಕೆ ಹೋಗಿ ಪರೀಕ್ಷಿಸಬೇಕೆಂದು, ಶಬ್ದಬ್ರಹ್ಮ ಸ್ವರೂಪನೂ ಜಗದ್ರೂಪನೂ ಆದಂತಹ ಆ ಪರಮಾತ್ಮನನ್ನು ಹಾಗೆಯೇ ಧ್ಯಾನಿಸಿದ. ಆಗ ಅಲ್ಲಿ ಋಷಿಯೋರ್ವ ಕಾಣಿಸಿಕೊಂಡ. ಆ ಋಷಿಯಿಂದ ವಿಷ್ಣುವು ತನಗೆ ಕೇಳಿಸಿದ ಓಂಕಾರ ಧ್ವನಿಯು ಶಬ್ದಬ್ರಹ್ಮಸ್ವರೂಪನೂ ಪರಬ್ರಹ್ಮಸ್ವರೂಪನೂ ದೇವದೇವನೂ ಆದ ಪರಮೇಶ್ವರನ ಶಬ್ದ, ಇದು ಬ್ರಹ್ಮಸ್ವರೂಪವಾದುದೆಂದು ತಿಳಿದ.

'ಶಿವನನ್ನು ಚಿಂತಿಸಲು ಅಸಾಧ್ಯ. ಕಾರಣವೇನೆಂದರೆ ಮನಸ್ಸು ಮೊದಲುಗೊಂಡು ಯಾವ ಇಂದ್ರಿಯಗಳೂ ಅವನನ್ನು ವಿಷಯಾಕರಿಸಲಾರವು. ಏಕೆಂದರೆ ಅವನಿಗೆ ರೂಪವಿಲ್ಲ. ಆದರೆ ಓಂಕಾರರೂಪವಾಗಿ ಆತನನ್ನು ಧ್ಯಾನಿಸಬಹುದು. ಓಂಕಾರರೂಪವಾದ ಒಂದು ಅಕ್ಷರವು ಸತ್ಯವಾದ, ಜಗತ್ತಿಗೆ ಪರಮಕಾರಣವೂ ಆನಂದ–ಜ್ಞಾನಸ್ವರೂಪವೂ ನಾಶವಿಲ್ಲದ್ದೂ ಆದ ಪರಬ್ರಹ್ಮಸ್ವರೂಪವನ್ನು ಬೋಧಿಸುವುದು. ಓಂಕಾರದಲ್ಲಿನ ಅಕಾರದಿಂದ ಬ್ರಹ್ಮನೂ, ಉಕಾರದಿಂದ ಹರಿಯಯೂ ಜನಿಸಿದರು; ಮಕಾರದಿಂದ ರುದ್ರ ಜನಿಸಿದ. ಬ್ರಹ್ಮ ಸೃಷ್ಟಿಕರ್ತನಾದರೆ, ಹರಿಯು ಜಗತ್ತನ್ನು ಮೋಹಗೊಳಿಸುವವನಾದ; ಶಿವನು ನಿತ್ಯವೂ ಅನುಗ್ರಹಿಸುವವನಾದ.

ಮಕಾರಸ್ವರೂಪೀ ಶಿವನು ಜಗತ್ತಿಗೆ ಕಾರಣವಾದ ಬೀಜವುಳ್ಳವನು. ಅಕಾರಸ್ವರೂಪನಾದ ಬ್ರಹ್ಮನೇ ಬೀಜವು. ಪ್ರಕೃತಿ ಮತ್ತು ಪುರುಷರನ್ನು ಸೃಜಿಸುವ ಉಕಾರಸ್ವರೂಪನಾದ ಹರಿಯು ಯೋನಿಯು (ಜಗತ್ತು ಜನಿಸುವ ಸ್ಥಾನ). ಬೀಜವುಳ್ಳವನು, ಬೀಜ ಮತ್ತು ಯೋನಿ – ಈ ಮೂರಕ್ಕೂ ಸ್ವರೂಪನಾದವನು ಪರಮೇಶ್ವರ. ಬೀಜಿಯಾದ ಶಿವನು ತನ್ನ ಸ್ವರೂಪವನ್ನು ವಿಭಾಗಿಸಿ ಸ್ವೇಚ್ಛೆಯಾಗಿ ವಿಹರಿಸುತ್ತಲಿರುವ. ಜಗದೊಡೆಯನಾದ ಬೀಜಿಯ ಲಿಂಗದಿಂದ ಅಕಾರ(ಬ್ರಹ್ಮ)ರೂಪವಾದ ಬೀಜ (ಜಗತ್ಕಾರಣ) ಉಂಟಾಯಿತು.

ಬೀಜವನ್ನು ಬೀಜಿಯಾದ ಶಿವನು ವಿಷ್ಣುವೆಂಬ ಯೋನಿಯಲ್ಲಿ ಹಾಕಿದ. ಅಲ್ಲಿ ಬೀಜವು ಬೆಳೆದು ಏಕರೂಪವಾದ ಮತ್ತು ಮಹತ್ತಾದೊಂದು ಸುವರ್ಣಮಯವಾದ ಗೋಳವಾಯಿತು. ಒಂದು ಸಾವಿರ ವರ್ಷಗಳ ಮೇಲೆ ಈಶ್ವರನು ಸಾಕ್ಷಾತ್ತಾಗಿ ಆ ಗೋಳವನ್ನು ಒಡೆದು ಎರಡು ಭಾಗವಾಗಿ ಮಾಡಿದ. ಆ ಅಂಡದ ಒಂದು ಸುವರ್ಣಭಾಗವು ಆಕಾಶದಲ್ಲಿ ನಿಂತಿತು. ಅದೇ ಸ್ವರ್ಗ. ಮತ್ತೊಂದು ಕೆಳಗೆ ನಿಂತಿತು. ಅದು ಶಬ್ದ, ರಸ, ಸ್ಪರ್ಶ, ಗಂಧ, ರೂಪ, ಎಂಬ ಐದು ಸ್ವರೂಪವಾಗಿರುವ ಭೂಮಿಯಾಯಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಪುಣೆಯ ಕೈಮಗ್ಗ ಸೀರೆ ಬ್ರ್ಯಾಂಡ್ ಕಾರಾಗಿರಿ, ಲವ್ ಜಿಹಾದ್ ಅನ್ನು ಉತ್ತೇಜಿಸುತ್ತಿದೆ. ಹಿಂದೂ ಮಹಿಳೆಯ ಸೀಮಂತ ಕಾರ್ಯಕ್ರಮದಲ್ಲಿ ಆಕೆಯ ಮುಸ್ಲಿಂ ಗಂಡ ಇರುವ ಚಿತ್ರವನ್ನು ಜಾಹೀರಾತಿಗಾಗಿ ಕಾರಾಗಿರಿ ಬಳಸುತ್ತಿದೆ. ಆತ ಮುಸ್ಲಿಮರು ಧರಿಸುವ ಟೋಪಿ ಧರಿಸಿದ್ದಾನೆ. ಈ ಬ್ರ್ಯಾಂಡ್ ಅನ್ನು ಹಿಂದೂಗಳು ಬಹಿಷ್ಕರಿಸಬೇಕು' ಎಂಬ ವಿವರ ಇರುವ ಟ್ವೀಟ್‌ಗಳು ವೈರಲ್ ಆಗಿವೆ. ಇನ್‌ಸ್ಟಾಗ್ರಾಂನಲ್ಲಿ ಕಾರಾಗಿರಿ ಬ್ರ್ಯಾಂಡ್ ಪ್ರಕಟಿಸಿದ್ದ ಚಿತ್ರ ಸಹ ಈ ಟ್ವೀಟ್‌ಗಳ ಜತೆಗೆ ವೈರಲ್ ಆಗಿವೆ. ಈ ಬ್ರ್ಯಾಂಡ್‌ನ ಸೀರೆಗಳನ್ನು ಬಹಿಷ್ಕರಿಸಿ ಎಂದು ಹಲವರು ಕರೆ ನೀಡಿದ್ದಾರೆ. ಹಲವು ಕನ್ನಡಿಗರೂ ಈ ಬಹಿಷ್ಕಾರಕ್ಕೆ ದನಿಗೂಡಿಸಿದ್ದಾರೆ.



'ಇದು ಸುಳ್ಳು ಸುದ್ದಿ. ತಪ್ಪು ಮಾಹಿತಿ ಮತ್ತು ತಿರುಚಲಾದ ಚಿತ್ರದೊಂದಿಗೆ ಪ್ರಚೋದನಕಾರಿ ಸಂದೇಶವನ್ನು ಹಂಚಿಕೊಳ್ಳಲಾಗುತ್ತಿದೆ' ಎಂದು ದಿ ಲಾಜಿಕಲ್ ಇಂಡಿಯನ್, ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಕಾರಾಗಿರಿ ಕಂಪನಿಯು ಈ ಚಿತ್ರದ ಜತೆಗೆ ಬೇರೆ ಚಿತ್ರಗಳನ್ನೂ ಇನ್‌ಸ್ಟಾಗ್ರಾಂನಲ್ಲಿ ಪ್ರಕಟಿಸಿದೆ. ವೈರಲ್ ಆಗಿರುವ ಚಿತ್ರದ ಜತೆಯಲ್ಲಿ, ಮತ್ತೊಂದು ಚಿತ್ರವೂ ಇದೆ. ಅದರಲ್ಲಿ ಪುರುಷ, ಮರಾಠಿ ಜನರು ಧರಿಸುವ ಟೋಪಿ ಧರಿಸಿದ್ದಾನೆ. ಅದು ಮುಸ್ಲಿಮರು ಧರಿಸುವ ಟೋಪಿ ಅಲ್ಲ' ಎಂದು ವಿವರಿಸಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 23 ನೇ ದಿನ ತಿಥಿ: (ಚೈತ್ರ ಶುದ್ಧ) ಪಂಚಮಿ ಗಂ. 18-02 ನಕ್ಷತ್ರ: ರೋಹಿಣಿ ಗಂ. 19-40 ಯೋಗ: ಆಯುಷ್ಮಾನ್ ಗಂ. 08-37, ಕರಣ: ಬಾಲವ ಗಂ. 18-02. ರಾಹುಕಾಲ : ಮಧ್ಯಾಹ್ನ 12:00 - 01:30 ಸೂರ್ಯೋದಯ : 06-27 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 04 ರಂಜಾನ್ ದಿನ ವಿಶೇಷ : ಶ್ರೀ ಲಕ್ಷ್ಮೀಪಂಚಮಿ ಅದೃಷ್ಟ ಸಂಖ್ಯೆ: 2, 9

ಮೇಷ: ಖಾಸಗಿ ಬದುಕಿನಲ್ಲಿ ನಿಮ್ಮ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ನ್ಯಾಯವಾದಿಗಳಿಗೆ ವೃತ್ತಿಯಿಂದ ಆದಾಯ. ರಾಜಕೀಯ ರಂಗದಲ್ಲಿ ಜನಪ್ರಿಯತೆ ಪಡೆಯುವಿರಿ.

ವೃಷಭ: ಕಾರ್ಮಿಕರ ಸಮಸ್ಯೆಗಳಿಗೆ ಹೆಚ್ಚಿನ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನವನ್ನು ಸಂಪಾದಿಸಿಕೊಳ್ಳುವಂತೆ ಆಗಲಿದೆ. ಪೊಲೀಸ್ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರಲಿದೆ. ಕುಲದೇವರ ಆರಾಧನೆಯಿಂದ ಶುಭವಾಗುವುದು.

ಮಿಥುನ: ಮನೆಯಲ್ಲಿ ಶುಭಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು. ಸಿನಿಮಾರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಈ ದಿನ ಸುದಿನವಾಗಲಿದೆ. ಮಕ್ಕಳ ಯಶಸ್ಸನ್ನು ಕಂಡು ಸಂಭ್ರಮಿಸುವಿರಿ.

ಕರ್ಕಾಟಕ: ಉದ್ಯೋಗದಲ್ಲಿ ನಿಮ್ಮ ವೈಯಕ್ತಿಕ ಅನಿಸಿಕೆಯು ಕಂಪನಿಗಳಿಗೆ ಸಹಾಯಕಾರಿಯಾಗುವುದು. ಅನಾರೋಗ್ಯ ಸ್ಥಿತಿಯು ಎದುರಾಗಿ ಆರ್ಥಿಕವಾಗಿ ಧನ ವ್ಯಯವಾಗಲಿದೆ. ದೂರ ಪ್ರಯಾಣದಲ್ಲಿ ಜಾಗ್ರತೆ ವಹಿಸಿರಿ.

ಸಿಂಹ: ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಆದಾಯ. ಸಾಂಸಾರಿಕವಾಗಿ ಹಾಗೂ ಸಾಮಾಜಿಕವಾಗಿ ವರ್ತನೆಯಲ್ಲಿ ಸಮತೋಲನ ಹಾಗೂ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಉತ್ತಮವೆಂದು ಅನಿಸಲಿದೆ.

ಕನ್ಯಾ: ಮರಗೆಲಸದವರಿಗೆ ಸುದಿನ. ಕುಟುಂಬದಲ್ಲಿ ಶಾಂತಿ ನೆಲೆಸುತ್ತದೆ. ಉದ್ಯೋಗಸ್ಥರಿಗೆ ಬಡ್ತಿ ದೊರೆತು ಉತ್ತಮ ಫಲ ದೊರೆಯಲಿದೆ. ದೇಹದಲ್ಲಿ ಉತ್ಸಾಹವಿರುವುದರಿಂದ ಎಲ್ಲ ಕಾರ್ಯಗಳಲ್ಲಿ ಯಶಸ್ಸು ದೊರೆಯುವುದು.

ತುಲಾ: ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಚಾಕಚಕ್ಯತೆಯನ್ನು ತೋರಿದರೆ ವ್ಯವಹಾರ ಸಾಧ್ಯವಾಗುವುದು. ಮೆಕಾನಿಕಲ್ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚು ಪರಿಶ್ರಮ ಪಡುವುದು ಅಗತ್ಯ. ಶ್ರೀ ವಿಷ್ಣುಸಹಸ್ರನಾಮವನ್ನು ಪಠಿಸಿರಿ.

ವೃಶ್ಚಿಕ: ಆಭರಣ ಖರೀದಿ ಅಥವಾ ಆಸ್ತಿ ಖರೀದಿ ಮಾಡುವ ವಿಚಾರದ ಬಗ್ಗೆ ಹೆಂಡತಿ ಮಕ್ಕಳೊಂದಿಗೆ ಚರ್ಚೆ ನಡೆಯಲಿದೆ. ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಇದು ಸೂಕ್ತ ಕಾಲವಾಗಿರುತ್ತದೆ.

ಧನು: ಕೋರ್ಟು ವ್ಯವಹಾರಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳಿ. ಅಧ್ಯಯನ ಸಂಶೋಧನೆಗಳಿಂದ ನಿಮ್ಮಿಚ್ಛೆಯಂತೆ ಹಣ ಹಾಗೂ ಹೆಸರು ಗಳಿಸಲು ಸಾಧ್ಯವಾಗದೆ ಮನಸ್ಸಿಗೆ ಅಸಮಾಧಾನ.

ಮಕರ: ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಸ್ಸು ಪರಿವರ್ತನೆ ಮಾಡುವಲ್ಲಿ ವಿಫಲರಾಗುವಿರಿ. ಆದ್ದರಿಂದ ತಿಳಿಹೇಳುವ ಜವಾಬ್ದಾರಿ ಈ ದಿನ ನಿಮಗೆ ಅನಾವಶ್ಯಕವಾಗಿರುತ್ತದೆ. ಆರೋಗ್ಯ ಸುಧಾರಣೆ.

ಕುಂಭ: ಧನಾದಾಯಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕಗಳು ಇರುವುದಿಲ್ಲ. ದಿಢೀರ್ ಪ್ರಯಾಣ ಸಂಭವ. ಧಾರ್ಮಿಕವಾಗಿ ಹೆಚ್ಚಿನ ಏಕಾಗ್ರತೆ ಹಾಗೂ ಉತ್ತಮ ರೀತಿಯಲ್ಲಿನ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ.

ಮೀನ: ರಿಯಲ್ ಎಸ್ಟೇಟುದಾರರಿಗೆ ಉತ್ತಮ ಧನಲಾಭವಿರುವ ಅವಕಾಶಗಳಿಂದ ವ್ಯವಹಾರಗಳು ವೃದ್ಧಿಗೊಳ್ಳಲಿದೆ. ತಾಂತ್ರಿಕ ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮ ಪಡಬೇಕಾಗುವುದು. ಮದುವೆ ಮಾತುಕತೆ ಸಾಧ್ಯತೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಜೀವ-ಜಗತ್ತು-ದೈವ

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ |
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು ||
ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು |
ಪದ ಕುಸಿಯೆ ನೆಲವಿಹುದು – ಮಂಕುತಿಮ್ಮ
|| **600** ||

ಪದ = ಅರ್ಥ: ವಿಧಿಯದರ = ವಿಧಿ + ಅದರ, ಸಾಹೇಬ = ಯಜಮಾನ, ಪೇಳ್ದಂತೆ = ಹೇಳಿದಂತೆ, ಕಡೆಗೋಡು = ಕಡೆಗೆ + ಓಡು, ಕುಸಿಯೆ = ಕುಸಿದರೆ, ನೆಲವಿಹುದು = ನೆಲವು + ಇಹುದು.

ವಾಚ್ಯಾರ್ಥ: ಬದುಕೊಂದು ಜಟಕಾಬಂಡಿ ಇದ್ದಂತೆ. ವಿಧಿ ಅದರ ಯಜಮಾನ. ನೀನು ಆ ಬಂಡಿಯ ಕುದುರೆ. ಯಜಮಾನ ಹೇಳಿದಂತೆ ಪ್ರಯಾಣಿಕರು ಮದುವೆಗೋ ಮಸಣಕ್ಕೋ ಅವನು ಹೇಳಿದ ಕಡೆಗೆ ಓಡು. ಕಾಲು ಕುಸಿದರೆ ನೆಲವಿದೆ. ಭಯಬೇಡ.

ವಿವರಣೆ: ಇದೊಂದು ಅತ್ಯಂತ ಜನಪ್ರಿಯವಾದ, ಪ್ರಚಲಿತವಾದ ಚೌಪದಿ. ಭಾರತದ ಇಡೀ ಆಧ್ಯಾತ್ಮಿಕತೆಯನ್ನು ಎರಕ ಹೊಯ್ದಿರುವ ಕಗ್ಗ ಇದು.

ಪರಬ್ರಹ್ಮವೆನ್ನುವುದು ಕೇವಲ ಸತ್ವ. ಸತ್ ಎಂದರೆ ಎಂದಿಗೂ ವಿಕಾರವಾಗದೆ, ಸದಾಕಾಲ ಏಕರೂಪವಾಗಿರುವಂಥದ್ದು. ಅದು ಅನಂತವಾದದ್ದು, ಅಪಾರವಾದದ್ದು. ಆದ್ದರಿಂದ ಅದು 'ಸರ್ವವ್ಯಾಪಿ'. ಈ ಬ್ರಹ್ಮಸತ್ವಕ್ಕೆ ಎರಡು ರೂಪಗಳು. 1.ವ್ಯಕ್ತರೂಪ 2.ಅವ್ಯಕ್ತರೂಪ. ವ್ಯಕ್ತರೂಪವೇ ಪ್ರಕೃತಿ ಅಥವಾ ಕಾರ್ಯಬ್ರಹ್ಮ. ಅವ್ಯಕ್ತರೂಪ ಕಾರಣ ಬ್ರಹ್ಮ. ಅದೇ ಪರಬ್ರಹ್ಮವಸ್ತು. ಅಂದರೆ, ಮೊದಲು ಒಂದೇ ಇದ್ದ ಆ ಪರಬ್ರಹ್ಮವಸ್ತು, ತನ್ನ ಒಂದಂಶವನ್ನು ತೋರಿಕೆಗೆ ಕಾಣುವಂತೆ ಮಾಡಿ ಪ್ರಕೃತಿಯಾಯಿತು. ಪ್ರಕೃತಿ ಎಂದರೆ ಪ್ರಕರ್ಷವಾದ ಕೃತಿ. ಹಾಗೆಂದರೆ ಅತ್ಯಂತ ವಿಸ್ತಾರವಾದ, ಉತ್ತಮವಾದ ಕೃತಿ. ಅದೇ ಜಗತ್ತು.

ಪರಬ್ರಹ್ಮ ಚೈತನ್ಯ ತನ್ನ ಇಚ್ಛೆಯಂತೆ ಕೋಟಿ ಕೋಟಿ ಕಿಡಿಗಳಲ್ಲಿ ಹೊಮ್ಮಿ ಜೀವಾತ್ಮವಾಯಿತು. ಆತ್ಮಕ್ಕೆ ದೇಹ, ಇಂದ್ರಿಯಗಳ ಉಪಾಧಿ ಸೇರಿದಾಗ ಜೀವವಾಗುತ್ತದೆ. ಜೀವದ ಅಂತರ್ಬೀಜ ಆತ್ಮ. ಹಾಗಾದರೆ ಮೂಲದಲ್ಲಿ ಒಂದೇ ಇದ್ದ ಪರಬ್ರಹ್ಮ ವಸ್ತು ಮೂರಾಯಿತು. ಒಂದು ಕಣ್ಣಿಗೆ ಕಾಣುವ ಜಗತ್ತು, ಮತ್ತೊಂದು ದೇಹ, ಇಂದ್ರಿಯಗಳನ್ನು ಹೊಂದಿ ಅನುಭವಿಸುವ ಜೀವ.

ಜೀವದಿಂದ ಜಗತ್ತು. ಜೀವಕ್ಕಾಗಿ ಜಗತ್ತು. ಜೀವವಿಲ್ಲದಿದ್ದರೆ ಜಗತ್ತೇ ಇಲ್ಲ. ಜಗತ್ತಿಲ್ಲದೆ ಜೀವವಿರುವುದು ಹೇಗೆ? ಹೀಗೆ ಜೀವ ಮತ್ತು ಜಗತ್ತುಗಳು ಪರಸ್ಪರ ಅನ್ಯೋನ್ಯಾಪೇಕ್ಷಿಗಳು. ಜೀವ, ಪ್ರಕೃತಿ ಸಾಮ್ರಾಜ್ಯದ ಪ್ರಜೆ. ಜೀವ ಮತ್ತು ಜಗತ್ತು ಎರಡೂ ಪರಬ್ರಹ್ಮ ಅಥವಾ ದೈವದ ಆಧೀನಗಳು. ಯಾಕೆಂದರೆ ಅವೆರಡೂ ಹುಟ್ಟಿದ್ದು ದೈವದಿಂದಲೇ. ಹೀಗೆ ದೈವ-ಜೀವ-ಜಗತ್ತು ಇವುಗಳ ತಿಳಿವಳಿಕೆಯೇ ಅಧ್ಯಾತ್ಮ.

ಈ ಕಗ್ಗ ಮೂರನ್ನು ಸುಂದರವಾಗಿ ಬೆಸೆದು ಹೇಳುತ್ತದೆ. ಜಟಕಾಬಂಡಿ ಜಗತ್ತು, ಜೀವ, ಕುದುರೆ. ಎರಡನ್ನೂ ಪೋಷಿಸುವ, ಅಂತೆಯೇ ನಿಗ್ರಹಿಸುವ ದೈವ, ಸಾಹೇಬ. ಜಟಕಾಬಂಡಿಯ ಪ್ರಯಾಣಿಕರು, ಜೀವನದ ಸುಖ, ದುಃಖಗಳು, ಅವು ಬರುವುದು ವಿಧಿಯ ಸಾಹೇಬನ ಪ್ರೇರಣೆಯಂತೆ. ಅವನು ನೀಡಿದಂತೆ ಸಂತೋಷವೋ (ಮದುವೆಯೋ), ದುಃಖವೋ (ಮಸಣವೋ) ನಮಗೆ ದಕ್ಕುತ್ತವೆ. ಅವುಗಳನ್ನು ಸ್ವೀಕರಿಸದೆ ನಮಗೆ ವಿಧಿಯಿಲ್ಲ.

ಆದರೆ ಕಗ್ಗ ಯಾವತ್ತಿಗೂ ಧನಾತ್ಮಕವಾದದ್ದು. ಜೀವಿ ಅಷ್ಟೆಲ್ಲ ಬಂಡಿಯ, ಬಂಡಿಯ ಯಜಮಾನನ, ನಿಯಂತ್ರಣಕ್ಕೆ ಒಳಪಟ್ಟವನಾದರೂ ಅವನಿಗೆ ತನ್ನ ಆತ್ಮೋದ್ಧಾರ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ. 'ಉದ್ಧರೇದಾತ್ಮನಾತ್ಮಾನಂ' ವಾಕ್ಯದ ಅಂತರ್ಭಾವ ಅದು. ಮನುಷ್ಯ, ತನ್ನ ಭವಿಷ್ಯಾಧಿಕಾರಿ. ಅದಕ್ಕೇ ಕಾಲು ಕುಸಿದರೆ ಚಿಂತೆ ಬೇಡ; ನೆಲವಿದೆ ಎಂಬ ಧೈರ್ಯವನ್ನೂ ಕಗ್ಗ ನೀಡುತ್ತದೆ. ಯಾಕೆಂದರೆ ಅದು ಆತ್ಮಶಕ್ತಿಯ, ಸ್ವ ಉದ್ಧಾರದ ಸಾಧ್ಯತೆಯ ನೆಲ.

ಪದಬಂಧ 4919


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ನೈಪುಣ್ಯವುಳ್ಳವನು (4)
3.ಸದ್ಯದ ಪರಿಸ್ಥಿತಿ (3)
5.ಗುಣವನ್ನು ಹೇಳುವುದು (5)
7.ಹಣ್ಣು ಕಾಯಿ ಇತ್ಯಾದಿಗಳ ಮೇಲಿನ ಪದರ (2)
9.ಸಾವು ಹೀಗೆ ಬಂದಿದೆ (3)
11.ಪರಂಪರೆಯಲ್ಲಿ ಗಲಾಟೆ ಕಾಣುತ್ತಿದೆಯಲ್ಲಾ! (2)
13.ಈತ ವಿವೇಕಶಾಲಿ (5)
15.ಮಡಿವಂತನ ಮನೆಯ ಉಪ್ಪರಿಗೆ (3)
16.ಅದೇ ತಾನೆ ಅರಳಿದ ಹೂ (4)

ಮೇಲಿಂದ ಕೆಳಕ್ಕೆ

1.ಕೆಲಸಕ್ಕೆ ಬಾರದವನು (4)
2.ಒಣಗಿದ ವಸ್ತು (3)
4.ಮುಖ್ಯವಾದುದನ್ನು ಹೀಗೆನ್ನಿ (3)
6.ಕಣದಲ್ಲಿ ನಡೆದ ಮದುವೆ (3)
8.ಮಂಡೂಕವಿಲ್ಲಿ ತಿರುವು ಮುರುವಾಗಿದೆ (2)
9.ಇದು ಸವಿಯಾದುದು (3)
10.ಬಣ್ಣವಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆ (2)
12.ಸ್ವರ್ಗ ಇಲ್ಲಿಯೇ ಇದೆ (4)
13.ಗ್ರಹದ ಮೂರ್ತಿಯಿದು! (3)
14.ಒಂದೇ ವಿಷಯದಲ್ಲಿ ಆಸಕ್ತನಾಗಿರುವವನು (3)



4918ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಸ್ತಸಾಮುದ್ರಿಕೆ 4.ರಸಾಭಾಸ 5.ರವಾನೆ 7.ಕತ್ತರಿ 10.ನೆನಪು 11.ತಿರುಕ 13.ಬಾಲರವಿ 15.ಪ್ರಣಯಕಲಹ

ಮೇಲಿಂದ ಕೆಳಕ್ಕೆ:
1.ಹಗುರ 2.ಕೆರ 3.ಅಸದಳ 6.ನೆರಮನೆ 7.ಕದಪು 8.ರಿಯಾಯಿತಿ 9.ಕಾರುಬಾರು 12.ಕಲಹ 14.ವಿಪ್ರ

ಸುಡೊಕು 5305

		7		6				2
	8		5		2	3		
6		2		4		7		8
	7				9			
5		9			6		3	7
	6		7					4
2		3	8		4	6		
		6		2			8	9
8	1		6		7	4		

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5304 ಸುಡೊಕು

8	7	9	4	6	1	2	5	3
2	4	3	9	8	5	7	6	1
6	5	1	2	7	3	4	8	9
7	9	2	1	5	8	3	4	6
4	3	8	7	9	6	1	2	5
5	1	6	3	4	2	9	7	8
3	2	5	6	1	4	8	9	7
1	6	7	8	2	9	5	3	4
9	8	4	5	3	7	6	1	2

ಆಜಾನ್: ನ್ಯಾಯಾಲಯದ ಆದೇಶ ಜಾರಿ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ

'ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಸೀದಿಗಳಲ್ಲಿ ಆಜಾನ್‌ಗೆ ಸಂಬಂಧಿಸಿದಂತೆ ಕೋರ್ಟ್ ಆದೇಶವಿದೆ. ನ್ಯಾಯಾಲಯದ ಆದೇಶವನ್ನು ಜಾರಿ ಮಾಡುವಾಗ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡುತ್ತೇವೆ. ಯಾವುದನ್ನೂ ಒತ್ತಾಯಪೂರ್ವಕವಾಗಿ ಮಾಡುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಆಜಾನ್‌ಗೆ ಡೆಸಿಬಲ್ ಪ್ರಮಾಣವನ್ನು ನಿಗದಿ ಮಾಡಲಾಗಿದೆ. ಡೆಸಿಬಲ್ ತಪಾಸಣೆ ಮಾಡುವ ಯಂತ್ರ ಖರೀದಿ ಮಾಡುವುದರ ಜತೆಗೆ, ನ್ಯಾಯಾಲಯದ ಆದೇಶ ಅನುಷ್ಠಾನಕ್ಕೆ ತರುವ ಕೆಲಸ ಮಾಡುತ್ತೇವೆ' ಎಂದು ಹೇಳಿದರು.

'ಆಜಾನ್‌ಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಆದೇಶಗಳು ಹಳೆಯವೇ ಆಗಿವೆ. ನಮ್ಮ ಸರ್ಕಾರ ಯಾವುದೇ ಹೊಸ ಆದೇಶವನ್ನೂ ಹೊರಡಿಸಿಲ್ಲ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದ್ದೇವೆ. ವಿವಿಧ ಸಂಘಟನೆಗಳ ಜತೆ ಪೊಲೀಸ್ ಠಾಣೆಯ ಹಂತದಿಂದ ಹಿಡಿದು ಜಿಲ್ಲಾ ಮಟ್ಟದವರೆಗೆ ಈಗಾಗಲೇ ಈ ಸಂಬಂಧ ಹಲವು ಸಭೆಗಳನ್ನು ಮಾಡಿದ್ದೇವೆ. ಮುಂದೆಯೂ ಸಭೆಗಳನ್ನು ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಬೊಮ್ಮಾಯಿ ತಿಳಿಸಿದರು.

ಎಲ್ಲರೂ ಸಮಾನ: 'ಸರ್ಕಾರದ ದೃಷ್ಟಿಯಲ್ಲಿ ಎಲ್ಲ ನಾಗರಿಕರೂ ಸಮಾನರು. ಯಾವುದೇ ಭೇದ ಭಾವವಿಲ್ಲದೆ ಎಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತೇವೆ. ಯಾವುದೇ ಸಮಾಜ ಅಥವಾ ಸಂಘಟನೆಗಳು ಕಾನೂನು ಕೈಗೆತ್ತಿಕೊಳ್ಳದಂತೆ ಶಾಂತಿ ಸುವ್ಯವಸ್ಥೆ ಕಾಪಾಡಲು ಕ್ರಮವಹಿಸುತ್ತೇವೆ' ಎಂದರು.

ಜೆಡಿಎಸ್ ನಾಯಕ ಎಚ್.ಡಿ .ಕುಮಾರಸ್ವಾಮಿ ಅವರಿಗೆ ಪ್ರತಿಭಟನೆ ನಡೆಸುವ ಹಕ್ಕು ಇದೆ. ಆದರೆ, ಅವರ ಆಧಾರ ರಹಿತ ಹೇಳಿಕೆಗಳಿಗೆ ಉತ್ತರಿಸುವುದಿಲ್ಲ. ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ಕರ್ನಾಟಕ ಜನರ ಆಶೀರ್ವಾದದಿಂದ ಆಡಳಿತ ನಡೆಸುತ್ತಿದೆ. ಮುಂಬರುವ ದಿನಗಳಲ್ಲಿ 'ಇನ್ನಷ್ಟು ಉತ್ತಮ ಆಡಳಿತ ನೀಡಲಾಗುವುದು'. ಕೇವಲ ಹೇಳಿಕೆಗಳಿಂದ ಸಮಸ್ಯೆಗಳು ಇತ್ಯರ್ಥವಾಗುವುದಿಲ್ಲ ಎಂದು ಹೇಳಿದರು.

> ಶಬ್ದ ಮಾಲಿನ್ಯವಾಗದಂತೆ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಾವಳಿಗಳ ಅನುಸಾರವಾಗಿ ಆಜಾನ್‌ಗೆ ಶಬ್ದ ಮಿತಿ ನಿಗದಿ ಮಾಡುವ ಚರ್ಚೆ ನಡೆಯುತ್ತಿದೆ
> **ಡಾ.ಕೆ.ಸುಧಾಕರ್**, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

'ಮಸೀದಿಗಳಲ್ಲಿ ಧ್ವನಿವರ್ಧಕ: ತಕರಾರು ಸಲ್ಲ'

ಬೆಂಗಳೂರು: 'ಹಿಂದೂಗಳು ದೇವರಿಗೆ ಭಕ್ತಿಯಿಂದ ಸಲ್ಲಿಸುವ ಸೇವೆಗಳಿಗೆ ಮುಸ್ಲಿಮರು ಸೇರಿದಂತೆ ಅನ್ಯ ಧರ್ಮದ ಯಾರಿಂದಲೂ ಆಕ್ಷೇಪ ಇಲ್ಲದಿರುವಾಗ ಮಸೀದಿಗಳ ಧ್ವನಿವರ್ಧಕಗಳ ಬಗ್ಗೆ ತಕರಾರು ಏಕೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ಆಕ್ಷೇಪವಿದ್ದರೆ, ಮಸೀದಿಗಳಲ್ಲಿ ಧ್ವನಿವರ್ಧಕಗಳ ಶಬ್ದದ ಪ್ರಮಾಣವನ್ನು ವೈಜ್ಞಾನಿಕವಾಗಿ ಚಿಂತಿಸಿ ಕಡಿಮೆ ಮಾಡಲಿ. ಮುಸ್ಲಿಂ ಧರ್ಮಗುರುಗಳೂ ಈ ಬಗ್ಗೆ ಆಲೋಚನೆ ಮಾಡಲಿ' ಎಂದು ಸಲಹೆ ನೀಡಿದ್ದಾರೆ.

'ನಸುಕಿನಲ್ಲಿ ಸುಪ್ರಭಾತ ಮತ್ತು ಆಜಾನ್ ಕೂಗುವ ಪರಿಪಾಠ ನಿನ್ನೆ-ಇಂದಿನದಲ್ಲ. ದೇವಾಲಯಗಳಲ್ಲಿ ಸೂರ್ಯೋದಯಕ್ಕೂ ಮುನ್ನವೇ ಸುಪ್ರಭಾತ ಕೇಳಿಬರುತ್ತದೆ, ಮಸೀದಿಗಳಲ್ಲಿ ಆಜಾನ್ ಕೂಗುವುದನ್ನು ಬಾಲ್ಯದಿಂದಲೂ ಕೇಳಿಕೊಂಡೇ ಬೆಳೆದಿದ್ದೇವೆ. ದೇವಾಲಯಗಳಲ್ಲಿ ಮಹಾ ಮಂಗಳಾರತಿ ಸಂದರ್ಭದಲ್ಲಿ ಢಮರುಗ, ಜಾಗಟೆ, ಘಂಟೆ ಬಾರಿಸುವ ಸಂಪ್ರದಾಯವಿದೆ. ಶಿವನಿಗೆ ಪ್ರಿಯವಾದ ಢಮರುಗ ಯಾರಿಗಾದರೂ ಕಿರಿಕಿರಿ ಮಾಡಿದೆಯೆ? ಇಲ್ಲವಲ್ಲ' ಎಂದಿದ್ದಾರೆ.

'ದೇವಾಲಯಗಳಲ್ಲಿ ನಡೆಯುತ್ತಿದ್ದ ನಿತ್ಯ ಭಜನೆ, ಸುಪ್ರಭಾತ ವೇಳೆ ಕೇಳಿಬರುತ್ತಿದ್ದ ಶ್ಲೋಕ, ಕೀರ್ತನೆ, ಭಜನೆಗಳು ಕ್ರಮೇಣ ಕಣ್ಮರೆಯಾಗಿವೆ. ನಾವೆಲ್ಲರೂ ಸೇರಿ ಅವುಗಳ ಪುನರಾರಂಭ ಮಾಡೋಣ. ಮಕ್ಕಳಲ್ಲಿ ಸಾತ್ವಿಕ ಸಂಸ್ಕಾರ ಬೆಳೆಸೋಣ. ಇನ್ನೊಂದು ಧರ್ಮದ ನಂಬಿಕೆಗಳ ಮೇಲೆ ದಾಳಿ ಮಾಡುವುದನ್ನು ನಿಲ್ಲಿಸೋಣ' ಎಂದು ಹೇಳಿದ್ದಾರೆ.

'ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ಸಹಿಷ್ಣುತೆಯ ಆಶಯಕ್ಕೆ ಧಕ್ಕೆ ತರುವುದು ಬೇಡ. ಸಂಸತ್ತಿನಲ್ಲಿರುವ ಸಂವಿಧಾನ ಪ್ರತಿಗೆ ಶಿರಬಾಗಿ ನಮಿಸಿದ ಪ್ರಧಾನಿ ನರೇಂದ್ರ ಮೋದಿಯವರ ಆಶಯವನ್ನು ಹಿಂದೂ ಸಂಘಟನೆಗಳು ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ನಾಯಕರು ಮೋದಿಯವರ ಮೇಲ್ಪಂಕ್ತಿಯನ್ನು ಗೌರವಿಸಬೇಕು' ಎಂದಿದ್ದಾರೆ.

'ರಾಜ್ಯ ದ್ರೋಹದ ಕೆಲಸ': 'ಮುಸ್ಲಿಮರಿಂದ ಮಾವಿನ ಹಣ್ಣು ಖರೀದಿಸಬೇಡಿ ಎಂದು ಹೇಳುವುದಕ್ಕಿಂತ ರಾಜ್ಯ ದ್ರೋಹದ ಕೆಲಸ ಬೇರೆ ಇಲ್ಲ. ಹೀಗೆ ಮುಂದುವರಿದರೆ ಬಿಜೆಪಿ ವಿರುದ್ಧ ಜನರು ತಿರುಗಿಬೀಳುತ್ತಾರೆ' ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಮರಿಗೆ ಹಿಂದೂಗಳು ಮಾವು ಮಾರಾಟ ಮಾಡಬಾರದು ಅಥವಾ ಅವರಿಂದ ಖರೀದಿ ಮಾಡಬಾರದು ಎಂದು ಹಿಂದೂಪರ ಸಂಘಟನೆಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮಾವಿನ ಹಣ್ಣಿನ ಮೇಲೆ ಕೆಮಿಕಲ್ ಹಾಕಿ ಮುಸ್ಲಿಮರು ಮಾರುತ್ತಾರೆ ಎಂಬ ಆರೋಪವನ್ನು ಕೆಲವರು ಮಾಡುತ್ತಿದ್ದಾರೆ. ಕೇವಲ ಮತ ಗಳಿಕೆಗಾಗಿ ಇವೆಲ್ಲ ನಡೆಯುತ್ತಿವೆ' ಎಂದು ಕಿಡಿಕಾರಿದರು.

ಸಿ.ಎಂ. ಮೂಕ ಬಸವಣ್ಣ: ಪ್ರಿಯಾಂಕ್



ಕಲಬುರಗಿ: 'ಹಿಜಾಬ್, ಹಲಾಲ್ ಹಾಗೂ ಮಸೀದಿಗಳ ಮೇಲಿನ ಮೈಕ್ ತೆಗೆಸುವ ವಿವಾದಗಳನ್ನು ಸಮರ್ಥವಾಗಿ ನಿಭಾಯಿಸದ ಸರ್ಕಾರ ಇದ್ದೂ ಸತ್ತಂತಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೂಕ ಬಸವಣ್ಣ ಆಗಿದ್ದಾರೆ. ಸರ್ಕಾರಕ್ಕೆ ನಿರ್ದೇಶನ ನೀಡುತ್ತಿರುವ ಬಜರಂಗದಳದವರನ್ನು ಏಕೆ ನಿಯಂತ್ರಿಸಲು ಆಗುತ್ತಿಲ್ಲ' ಎಂದು ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಸೀದಿಗಳ ಮೇಲಿನ ಮೈಕ್ ಬಳಕೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸುಪ್ರೀಂ ಕೋರ್ಟ್ ಕೆಲವೊಂದು ನಿಯಮಗಳನ್ನು ರೂಪಿಸಿವೆ. ಇದು ಮಂದಿರ ಹಾಗೂ ಚರ್ಚ್‌ಗಳಿಗೂ ಅನ್ವಯಿಸುತ್ತದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಸರ್ಕಾರ ಜಾರಿಗೆ ತರಲಿ. ಆದರೆ, ಈ ವಿಚಾರವನ್ನು ಮುಂದಿಟ್ಟುಕೊಂಡು ಬಜರಂಗ ದಳ ಮಾತನಾಡುತ್ತಿದೆ. ಎಲ್ಲವನ್ನೂ ಮಾತನಾಡಲು ಇವರು ಯಾರು?' ಎಂದು ಹರಿಹಾಯ್ದರು.

'ಎಲ್ಲದಕ್ಕೂ ಮುಖ್ಯಮಂತ್ರಿ ಕುಮ್ಮಕ್ಕು'

ಬೆಂಗಳೂರು: 'ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಗೆ ವಿರೋಧ ಸೇರಿದಂತೆ ಇತ್ತೀಚಿನ ಎಲ್ಲ ಬೆಳವಣಿಗೆಗಳು ರಾಜ್ಯ ಸರ್ಕಾರದ ಕುಮ್ಮಕ್ಕಿನಿಂದಲೇ ನಡೆಯುತ್ತಿವೆ. ಮುಖ್ಯಮಂತ್ರಿ ಮೌನವಹಿಸಿರುವುದಷ್ಟೆ ಅಲ್ಲ, ಎಲ್ಲದಕ್ಕೂ ಕುಮ್ಮಕ್ಕು ನೀಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಸರ್ಕಾರಕ್ಕೆ ಗೊತ್ತಿಲ್ಲದೆ ಆರೆಸ್ಸೆಸ್ ಮತ್ತು ಬಜರಂಗದಳ ಇಷ್ಟೆಲ್ಲಾ ಮಾಡುತ್ತದೆಯೇ? ಇದನ್ನು ಸರ್ಕಾರ ಹತ್ತಿಕ್ಕಬೇಕು. ಸಮಾಜದ ಶಾಂತಿ ಕದಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ದೇವಸ್ಥಾನ, ಮಸೀದಿ, ಚರ್ಚ್ ಹೀಗೆ ಎಲ್ಲ ಕಡೆ ಧ್ವನಿವರ್ಧಕಗಳನ್ನು ಹಾಕುತ್ತಾರೆ. ಇದರಿಂದ ಯಾರಿಗೆ ತೊಂದರೆಯಾಗಿದೆ? ಚುನಾವಣಾ ವರ್ಷ ಎಂದು ಈ ರೀತಿ ಬೇಕಂತಲೇ ತಕರಾರು ತೆಗೆಯುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ. ಇವೆಲ್ಲ ಸಮಾಜದ ಶಾಂತಿ, ಸಾಮರಸ್ಯ ಹಾಳು ಮಾಡುವ ಪ್ರಯತ್ನಗಳು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

'ಜಿಲ್ಲೆಗೊಂದು ಗೋಶಾಲೆ ಯೋಜನೆಗೆ ಜೂನ್ 23ರ ಗಡುವು'

ಬೆಂಗಳೂರು: 'ಜಿಲ್ಲೆಗೊಂದು ಗೋಶಾಲೆ ಯೋಜನೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜೂನ್ 23ರ ಒಳಗೆ ಅನುಷ್ಠಾನ ಆಗದಿದ್ದರೆ ಅಧಿಕಾರಿಗಳ ತಲೆದಂಡ ಖಚಿತ' ಎಂದು ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಮಂಗಳವಾರ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ಜಿಲ್ಲೆಗೊಂದು ಗೋಶಾಲೆ ಅನುಷ್ಠಾನ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಯೋಜನೆ ಅನುಷ್ಠಾನದಲ್ಲಿ ತೊಡಕುಗಳಿದ್ದರೆ ತಕ್ಷಣ ಗಮನಕ್ಕೆ ತರುವಂತೆ ಸೂಚಿಸಿದರು.

'ಗೋ ಹತ್ಯೆ ನಿಷೇಧ ಕಾಯ್ದೆ ಜಾರಿ ಆದಾಗಿನಿಂದ ರಾಜ್ಯದಲ್ಲಿ ಗೋಶಾಲೆಗಳು ಕ್ರಮೇಣ ಭರ್ತಿಯಾಗುತ್ತಿವೆ. ಹೀಗಾಗಿ ಆದ್ಯತೆಯ ಮೇಲೆ ಗೋಶಾಲೆಗಳನ್ನು ನಿರ್ಮಿಸಬೇಕು. ಗೋಶಾಲೆ ತೆರೆಯುವಲ್ಲಿ ಆಗುತ್ತಿರುವ ವಿಳಂಬ ಸಹಿಸುವುದಿಲ್ಲ' ಎಂದು ಅಧಿಕಾರಿಗಳನ್ನು ಅವರು ತರಾಟೆಗೆ ತೆಗೆದುಕೊಂಡರು.

'ಬೇಸಿಗೆಯ ಧಗೆ ಹೆಚ್ಚುತ್ತಿರುವುದರಿಂದ ಗೋಶಾಲೆಗಳಲ್ಲಿ ಮೇವು, ನೀರು ಹಾಗೂ ಔಷಧಿ ಕೊರತೆ ಆಗದಂತೆ ನೋಡಿಕೊಳ್ಳಬೇಕು. ದೇಸಿ ತಳಿಗಳ ಸಂರಕ್ಷಣೆ ಹಾಗೂ ಗೋಹತ್ಯೆಯ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕ್ರಮಕೈಗೊಳ್ಳಬೇಕು' ಎಂದೂ ಅಧಿಕಾರಿಗಳಿಗೆ ಸೂಚಿಸಿದರು.



ಇಲಾಖೆಯ ಕಾರ್ಯದರ್ಶಿ ಸಲ್ಮಾ ಫಹಿಂ, ಆಯುಕ್ತ ಬಸವರಾಜೇಂದ್ರ, ನಿರ್ದೇಶಕ ಮಂಜುನಾಥ್ ಪಾಳೇಗಾರ ಸಭೆಯಲ್ಲಿದ್ದರು.

ಕೋವಿಡ್: 11 ಜಿಲ್ಲೆಗಳು ಸೋಂಕು ಮುಕ್ತ

ಬೆಂಗಳೂರು: ರಾಜ್ಯದಲ್ಲಿ ವಿಜಯಪುರ, ಉತ್ತರ ಕನ್ನಡ, ರಾಯಚೂರು ಸೇರಿದಂತೆ 11 ಜಿಲ್ಲೆಗಳು ಕೋವಿಡ್ ಮುಕ್ತಗೊಂಡಿವೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 1,468ಕ್ಕೆ ಇಳಿಕೆ ಕಂಡಿದೆ.

ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡ ಬಳಿಕ ಎರಡು ಲಕ್ಷದ ಗಡಿ ಸಮೀಪಿಸಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ, ಸೋಂಕು ನಿಯಂತ್ರಣಕ್ಕೆ ಬಂದಿರುವುದರಿಂದ 12,376ಕ್ಕೆ ಇಳಿಕೆಯಾಗಿದೆ. ಕಳೆದೊಂದು ತಿಂಗಳಿನಿಂದ ಹೊಸ ಪ್ರಕರಣಗಳು ಹಾಗೂ ಪರೀಕ್ಷೆಗಳ ಸಂಖ್ಯೆ ಇಳಿಮುಖವಾಗಿದೆ. ಮಂಗಳವಾರ 29 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಯಾವುದೇ ಮರಣ ಪ್ರಕರಣ ಹೊಸದಾಗಿ ವರದಿಯಾಗಿಲ್ಲ.

ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 39.45 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ 39.04 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಚಿಕ್ಕಮಗಳೂರು, ದಾವಣಗೆರೆ, ಗದಗ, ಹಾಸನ, ಹಾವೇರಿ, ಕೊಡಗು, ಕೊಪ್ಪಳ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಸದ್ಯ ಕೋವಿಡ್ ಪ್ರಕರಣಗಳಿಲ್ಲ. ಬಾಗಲಕೋಟೆ, ಯಾದಗಿರಿ ಸೇರಿದಂತೆ 15 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತಕ್ಕಿಂತ ಕಡಿಮೆ ಇದೆ. ಬೆಂಗಳೂರಿನಲ್ಲಿ 1,377 ಸೋಂಕಿತರಿದ್ದಾರೆ.

ಸೋಂಕು ದೃಢ ಪ್ರಮಾಣ ಶೇ 0.23ಕ್ಕೆ ಇಳಿಕೆಯಾಗಿದೆ. ವಾರದ ಸರಾಸರಿ ಶೇ 0.33 ರಷ್ಟಿದೆ. ಕೊರೊನಾ ಸೋಂಕಿತರಲ್ಲಿ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,055ಕ್ಕೆ ಏರಿಕೆಯಾಗಿದೆ.

ಕನ್ನಡ ಶಾಲೆಗಳ ಬೆಳವಣಿಗೆಗೆ ಆರು ನಿರ್ಣಯ

ಬೆಂಗಳೂರು: ಕನ್ನಡ ಶಾಲೆಗಳ ಉಳಿವು ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅಧ್ಯಕ್ಷತೆಯ ದುಂಡುಮೇಜಿನ ಸಭೆಯು ಆರು ನಿರ್ಣಯಗಳನ್ನು ಕೈಗೊಂಡಿದೆ.

ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಸಭೆಯಲ್ಲಿ ಆರು ನಿರ್ಣಯಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಲಾಯಿತು.

ಇನ್ನು ಮುಂದೆ ಸರ್ಕಾರವು ಯಾವುದೇ ಕಾರಣವನ್ನು ನೀಡಿ ಸರ್ಕಾರಿ, ಅನುದಾನ ರಹಿತ ಹಾಗೂ ಅನುದಾನ ಸಹಿತ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಬಾರದು. ಕನ್ನಡ ಶಾಲೆಗಳನ್ನು ಸಬಲೀಕರಣಗೊಳಿಸಲು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009ರ (ಆರ್.ಟಿ.ಇ) ಅನ್ವಯ ಇರುವ 9 ಮೂಲಭೂತ ಮಾನದಂಡಗಳನ್ನು ಸಮರ್ಪಕವಾಗಿ ಪರಿಪಾಲನೆ ಮಾಡಬೇಕು. ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಎಸ್.ಜಿ.ಡಿ.ಪಿ) ಕನಿಷ್ಠ ಶೇ 6 ರಷ್ಟು ಮೊತ್ತವನ್ನು ಶಿಕ್ಷಣಕ್ಕಾಗಿ ಪ್ರತಿವರ್ಷವೂ ಬಜೆಟ್‌ನಲ್ಲಿ ಮೀಸಲಿಡಬೇಕು ಎಂದು ನಿರ್ಣಯ ಕೈಗೊಳ್ಳಲಾಯಿತು.

ಅನುದಾನ ರಹಿತ ಕನ್ನಡ ಶಾಲೆಗಳು ಉಳಿಯುವುದಕ್ಕೆ ಮತ್ತು ಬೆಳೆಯುವುದಕ್ಕೆ ವಿಶೇಷ ಅನುದಾನ ಮತ್ತು ರಿಯಾಯಿತಿಯನ್ನು ನೀಡಬೇಕು. ರಾಜ್ಯ ಭಾಷೆಯು 1 ರಿಂದ 8ನೇ ತರಗತಿಯವರೆಗೆ ಶಿಕ್ಷಣ ಮಾಧ್ಯಮವಾಗಬೇಕೆಂದು ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕು. ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ 2022-23ನೇ ಶೈಕ್ಷಣಿಕ ವರ್ಷದಿಂದ ಯಾವುದೇ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಬಾರದು ಎಂಬ ನಿರ್ಣಯಕ್ಕೆ ಸಭೆಯಲ್ಲಿ ಒಮ್ಮತ ವ್ಯಕ್ತವಾಯಿತು.

ಪ್ರಧಾನ ಗುರುದತ್ತ, ಶತಾವಧಾನಿ ಆರ್. ಗಣೇಶ್, ಅಬ್ದುಲ್ ರೆಹಮಾನ್ ಪಾಷಾ, ಪ್ರೊ.ಜಿ. ಅಶ್ವತ್ಥನಾರಾಯಣ ಸೇರಿದಂತೆ ವಿವಿಧ ಕ್ಷೇತ್ರಗಳ 20 ಮಂದಿ ವಿಷಯ ತಜ್ಞರು ಕನ್ನಡ ಶಾಲೆಗಳ ಬಗ್ಗೆ ತಮ್ಮ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಶಾಲೆಗಳ ಬಗ್ಗೆ ದುಂಡು ಮೇಜಿನ ಸಭೆ • ಕಾದಂಬರಿಕಾರ ಎಸ್.ಎಲ್. ಭೈರಪ್ಪ ಸಲಹೆ

'ದ್ವಿ ಭಾಷಾ ಶಿಕ್ಷಣದಿಂದ ಕನ್ನಡ ಶಾಲೆಗಳ ಉಳಿವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮಾಧ್ಯಮ ಶಿಕ್ಷಣದ ಬಗೆಗಿನ ಕೀಳರಿಮೆ ಹೋಗಲಾಡಿಸಲು ಹಾಗೂ ಮಾತೃಭಾಷೆ ಶಿಕ್ಷಣ ಪ್ರೋತ್ಸಾಹಿಸಲು ಶಾಲೆಗಳಲ್ಲಿ ದ್ವಿ ಭಾಷಾ ಶಿಕ್ಷಣ ಅಗತ್ಯ. ಕನ್ನಡ ಮಾಧ್ಯಮದ ಮಕ್ಕಳಿಗೆ ಇಂಗ್ಲಿಷ್ ಭಾಷೆ ಪರಿಚಯಿಸುವ ಹಾಗೂ ಆಂಗ್ಲ ಮಾಧ್ಯಮದ ಮಕ್ಕಳಿಗೆ ಕನ್ನಡ ಕಲಿಸುವ ಪಠ್ಯ ಅಗತ್ಯ' ಎಂದು ಕಾದಂಬರಿಕಾರ ಎಸ್.ಎಲ್. ಭೈರಪ್ಪ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಕನ್ನಡ ಶಾಲೆ ಉಳಿಸಿ: ಕನ್ನಡ ಬೆಳೆಸಿ' ದುಂಡು ಮೇಜಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಆಂಗ್ಲ ಮಾಧ್ಯಮ ಶಿಕ್ಷಣದಿಂದ ತಾಂತ್ರಿಕ ಶಿಕ್ಷಣ ಸುಲಭವಾಗುತ್ತದೆ ಎಂಬ ಮನೋಭಾವ ಹಳ್ಳಿ ಜನರಲ್ಲಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಗೆ ಆದ್ಯತೆ ನೀಡಬೇಕು. ಮಾಧ್ಯಮಿಕ ಶಿಕ್ಷಣದಲ್ಲಿ ಆಂಗ್ಲ ಭಾಷೆ ಪರಿಚಯಿಸಬೇಕು. ಪ್ರೌಢ ಶಾಲೆಗಳಲ್ಲಿ 60 ನಿಮಿಷಗಳ ತರಗತಿಗಳಲ್ಲಿ 40 ನಿಮಿಷಗಳು ಕನ್ನಡ ಹಾಗೂ ಉಳಿದ 20 ನಿಮಿಷಗಳು ಆಂಗ್ಲ ಭಾಷೆಯಲ್ಲಿ ಬೋಧಿಸುವ ವ್ಯವಸ್ಥೆ ಜಾರಿಯಾಗಬೇಕು. ಎರಡೂ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ಇದರಿಂದ ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶ ಪಡೆಯಲು ಅನುಕೂಲ ಆಗುತ್ತದೆ. ಮಾಧ್ಯಮಗಳ ನಡುವಿನ ಕಂದಕವೂ ತೊಲಗಲಿದೆ' ಎಂದು ಹೇಳಿದರು.



ದುಂಡು ಮೇಜಿನ ಸಭೆಯಲ್ಲಿ ಬಿ.ಸಿ. ನಾಗೇಶ್ ಅವರು ಎಸ್.ಎಲ್. ಭೈರಪ್ಪ ಅವರಿಗೆ ನಮಸ್ಕರಿಸಿದರು. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮತ್ತು ಮಹೇಶ ಜೋಶಿ ಇದ್ದಾರೆ – ಪ್ರಜಾವಾಣಿ ಚಿತ್ರ

'ಉಪನ್ಯಾಸಕರಿಗೆ ಭಾಷಾ ಶಕ್ತಿ ಅಗತ್ಯ. ಕನ್ನಡ ಮಾಧ್ಯಮದ ಪ್ರಾಧ್ಯಾಪಕರಿಗೆ ಇಂಗ್ಲಿಷ್ ಜ್ಞಾನ, ಇಂಗ್ಲಿಷ್ ಪ್ರಾಧ್ಯಾಪಕರಿಗೆ ಕನ್ನಡದ ಜ್ಞಾನ ಇರಬೇಕು. ಎರಡೂ ಭಾಷೆಯನ್ನು ತರಗತಿಯಲ್ಲಿ ಬಳಸಬೇಕು. ಈ ವ್ಯವಸ್ಥೆ ಬಂದರೆ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಅಭ್ಯಸಿಸುತ್ತಿರುವ ಮಕ್ಕಳ ಪೋಷಕರ ಭಯ ಹೋಗಲಾಡಿಸಲು ಸಾಧ್ಯ' ಎಂದು ಹೇಳಿದರು.

> ಕನ್ನಡ ಶಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕರು, ಸರ್ಕಾರಿ ನೌಕರರು ಕಡ್ಡಾಯವಾಗಿ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಕನ್ನಡ ಮಾಧ್ಯಮದಲ್ಲಿ ನಡೆಸಬೇಕು.
> **ಮಹೇಶ ಜೋಶಿ, ಕಸಾಪ ಅಧ್ಯಕ್ಷ**

3 ಸಾವಿರ ಮಾದರಿ ಶಾಲೆಗಳು: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಈ ಬಾರಿಯ ಬಜೆಟ್‌ನಲ್ಲಿ ಮಾದರಿ ಶಾಲೆಗಳನ್ನು ಘೋಷಿಸಲಾಗಿದೆ. ಶಾಲೆಗಳಲ್ಲಿ ತರಗತಿಗಳು ಇರುವಷ್ಟು ಕೊಠಡಿ ಹಾಗೂ ಶಿಕ್ಷಕರನ್ನು ಒದಗಿಸಲಾಗುತ್ತದೆ. ಇಂಗ್ಲಿಷ್ ಕಲಿಕೆ ಬಗ್ಗೆ ಪ್ರತ್ಯೇಕ ತರಗತಿ ಇರಲಿದೆ. ಈ ಸಾಲಿನಲ್ಲೇ 3 ಸಾವಿರ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಮಾರ್ಪಾಡು ಮಾಡಲಾಗುವುದು. ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದ ಒಂದು ಪುಟದಲ್ಲಿ ಕನ್ನಡ ಮತ್ತೊಂದು ಪುಟದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪಠ್ಯ ಇರಲಿದೆ' ಎಂದರು.

'3,800 ಸರ್ಕಾರಿ ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮಕ್ಕಳಿದ್ದಾರೆ. 562 ಶಾಲೆಗಳಲ್ಲಿ ತಲಾ ಒಬ್ಬರು ಕಲಿಯುತ್ತಿದ್ದಾರೆ' ಎಂದರು.

ವೀರಭದ್ರ ಚನ್ನಮಲ್ಲ ಸ್ವಾಮೀಜಿ ಹಾಗೂ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉಪಸ್ಥಿತರಿದ್ದರು.

'ಪ್ರೋತ್ಸಾಹ ಧನ ಸ್ಥಾಪನೆ ಮೂಲೆಗುಂಪು'

'ಸರಸ್ವತಿ ಸಮ್ಮಾನ್ ಪ್ರಶಸ್ತಿ ಬಂದಾಗ ರಾಜ್ಯ ಸರ್ಕಾರವು ₹ 5 ಲಕ್ಷ ಗೌರವ ಧನ ನೀಡಿತ್ತು. ಅಂದಿನ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರಿಗೆ ಆ ಹಣವನ್ನು ವಾಪಸ್ ನೀಡಿ, ಉತ್ತಮ ಅಂಕ ಪಡೆದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಸ್ಥಾಪಿಸಲು ಮನವಿ ಮಾಡಿಕೊಂಡಿದ್ದೆ. ಸರ್ಕಾರವು ಒಂದಷ್ಟು ಹಣವನ್ನು ಈ ಕಾರ್ಯಕ್ಕೆ ಮೀಸಲಿಡುವಂತೆ ಸಲಹೆ ನೀಡಿದ್ದೆ. ₹ 200 ಕೋಟಿ ಮೀಸಲಿರಿಸಿ, 6 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಒದಗಿಸಲು ಕ್ರಮ ವಹಿಸುವುದಾಗಿ ಅಂದಿನ ಶಿಕ್ಷಣ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದ್ದರು. ಆದರೆ, ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಇದನ್ನು ಮೂಲೆಗುಂಪು ಮಾಡಿತು' ಎಂದು ಎಸ್.ಎಲ್. ಭೈರಪ್ಪ ಬೇಸರ ವ್ಯಕ್ತಪಡಿಸಿದರು.

'ಕನ್ನಡ ಮಾಧ್ಯಮ ಶಿಕ್ಷಣದಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಸರ್ಕಾರವು ಶಿಷ್ಯ ವೇತನ ಸ್ಥಾಪಿಸಬೇಕು' ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ನಾಗೇಶ್, 'ಶಿಷ್ಯ ವೇತನಕ್ಕೆ ₹200 ಕೋಟಿ ಮೀಸಲಿಡುವ ಬಗ್ಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜತೆಗೆ ಚರ್ಚಿಸಿ, ಮುಖ್ಯಮಂತ್ರಿಯೊಂದಿಗೆ ಸಮಾಲೋಚನೆ ನಡೆಸುತ್ತೇನೆ' ಎಂದರು.



ಪ್ರಶಸ್ತಿ ಪ್ರದಾನ

ಮುನಿಸ್ವಾಮಿ, ಆರ್.ಎಂ.ಕಾಂತರಾಜು, ಎನ್.ಡಿ.ವೆಂಕಮ್ಮ, ದಾನಪ್ಪ ಸಿ.ನಿಲೋಗಲ್, ವೀರಪ್ಪ ಬಿ.ಸವಣೂರು ಅವರಿಗೆ ಬಾಬು ಜಗಜೀವನರಾಂ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಚಿವರಾದ ಸಿ.ಸಿ.ಪಾಟೀಲ, ಗೋವಿಂದ ಕಾರಜೋಳ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಸಚಿವ ಕೋಟ ಶ್ರೀನಿವಾಸ ಪೂಜಾರಿ ಇದ್ದರು.

ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ

'ದಲಿತರನ್ನು ಸಿ.ಎಂ ಮಾಡಲು ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅದ್ಯಾವ ಸ್ವಾಮಿಯೋ ಗೊತ್ತಿಲ್ಲ. ದಲಿತರೊಬ್ಬರನ್ನು ನಿಮ್ಮ ಪಕ್ಷದಿಂದ ಮುಖ್ಯಮಂತ್ರಿ ಮಾಡುತ್ತೀರಾ? ಮುಸ್ಲಿಂ ಸಮುದಾಯಕ್ಕೆ ಸೇರಿದವರನ್ನು ಉಪಮುಖ್ಯಮಂತ್ರಿ ಮಾಡುತ್ತೀರಾ? ಎಂದು ಸವಾಲು ಹಾಕಿದ್ದಾರೆ. ಕಾಲ ಕೂಡಿ ಬಂದರೆ ಮುಂದಿನ ಬಾರಿ ದಲಿತರನ್ನೇ ಮುಖ್ಯಮಂತ್ರಿ ಮಾಡಲು ತಯಾರಿದ್ದೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಉಳುವ ಯೋಗಿಯ ನೋಡಲ್ಲಿ– ಕೃಷಿಕರ ಕಷ್ಟ ಮತ್ತು ಪರಿಹಾರಗಳು' ಕುರಿತು ಹಸಿರು ಸೇನೆ ಹಮ್ಮಿಕೊಂಡಿದ್ದ ರೈತ ಮುಖಂಡರೊಂದಿಗಿನ ಸಂವಾದದಲ್ಲಿ ಮಂಗಳವಾರ ಮಾತನಾಡಿದರು.

'ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ಬದುಕು ಕಟ್ಟಿಕೊಳ್ಳಲು ಆಗದ ಅದೆಷ್ಟೋ ಮಂದಿ ಈಗಲೂ ಸಹಾಯ ಬಯಸಿ ಮನೆ ಮುಂದೆ ನಿಲ್ಲುತ್ತಾರೆ. ಅವರಿಗೆ ಹಂಚಲು ನಿತ್ಯ ₹10 ಲಕ್ಷದಿಂದ ₹20 ಲಕ್ಷ ಎಲ್ಲಿಂದ ತರಲಿ. ಮುಖ್ಯಮಂತ್ರಿ ಆಗಿದ್ದಾಗ ಬೇರೆಯವರಂತೆ ನಾನೇನು ಹಣ, ಆಸ್ತಿ ಮಾಡಲಿಲ್ಲ' ಎಂದರು.

'ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೋದಾಮು ಹಾಗೂ 30 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಕಟ್ಟುವ, ಎಲ್‌ಕೆಜಿಯಿಂದ 12ನೇ ತರಗತಿವರೆಗೆ ಗುಣಮಟ್ಟದ ಶಿಕ್ಷಣವನ್ನು ಉಚಿತವಾಗಿ ನೀಡುವ ಆಲೋಚನೆ ಇದೆ. ಅದಕ್ಕೆ ನೀವು ನಮ್ಮ ಕೈಬಲಪಡಿಸಬೇಕು. ಶ್ರೀಲಂಕಾದಲ್ಲಿ ಆಹಾರಕ್ಕಾಗಿ ಹಾಹಾಕಾರ ಎದ್ದಿದೆ. ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ನಮಗೂ ಅದೇ ಪರಿಸ್ಥಿತಿ ಎದುರಾಗಲಿದೆ' ಎಂದರು.

'ಹತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ರೈತ ಮುಖಂಡರನ್ನೇ ಪಕ್ಷದ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲು ತಯಾರಿದ್ದೇನೆ. ರೈತ ಪರವಾಗಿ, ಪ್ರಾಮಾಣಿಕವಾಗಿ ಕೆಲಸ ಮಾಡುವ ಛಲ ಇರುವವರು ಈಗಿನಿಂದಲೇ ಸಿದ್ಧರಾಗಿ' ಎಂದು ಕರೆ ನೀಡಿದರು.'ಇದೇ 16ರ ಹನುಮ ಜಯಂತಿಯಂದು 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದೇವೆ.ಮತಗಳಿಕೆದೃಷ್ಟಿಯಿಂದಈಕಾರ್ಯಕ್ರಮ ರೂಪಿಸಿಲ್ಲ' ಎಂದು ಹೇಳಿದರು.

'ನೀರಾವರಿ ಯೋಜನೆ ಪೂರ್ಣಗೊಳಿಸದಿದ್ದರೆ ಪಕ್ಷ ವಿಸರ್ಜನೆ'

'ಜೆಡಿಎಸ್ ಅಧಿಕಾರಕ್ಕೆ ಬಂದರೆ ರಾಜ್ಯದ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುತ್ತೇವೆ. ಅದಕ್ಕೆ ಸುಮಾರು ₹5 ಲಕ್ಷ ಕೋಟಿ ಹಣ ಬೇಕು. ಅನುದಾನಕ್ಕಾಗಿ ಕೇಂದ್ರದ ಮುಂದೆ ಕೈಚಾಚದೆ ರಾಜ್ಯದಲ್ಲೇ ಸಂಪನ್ಮೂಲ ಕ್ರೋಡೀಕರಿಸುತ್ತೇವೆ. 5 ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸದಿದ್ದರೆ ಪಕ್ಷವನ್ನೇ ವಿಸರ್ಜಿಸುತ್ತೇವೆ' ಎಂದರು.

'ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಈಗಿನ ಸರ್ಕಾರದ ಬಳಿ ಹಣವಿಲ್ಲ. ಹೀಗಾಗಿ ತಮಿಳುನಾಡು, ಗೋವಾ ವಿರೋಧಿಸುತ್ತಿವೆ ಎಂಬ ನೆಪ ಹೇಳಿ ರೈತರನ್ನು ದಾರಿ ತಪ್ಪಿಸುತ್ತಿದೆ' ಎಂದು ಟೀಕಿಸಿದರು.

'ಹಜ್ ಯಾತ್ರೆ ವಿಧಾನ ನಿರ್ಧಾರ ನಮ್ಮದಲ್ಲ'

ನವದೆಹಲಿ: ಹಜ್ ಯಾತ್ರೆಗಾಗಿ ಬೇಕಾಗಿರುವ ಎಲ್ಲಾ ವ್ಯವಸ್ಥೆಗಳನ್ನು ಸರ್ಕಾರ ಕೈಗೊಂಡಿದೆ. ಆದರೆ, ಯಾತ್ರೆ ವಿಧಾನದ ಬಗ್ಗೆ ಸೌದಿ ಅರೇಬಿಯಾ ನಿರ್ಧಾರ ಕೈಗೊಳ್ಳಬೇಕು ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಅವರು ಮಂಗಳವಾರ ರಾಜ್ಯಸಭೆಗೆ ತಿಳಿಸಿದರು.

ಕೋವಿಡ್ ಸಾಂಕ್ರಾಮಿಕದಿಂದಾಗಿ ಕಳೆದ ಎರಡು ವರ್ಷ ಅಂತರರಾಷ್ಟ್ರೀಯ ಹಜ್ ಯಾತ್ರೆ ನಡೆದಿಲ್ಲ. 2022ರಲ್ಲಿ ಹಜ್ ಯಾತ್ರೆ ಪುನರಾರಂಭದ ದಿನಾಂಕವನ್ನು ದೃಢಪಡಿಸುವಂತೆ ಟಿಎಂಸಿ ನಾಯಕ ನದೀಮುಲ್ ಹಕ್ ಅವರು ಶೂನ್ಯ ಅವಧಿಯಲ್ಲಿ ಒತ್ತಾಯಿಸಿದರು.

ಇದಕ್ಕೆ ಉತ್ತರಿಸಿದ ನಖ್ವಿ,'ಭಾರತದಿಂದ ಹಜ್ ಯಾತ್ರೆಗೆ ತೆರಳಲು ಎಷ್ಟು ಜನರಿಗೆ ಅವಕಾಶವಿದೆ ಎಂಬ ವಿಷಯ ಸೇರಿದಂತೆ ಇತರ ಅಂಶಗಳ ಬಗ್ಗೆ ಸೌದಿ ಅರೇಬಿಯಾ ನಿರ್ಧಾರ ಕೈಗೊಳ್ಳಬೇಕಾಗಿದೆ' ಎಂದು ಹೇಳಿದರು.

ಮಹಿಳೆಯರ ಮತ ಸೆಳೆಯಲು ಶೋಭಾ ಪರ ಒಲವು?

ಬಿಜೆಪಿ 'ಸಾರಥ್ಯ'ಕ್ಕೆ ಶೋಭಾ- ರವಿ ಪೈಪೋಟಿ

• ಎಸ್ ರವಿಪ್ರಕಾಶ್



ಶೋಭಾ



ಸಿ.ಟಿ. ರವಿ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಗೆ ಬಿಜೆಪಿ ಭರ್ಜರಿ ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ವಿಚಾರವೂ ಮುನ್ನೆಲೆಗೆ ಬಂದಿದೆ. ಅಧ್ಯಕ್ಷರ ಹುದ್ದೆಗೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮಧ್ಯೆ ಪೈಪೋಟಿ ಏರ್ಪಟ್ಟಿದೆ.

ನಳಿನ್ ಕುಮಾರ್ ಕಟೀಲ್ ಅವರ ಅವಧಿ ಇದೇ ಆಗಸ್ಟ್ ತಿಂಗಳಿಗೆ ಮುಗಿಯಲಿದೆ. ಚುನಾವಣೆಯಲ್ಲಿ ಎಲ್ಲ ನಾಯಕರನ್ನು ಒಗ್ಗೂಡಿಸಿಕೊಂಡು ಹೋಗುವ, ಜನರನ್ನು ಪ್ರಖರ ಮಾತುಗಾರಿಕೆಯಿಂದ ಸೆಳೆಯಬಲ್ಲ ಮತ್ತು ಕಠಿಣ ಪರಿಶ್ರಮ ಹಾಕುವ ನಾಯಕರ ಹುಡುಕಾಟ ನಡೆಸಿದ್ದು, ಈ ಇಬ್ಬರು ನಾಯಕರ ಹೆಸರು ಪರಿಶೀಲನೆಯಲ್ಲಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಇತ್ತೀಚೆಗೆ ಉತ್ತರಪ್ರದೇಶವೂ ಸೇರಿದಂತೆ ಹಲವು ರಾಜ್ಯಗಳ ಚುನಾವಣೆಗಳಲ್ಲಿ ಮಹಿಳಾ ಮತದಾರರು ಬಿಜೆಪಿಗೆ ಕೈ ಹಿಡಿದಿರುವುದರಿಂದ ಕರ್ನಾಟಕದಲ್ಲೂ ಈ ಪ್ರಯೋಗ ಮುಂದುವರಿಸಲು ಸಿದ್ಧತೆ ನಡೆಸಿದೆ. ಇಂತಹ ಸಂದರ್ಭದಲ್ಲಿ ಮಹಿಳಾ ಅಧ್ಯಕ್ಷರಿದ್ದರೆ ಹೆಚ್ಚು ಅನುಕೂಲ ಆಗಬಹುದು ಎಂಬುದು ಪಕ್ಷದ ಲೆಕ್ಕಾಚಾರ. ಶೋಭಾ ಅವರು ಉತ್ತರ ಪ್ರದೇಶ ಚುನಾವಣೆಯಲ್ಲಿ ಉಸ್ತುವಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಸಿ.ಟಿ.ರವಿ ಅವರು ತಮಿಳುನಾಡು ಮತ್ತು ಗೋವಾದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಉಸ್ತುವಾರಿಯಾಗಿದ್ದರು. ಅಧ್ಯಕ್ಷ ಹುದ್ದೆಗೆ ಇವರು ಹೆಸರೂ ಮುಂಚೂಣಿಯಲ್ಲಿದೆ. ಅಲ್ಲದೆ, ಎಸ್‌ಸಿ- ಎಸ್‌ಟಿ, ಹಿಂದುಳಿದ ವರ್ಗದಲ್ಲೂ ಹುಡುಕಾಟ ನಡೆಸಲಾಗಿದೆ. ಅಂತಿಮವಾಗಿ ಶೋಭಾ ಅಥವಾ ರವಿ ಅವರಲ್ಲಿ ಒಬ್ಬರು ಆಯ್ಕೆಯಾಗುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ಖಚಿತಪಡಿಸಿವೆ.

ಸಂಘಟನೆಗೆ ತಾಕೀತು: ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ಪ್ರಮುಖರ ಸಭೆಯಲ್ಲಿ (ಕೋರ್ ಕಮಿಟಿ) ಹಳೇ ಮೈಸೂರು ಭಾಗದಲ್ಲಿ ಸಂಘಟನೆಗೆ ಒತ್ತು ನೀಡದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು. 'ಹಳೆ ಮೈಸೂರು ಭಾಗದಲ್ಲಿ ಪಕ್ಷವನ್ನು ಸದೃಢಗೊಳಿಸಲು ಸಂಘಟನಾತ್ಮಕವಾಗಿ ಏನೆಲ್ಲಾ ಕ್ರಮ ತೆಗೆದುಕೊಂಡಿದ್ದೀರಿ ತಿಳಿಸಿ' ಎಂದು ಅವರು ನಾಯಕರಿಗೆ ಪ್ರಶ್ನೆ ಹಾಕಿದರು.

ಯಾವುದೇ ನಾಯಕರಿಂದಲೂ ಸ್ಪಷ್ಟ ಉತ್ತರ ಬಾರದಿದ್ದಾಗ, 'ನಾನು ಎಲ್ಲವನ್ನು ಗಮನಿಸಿದ್ದೇನೆ. ಹಳೆ ಮೈಸೂರು ಭಾಗದಲ್ಲಿ ಪಕ್ಷದ ಸಂಘಟನೆಗೆ ಒತ್ತು ನೀಡಿಲ್ಲ. ಅವಧಿಪೂರ್ವ ಮಾತ್ರವಲ್ಲ, ನಿಗದಿತ ಅವಧಿಯಲ್ಲಿ ಚುನಾವಣೆ ಎದುರಾದರೂ ಅಲ್ಲಿ ಸಂಘಟನೆ ಶಕ್ತಿಶಾಲಿಯಾಗಿಲ್ಲ. ಈ ಭಾಗದಲ್ಲಿ ಪಕ್ಷವನ್ನು ಬಲಪಡಿಸಲು ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಆದಷ್ಟು ಬೇಗ ತನ್ನಿ' ಎಂದು ಅವರು ತಾಕೀತು ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಧಾನಸಭಾ ಚುನಾವಣೆ ವೇಳೆ ಹಳೆ ಮೈಸೂರು ಭಾಗದ ಕೆಲವು ಜಿಲ್ಲೆಗಳ ಉಸ್ತುವಾರಿಯನ್ನು ಪಕ್ಷದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ನೀಡುವ ಸಾಧ್ಯತೆಯ ಬಗ್ಗೆಯೂ ಚರ್ಚೆ ನಡೆದಿದೆ. ವಿಜಯೇಂದ್ರ ಅವರಿಗೆ ಉಸ್ತುವಾರಿ ನೀಡಿದರೆ ಈ ಭಾಗದಲ್ಲಿ ಲಿಂಗಾಯತ ಸಮುದಾಯವನ್ನು ಸೆಳೆಯಲು ಅನುಕೂಲವಾಗುತ್ತದೆ ಎಂಬ ಲೆಕ್ಕಾಚಾರವೂ ಇದೆ. ಒಂದು ವೇಳೆ ಈ ಅಂಶವನ್ನು ವರಿಷ್ಠರು ಗಂಭೀರವಾಗಿ ಪರಿಗಣಿಸಿದರೆ, ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಸ್ಥಾನ ಕಲ್ಪಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ವೆಬ್ ಇಂಡೆಂಟ್ ಗೊಂದಲ: ಮದ್ಯ ಖಾಲಿ!

ಒಂದನೇ ಪುಟದಿಂದ

ಈ ತಂತ್ರಾಂಶದಲ್ಲಿ ಪ್ರತಿ ಸನ್ನದುದಾರರಿಗೆ ಪ್ರತ್ಯೇಕ ಖಾತೆಗಳನ್ನು ಹೊಂದಲು ಅವಕಾಶ ಇದೆ. ಆ ಖಾತೆಯಲ್ಲಿ ಮೊದಲೇ ಹಣ ಜಮಾವಣೆ ಮಾಡಿಟ್ಟುಕೊಂಡಿರಬೇಕು. ಆ ಖಾತೆಯಲ್ಲಿ ಇರುವಷ್ಟು ಮೊತ್ತಕ್ಕಷ್ಟೇ ಮದ್ಯ ಖರೀದಿ ಮಾಡಲು ಅವಕಾಶ ಇದೆ. ಕೊನೆ ಕ್ಷಣದಲ್ಲಿ ಮದ್ಯದ ಬೇಡಿಕೆ ಸಿದ್ಧಪಡಿಸಿಕೊಂಡು, ಅದಕ್ಕೆ ತಕ್ಕಂತೆ ಹಣ ಹೊಂದಿಸಿಕೊಂಡು ಮದ್ಯ ಖರೀದಿ ಮಾಡಿಕೊಂಡು ಬರಲು ಈ ಹೊಸ ವ್ಯವಸ್ಥೆಯಲ್ಲಿ ಅವಕಾಶ ಇಲ್ಲ.

'ಏ.1ರಿಂದ ಹೊಸ ವ್ಯವಸ್ಥೆ ಜಾರಿಗೆ ಬಂದಿದ್ದು, ಸರ್ವರ್ ಸಮಸ್ಯೆ ಮತ್ತು ವೆಬ್ ಇಂಡೆಂಟ್ ಸಲ್ಲಿಸುವ ವಿಧಾನ ತಿಳಿಯದೆ ಹಲವು ಅಂಗಡಿಗಳಲ್ಲಿ ದಾಸ್ತಾನು ಖಾಲಿಯಾಗಿದೆ' ಎಂದು ಬೆಂಗಳೂರು ನಗರ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಲೋಕೇಶ್ ಹೇಳುತ್ತಾರೆ.

'ಈ ಹಿಂದೆ ಕ್ಯಾಷಿಯರ್‌ಗಳೇ ಬೇಡಿಕೆ ಪಟ್ಟಿ ಸಿದ್ಧಪಡಿಸಿಕೊಂಡು ಮದ್ಯ ಖರೀದಿ ಮಾಡಿಕೊಂಡು ಬರುತ್ತಿದ್ದರು. ಈಗ ವೆಬ್ ಇಂಡೆಂಟ್ ಮೂಲಕ ಮಾತ್ರ ಖರೀದಿಸಬೇಕೆಂದರೆ ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿ ನೇಮಿಸಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಭಾಗದ ಸಣ್ಣ ವ್ಯಾಪಾರಿಗಳಿಗೆ ಸಮಸ್ಯೆಯಾಗಲಿದೆ' ಎಂದರು.

'ದಿನದ ವ್ಯಾಪಾರದಿಂದ ಬಂದ ಹಣದಲ್ಲೇ ಹೊಸದಾಗಿ ಮದ್ಯ ಖರೀದಿ ಮಾಡಲಾಗುತ್ತಿದೆ. ಮೊದಲೇ ಹಣ ಪಾವತಿ ಮಾಡಿಟ್ಟುಕೊಂಡು ಖರೀದಿಸಬೇಕು ಎಂಬ ನಿಯಮ ಸನ್ನದುದಾರರಿಗೆ ಕಷ್ಟವಾಗಲಿದೆ. ಮೂರ್ನಾಲ್ಕು ದಿನ ಒಟ್ಟಿಗೇ ಬ್ಯಾಂಕ್ ರಜೆ ಬಂದರೆ ಖರೀದಿ ಕಷ್ಟವಾಗಲಿದೆ. ಆಗ ಮದ್ಯದ ಅಂಗಡಿಗಳಲ್ಲಿ ದಾಸ್ತಾನು ಖಾಲಿಯಾಗಿ ಬಾಗಿಲು ಮುಚ್ಚಬೇಕಾಗುತ್ತದೆ' ಎಂದು ಅವರು ವಿವರಿಸಿದರು.

ಅಂಕಿ-ಅಂಶಗಳು

- **1.80** ಲಕ್ಷ ಬಾಕ್ಸ್ — ಪ್ರತಿದಿನ ಮಾರಾಟವಾಗುವ ಮದ್ಯ
- **80** ಸಾವಿರ ಬಾಕ್ಸ್ — ಪ್ರತಿದಿನ ಮಾರಾಟವಾಗುವ ಬಿಯರ್
- **₹100** ಕೋಟಿ — ದಿನದ ಸರಾಸರಿ ವಹಿವಾಟು
- **₹79** ಕೋಟಿ — ಸರ್ಕಾರಕ್ಕೆ ಬರುವ ದಿನದ ಸರಾಸರಿ ವರಮಾನ

ಮೇಘಾಲಯದಲ್ಲಿ ಭೂಕುಸಿತ ಇಬ್ಬರ ಸಾವು

ಶಿಲ್ಲಾಂಗ್ (ಪಿಟಿಐ): ಮೇಘಾಲಯದಲ್ಲಿ ಸುರಿದ ಭಾರಿ ಮಳೆಯಿಂದ ಹಲವೆಡೆ ಭೂಕುಸಿತ ಉಂಟಾಗಿ ಮನೆಗಳು, ವಾಹನಗಳು ಕೊಚ್ಚಿ ಹೋಗಿವೆ. ದುರಂತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ ಸುರಿದ ಧಾರಾಕಾರ ಮಳೆಯಿಂದ ಏಳು ಕಡೆ ಭೂಕುಸಿತ ಉಂಟಾಗಿದೆ. ಪೂರ್ವ ಖಾಸಿ ಹಿಲ್ಸ್ ಜಿಲ್ಲೆಯ ಮೌಲಾತ್ ಗ್ರಾಮದಲ್ಲಿ ಉಂಟಾದ ಭೂಕುಸಿತದಲ್ಲಿ ಇಬ್ಬರು ಮೃತಪಟ್ಟರು ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಯೊಬ್ಬರು ಹೇಳಿದರು. ಉಂಬಳಾಯಿ ಗ್ರಾಮದಲ್ಲಿ ಸಂಭವಿಸಿದ ಮತ್ತೊಂದು ಭೂಕುಸಿತದಲ್ಲಿ 2 ಮನೆ, 2 ಅಂಗಡಿ ಕೊಚ್ಚಿ ಹೋಗಿವೆ.





ಉಕ್ರೇನ್ ಸೇನಾ ನೆಲೆಗಳ ಮೇಲೆ ಜಲಾಂತರ್ಗಾಮಿ, ಸುಖೊಯ್ ಯುದ್ಧ ವಿಮಾನಗಳಿಂದ ಕ್ಷಿಪಣಿ ದಾಳಿ

ಹಾರ್ಕಿವ್ ನಗರ ವಶ: ರಷ್ಯಾ ಗುರಿ

ಬುಕಾ, ಕೀವ್(ಎಪಿ): ಕೀವ್, ಚೆರ್ನಿವ್ ಮತ್ತು ಸುಮಿ ಪ್ರದೇಶಗಳಿಂದ ಹಿಂದೆ ಸರಿದಿರುವ ರಷ್ಯಾ ಪಡೆಗಳು, ಉಕ್ರೇನಿನ ಎರಡನೇ ಅತಿ ದೊಡ್ಡ ನಗರ ಹಾರ್ಕಿವ್ ವಶಕ್ಕೆ ಪಡೆಯುವ ಗುರಿ ಇಟ್ಟುಕೊಂಡು ದಾಳಿ ಆರಂಭಿಸಿವೆ. ಉಕ್ರೇನಿನ ಪೂರ್ವ ಮತ್ತು ಆಗ್ನೇಯದಲ್ಲಿ ಹೊಸದಾಗಿ ಆಕ್ರಮಣಕ್ಕೆ ರಷ್ಯಾ ತಯಾರಾಗುತ್ತಿದೆ ಎಂದು ಉಕ್ರೇನ್ ಸೇನೆ ಮಂಗಳವಾರ ಹೇಳಿದೆ.

ಹಾರ್ಕಿವ್ ನಗರವನ್ನು ತೆಕ್ಕೆಗೆ ತೆಗೆದುಕೊಳ್ಳಲು, ಪ್ರಮುಖ ಕೈಗಾರಿಕಾ ಪ್ರದೇಶವಾದ ಡಾನ್‌ಬಾಸ್ ಮತ್ತು ಲುಹಾನ್‌ಸ್ಕ್‌ನಲ್ಲಿ ಹಿಡಿತ ಸಾಧಿಸಲು ಉಕ್ರೇನ್ ಪಡೆಗಳ ಮೇಲೆ ರಷ್ಯಾ ಪಡೆಗಳು ದಾಳಿ ನಡೆಸುತ್ತಿವೆ. ಈ ಪ್ರಾಂತ್ಯಗಳ ಪೊಪಾಸ್ನ ಮತ್ತು ರುಬ್ಜೆನೆ ನಗರಗಳು ಹಾಗೂ ಕಪ್ಪು ಸಮುದ್ರ ಬಂದರು ನಗರ ಮರಿಯುಪೊಲ್ ವಶಕ್ಕೆ ಪಡೆಯಲು ಯತ್ನಿಸುತ್ತಿವೆ ಎಂದು ಸಚಿವಾಲಯದ ವಕ್ತಾರ ಒಲೆಕ್ಸಾಂಡರ್ ಮೊತುಜಿಯಾನಿಕ್ ಹೇಳಿದ್ದಾರೆ.

‘ನಮ್ಮ ದೇಶದ ನಾಗರಿಕರನ್ನು ಗುರಿಯಾಗಿಸಿ ರಷ್ಯಾ ಪ್ರಯೋಗಿಸುತ್ತಿರುವ ಪ್ರತಿ ಕ್ಷಿಪಣಿ ಮತ್ತು ಬಾಂಬ್‌ಗಳು ಎಲ್ಲವನ್ನೂ ಸುಟ್ಟು ಕರಕಲಾಗಿಸುತ್ತಿದೆ. ಉಕ್ರೇನ್ ರಕ್ಷಣೆಗಾಗಿ ಶಕ್ತಿಶಾಲಿ ರಾಷ್ಟ್ರಗಳು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಪೂರೈಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಕೀವ್, ಮೈಕೊಲೈವ್, ಒಡೆಸಾ, ಸುಮಿ, ಹಾರ್ಕಿವ್, ಝಪ್ರೊರಿಝಿಯಾ, ಜೈಟೊಮಿರ್, ಲುವಿವ್, ಡೊನೆಟ್‌ಸ್ಕ್, ಇವಾನೊ ಫ್ರಾಂಕ್‌ವಿಸ್ಕ್, ಟರ್ನೊಪಿಲ್, ನಿಪ್ರೊಪೆಟ್ರೊವ್‌ಸ್ಕ್ ಸೇರಿ ಪ್ರಮುಖ ನಗರಗಳಲ್ಲಿ ಇಡೀ ದಿನ ವಾಯು ದಾಳಿಯ ಸೈರನ್ ಮೊಳಗಿತು.

85 ಸೇನಾ ನೆಲೆಗಳು ಧ್ವಂಸ: ಉಕ್ರೇನಿನ ಸೇನಾ ನೆಲೆಗಳನ್ನೇ ಪ್ರಮುಖ ಗುರಿಯಾಗಿಸಿ ದಾಳಿ ಮುಂದುವರಿಸಿರುವ ರಷ್ಯಾ ವಾಯುಪಡೆ ಮತ್ತು ನೌಕಾಪಡೆಗಳು ಸೋಮವಾರ ತಡರಾತ್ರಿ ನಡೆಸಿದ ಕ್ಷಿಪಣಿ ದಾಳಿಗೆ ಉಕ್ರೇನ್‌ನ ಕೇಂದ್ರ ಭಾಗದಲ್ಲಿನ 85 ಆಯಕಟ್ಟಿನ ಸೇನಾ ನೆಲೆಗಳು ಧ್ವಂಸಗೊಂಡಿವೆ. 8 ಮಿಲಿಟರಿ ಸಂವಹನ ಕೇಂದ್ರಗಳು, ಉಕ್ರೇನ್ ಸೇನೆಯ ಎರಡು ಇಂಧನ ಸಂಗ್ರಹಾಗಾರ ಮತ್ತು ಮದ್ದುಗುಂಡು, ಯುದ್ಧೋಪಕರಣಗಳ ಆರು ಸಂಗ್ರಹಾಗಾರಗಳು, ಒಂದು ಎಸ್‌–300 ಕ್ಷಿಪಣಿ ವ್ಯವಸ್ಥೆ ಹಾಗೂ ತೋಚ್ಕ ಕ್ಷಿಪಣಿ ಲಾಂಚರ್‌ಗಳನ್ನು ನಾಶಪಡಿಸಿಕೊಳ್ಳಲಾಗಿದೆ. ಉಕ್ರೇನಿನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ಮುಂದುವರಿದಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಬೆಲರೂಸ್ ವಾಯು ಪ್ರದೇಶದಿಂದ ಸುಖೊಯ್‌– 35 ಯುದ್ಧ ವಿಮಾನಗಳಿಂದ ರಷ್ಯಾ ಹಾರಿಸಿದ ಕಲಿಬ್ ಕ್ಷಿಪಣಿಗಳನ್ನು ಹೊಡೆದುರುಳಿಸಿರುವುದಾಗಿ ಉಕ್ರೇನ್ ವಾಯುಪಡೆ ಹೇಳಿದೆ.

ಉಕ್ರೇನಿನ ಪಶ್ಚಿಮದಲ್ಲಿ ರಷ್ಯಾದ ಮೂರು ಕ್ಷಿಪಣಿಗಳನ್ನು ಹೊಡೆದುರುಳಿಸಲಾಯಿತು. ನಾಲ್ಕನೇ ಕ್ಷಿಪಣಿಯನ್ನೂ ಹಾನಿಗೊಳಿಸಿ, ಅದರ ಗುರಿ ತಪ್ಪಿಸಲಾಯಿತು ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಹೇಳಿದೆ.

ನೈಟ್ರಿಕ್ ಆಸಿಡ್ ಟ್ಯಾಂಕ್ ಸ್ಫೋಟ: ಲುಹಾನ್‌ಸ್ಕ್ ಪ್ರಾಂತ್ಯದ ರುಬ್ಜೆನೆ ನಗರದಲ್ಲಿನ ನೈಟ್ರಿಕ್ ಆಸಿಡ್ ಟ್ಯಾಂಕ್ ಮೇಲೆ ರಷ್ಯಾದ ವಾಯುಪಡೆ ಮಂಗಳವಾರ ನಸುಕಿನಲ್ಲಿ ಬಾಂಬ್ ದಾಳಿ ಮಾಡಿದೆ ಎಂದು ಗವರ್ನರ್ ಸೆರ್ಹಿ ಹೈದ್ಯೆ ತಿಳಿಸಿದ್ದಾರೆ.

ನೈಟ್ರಿಕ್ ಆಮ್ಲವು ಗಾಳಿಯಲ್ಲಿ ಬೆರೆತರೆ ಅದು ಉಸಿರಾಡಲು ಅಪಾಯ ತಂದೊಡ್ಡಲಿದೆ. ಅಲ್ಲದೇ ಚರ್ಮಕ್ಕೂ ಹಾನಿ ಮಾಡುತ್ತದೆ. ಬಾಂಬ್ ವಿರುದ್ಧ ರಕ್ಷಣೆ ಕೊಡುವ ಬಂಕರ್‌ಗಳಿಂದ ಹೊರಬರದಂತೆ, ಮನೆಯ ಕಿಟಕಿಗಳು ಮತ್ತು ಬಾಗಿಲುಗಳನ್ನು ಮುಚ್ಚಲು ನಾಗರಿಕರಿಗೆ ಗವರ್ನರ್ ಸೂಚಿಸಿದ್ದಾರೆ ಎಂದು ಉಕ್ರೇನಿನ ಸರ್ಕಾರಿ ಸುದ್ದಿಸಂಸ್ಥೆ ‘ದಿ ಕೀವ್ ಇಂಡಿಪೆಂಡೆಂಟ್’ ವರದಿ ಮಾಡಿದೆ.



ಯುದ್ಧಪೀಡಿತ ಕೀವ್‌ನ ಉಪನಗರ ಬುಕಾದ ರಸ್ತೆಯಲ್ಲಿ ಮಂಗಳವಾರ ಕುಟುಂಬವೊಂದು ಸುರಕ್ಷಿತ ಸ್ಥಳಕ್ಕೆ ತೆರಳಿತು —ಎಪಿ/ಪಿಟಿಐ ಚಿತ್ರ

ಬುಕಾ ನರಮೇಧ ನಕಲಿ ಕಥೆ: ರಷ್ಯಾ ಕಿಡಿ

ಇದು ರಷ್ಯಾ ವಿರುದ್ಧ ಅಪಪ್ರಚಾರಕ್ಕೆ ಉಕ್ರೇನ್ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳು ಹೆಣೆದಿರುವ ಷಡ್ಯಂತ್ರ. ರಷ್ಯಾವನ್ನು ನಿರ್ದಯಿ ಎಂದು ಬಿಂಬಿಸಲು ಮತ್ತು ರಷ್ಯಾದ ಪ್ರತಿಷ್ಠೆ ಹಾಳುಗೆಡವಲು ಉಕ್ರೇನ್ ತನ್ನದೇ ನಾಗರಿಕರನ್ನು ಕೊಲ್ಲುತ್ತಿದೆ ಎಂದು ರಷ್ಯಾದ ಭದ್ರತಾ ಮಂಡಳಿಯ ಉಪಾಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ತಿಳಿಸಿರುವುದಾಗಿ ‘ಟಾಸ್’ ಸುದ್ದಿ ಸಂಸ್ಥೆ ಮಂಗಳವಾರ ವರದಿ ಮಾಡಿದೆ.

ಪುಟಿನ್ ಯುದ್ಧಾಪರಾಧಿ: ‘ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಯುದ್ಧಾಪರಾಧಿ. ಅಂತರರಾಷ್ಟ್ರೀಯ ನ್ಯಾಯಾಲಯವು ಪುಟಿನ್ ಅವರನ್ನು ಶಿಕ್ಷಿಸಬೇಕು’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪುನರುಚ್ಚರಿಸಿದ್ದಾರೆ.

ಕೈಗಳನ್ನು ಬೆನ್ನಿನ ಹಿಂದಕ್ಕೆ ಕಟ್ಟಿ, ತಲೆ ಹಿಂಬದಿಗೆ ಗುಂಡು ಹಾರಿಸಿ ಹತ್ಯೆಗೈದಿರುವ ಸ್ಥಿತಿಯಲ್ಲಿ ನಾಗರಿಕರ ಶವಗಳು ಬಿದ್ದಿರುವ ಚಿತ್ರಗಳು ಮರುಗುವಂತೆ ಮಾಡಿವೆ.

‘ಭಯೋತ್ಪಾದಕರಿಗಿಂತ ರಷ್ಯಾ ಭಿನ್ನವಲ್ಲ’

ಕೀವ್ (ಎಎಫ್‌ಪಿ): ‘ರಷ್ಯಾ ಐಎಸ್‌ಐಎಸ್ ಭಯೋತ್ಪಾದಕರಿಗಿಂತ ಭಿನ್ನವಲ್ಲ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಕಿಡಿಕಾರಿದರು. ರಷ್ಯಾ ಆಕ್ರಮಣದ ನಂತರ ಇದೇ ಮೊದಲ ಬಾರಿಗೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಸಭೆ ಉದ್ದೇಶಿಸಿ ಮಂಗಳವಾರ ವರ್ಚುವಲ್ ಮೂಲಕ ಮಾತನಾಡಿದರು.

‘ರಷ್ಯಾ ಸೈನಿಕರು ಉದ್ದೇಶಪೂರ್ವಕವಾಗಿ ನಾಗರಿಕರ ಹತ್ಯೆಗೈಯುತ್ತಿದ್ದಾರೆ. ರಷ್ಯಾದ ಸಂಭವನೀಯ ಯುದ್ಧಾಪರಾಧಗಳ ತನಿಖೆ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನಡೆಯಬೇಕು. ರಷ್ಯಾದ ಮೇಲೆ ವಿಶ್ವ ಸಮುದಾಯ ಇನ್ನಷ್ಟು ಕಠಿಣ ನಿರ್ಬಂಧ ಹೇರಬೇಕು. ರಷ್ಯಾ ವಿರುದ್ಧ ಹೋರಾಡಲು ಶಕ್ತಿಶಾಲಿ ದೇಶಗಳು ನಮಗೆ ಅಗತ್ಯ ನೆರವು ನೀಡಬೇಕು’ ಎಂದು ಝೆಲೆನ್‌ಸ್ಕಿ ಮನವಿ ಮಾಡಿದರು.

ರಷ್ಯಾ ಪಡೆಗಳು ಆಕ್ರಮಿಸಿದ ಪ್ರದೇಶಗಳನ್ನು ಮರು ವಶಕ್ಕೆ ಪಡೆಯುವಾಗ ನಾಗರಿಕರ ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ರಷ್ಯಾ ಪಡೆಗಳು ನಡೆಸಿರುವ ವಿನಾಶ ಈಗ ಬಯಲಾಗುತ್ತಿದೆ ಎಂದು ಝೆಲೆನ್‌ಸ್ಕಿ, ಮಂಗಳವಾರ ನಸುಕಿನಲ್ಲಿ ಬಿಡುಗಡೆ ಮಾಡಿರುವ ವಿಡಿಯೊ ಭಾಷಣದಲ್ಲಿ ತಿಳಿಸಿದ್ದಾರೆ.

ಯುದ್ಧ ಮುಂದುವರಿದಂತೆ ರಷ್ಯಾ ‘ಸಾಮೂಹಿಕ ಹತ್ಯೆ’ಯ ಯುದ್ಧಾಪರಾಧ ಮರೆಮಾಚಲು ಯತ್ನಿಸುತ್ತಿದೆ ಎಂದು ಆರೋಪಿಸಿದರು.

ತನಿಖೆಗೆ ಭಾರತ ಆಗ್ರಹ: ಬುಕಾದಲ್ಲಿ ನಡೆದಿರುವ ನರಮೇಧ ಖಂಡನೀಯ. ಈ ಬಗ್ಗೆ ಸ್ವತಂತ್ರ ತನಿಖೆಯಾಗಬೇಕು ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್.ತಿರುಮೂರ್ತಿ ಭದ್ರತಾ ಮಂಡಳಿ ಸಭೆಯಲ್ಲಿ ಒತ್ತಾಯಿಸಿದರು.

‘ಇಂಧನ ಆಮದು ಭಾರತದ ಹಿತಾಸಕ್ತಿಗಲ್ಲ’

ವಾಷಿಂಗ್ಟನ್ (ಪಿಟಿಐ): ‘ರಷ್ಯಾದಿಂದ ಇಂಧನ ಮತ್ತು ಇತರ ಸರಕುಗಳ ಆಮದು ಪ್ರಮಾಣವನ್ನು ಹೆಚ್ಚಿಸುವುದು ಭಾರತದ ಹಿತಾಸಕ್ತಿಗಲ್ಲ’ ಎಂದು ಅಮೆರಿಕ ಪುನರುಚ್ಚರಿಸಿದೆ. ಶ್ವೇತ ಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ, ರಷ್ಯಾದ ಆಮದುಗಳ ಮೇಲಿನ ಅವಲಂಬನೆ ಕಡಿತಗೊಳಿಸಲು ಭಾರತಕ್ಕೆ ಎಲ್ಲ ನೆರವನ್ನು ಅಮೆರಿಕ ನೀಡಲಿದೆ ಎಂದು ಹೇಳಿದರು. ರಷ್ಯಾದ ಮೇಲೆ ಹೇರಿರುವ ನಿರ್ಬಂಧಗಳನ್ನು ಮೀರುವ ದೇಶಗಳು ಪರಿಣಾಮವನ್ನೂ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಎಚ್ಚರಿಸಿತ್ತು.

41ನೇ ದಿನದ ಬೆಳವಣಿಗೆಗಳು

- ಉಕ್ರೇನ್‌ನಲ್ಲಿ ಭಾರತದ ನೂತನ ರಾಯಭಾರಿಯಾಗಿ ಹರ್ಷಕುಮಾರ್ ಜೈನ್ ಅವರು ಮಂಗಳವಾರ ಅಧಿಕಾರ ಸ್ವೀಕರಿಸಿದರು
- ಯುದ್ಧಾಪರಾಧಗಳ ಕಾರಣಕ್ಕಾಗಿ ರಷ್ಯಾ ಮೇಲೆ ಮತ್ತಷ್ಟು ನಿರ್ಬಂಧಗಳನ್ನು ಹೇರಲಾಗುವುದು ಎಂದು ಹೇಳಿರುವ ಅಮೆರಿಕ ಹಾಗೂ ಮಿತ್ರ ರಾಷ್ಟ್ರಗಳು, ರಷ್ಯಾದಲ್ಲಿ ಹೊಸದಾಗಿ ಬಂಡವಾಳ ಹೂಡಿಕೆಯನ್ನು ನಿಷೇಧಿಸುವುದಾಗಿ ತಿಳಿಸಿವೆ
- ರಷ್ಯಾ ಉಕ್ರೇನಿನಲ್ಲಿ ಫೆಬ್ರುವರಿ 24ರಿಂದ ಆರಂಭಿಸಿರುವ ಆಕ್ರಮಣದಲ್ಲಿ ಈವರೆಗೆ 11 ದೇಶಗಳ ಒಟ್ಟು 18 ಪತ್ರಕರ್ತರ ಹತ್ಯೆಯಾಗಿದೆ– ಉಕ್ರೇನ್ ಸಂಸ್ಕೃತಿ ಮತ್ತು ಮಾಹಿತಿ ಸಚಿವಾಲಯ
- ರಷ್ಯಾ ಪಡೆಗಳು ಸುತ್ತುವರಿದಿರುವ ಮರಿಯುಪೊಲ್ ಬಂದರು ನಗರ ಮತ್ತು ರಷ್ಯಾ ನಿಯಂತ್ರಿತ ಬೆರಿಡಿಯಾನ್‌ಸ್ಕ್‌ನಲ್ಲಿ ಮಂಗಳವಾರದಿಂದ ನಾಗರಿಕರ ಸ್ಥಳಾಂತರಕ್ಕೆ ಏಳು ಮಾನವೀಯ ಕಾರಿಡಾರ್‌ಗಳನ್ನು ತೆರೆಯಲಾಗಿದೆ. ಖಾಸಗಿ ವಾಹನಗಳಲ್ಲಿ ಝಪ್ರೊರಿಝಿಯಾ ತಲುಪಲು ನಾಗರಿಕರಿಗೆ ಅವಕಾಶ ಕಲ್ಪಿಸಿದೆ– ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್
- ಉಕ್ರೇನಿನಲ್ಲಿ ರಷ್ಯಾದ ಆಕ್ರಮಣ ಶೀಘ್ರ ಮುಗಿಯದು, ಯುದ್ಧ ಸುದೀರ್ಘವಾಗಲಿದೆ– ಅಮೆರಿಕ ಎಚ್ಚರಿಸಿದೆ
- ರಷ್ಯಾ ಆಕ್ರಮಣದ ಶುರುವಿನಿಂದ ಈವರೆಗೆ ಅಂದಾಜು 1.10 ಕೋಟಿಗೂ ಹೆಚ್ಚು ಉಕ್ರೇನಿಯರು ನಿರಾಶ್ರಿತರಾಗಿ ದೇಶ ತೊರೆದಿದ್ದಾರೆ– ವಿಶ್ವಸಂಸ್ಥೆ ವಲಸಿಗರ ಏಜೆನ್ಸಿ
- ಪುಟಿನ್ ಮತ್ತು ಝೆಲೆನ್‌ಸ್ಕಿ ಭೇಟಿ ಸಾಧ್ಯತೆಯನ್ನು ರಷ್ಯಾ ತಳ್ಳಿಹಾಕುವುದಿಲ್ಲ. ಆದರೆ, ಒಪ್ಪಂದ ಏರ್ಪಟ್ಟರೇ ಮಾತ್ರ ಅದು ಸಾಧ್ಯವಿದೆ. ಬುಕಾದಲ್ಲಿನ ಪರಿಸ್ಥಿತಿಯ ಬಗ್ಗೆ ರಷ್ಯಾ ವಸ್ತುನಿಷ್ಠ ವಿವರಣೆ ನೀಡಲಿದೆ. ಆದರೆ, ಪಶ್ಚಿಮದ ರಾಷ್ಟ್ರಗಳಿಗೆ ಸಾಮೂಹಿಕ ಕುರುಡು ಮತ್ತು ಕಿವುಡು ಆವರಿಸಿರುವುದರಿಂದ, ಅವರು ನಮ್ಮ ವಿವರಣೆ ಕೇಳಲು ಸಿದ್ಧರಿಲ್ಲ– ಪುಟಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್
- ರಷ್ಯಾ ಮತ್ತು ಉಕ್ರೇನ್ ನಡುವೆ ವರ್ಚುವಲ್ ಮೂಲಕ ತ್ವರಿತ ಶಾಂತಿ ಮಾತುಕತೆಗಳು ಮುಂದುವರಿದಿವೆ ಎಂದು ರಷ್ಯಾದ ವಿದೇಶಾಂಗ ಉಪಸಚಿವರ ಹೇಳಿಕೆ ಉಲ್ಲೇಖಿಸಿ ‘ಇಂಟರ್‌ಫ್ಯಾಕ್ಸ್’ ಸುದ್ದಿ ಸಂಸ್ಥೆ ವರದಿ
- ರಷ್ಯಾದ ಆಕ್ರಮಣ ವಿರೋಧಿಸಿ ಐರೋಪ್ಯ ಒಕ್ಕೂಟದ ಮಿತ್ರರಾಷ್ಟ್ರಗಳೊಂದಿಗೆ ಇಟಲಿ, ಡೆನ್ಮಾರ್ಕ್ ಮತ್ತು ಸ್ವೀಡನ್ ಕಳೆದ 48 ಗಂಟೆಗಳಲ್ಲಿ 120ಕ್ಕೂ ಹೆಚ್ಚು ಮಂದಿ ರಷ್ಯಾ ರಾಜತಾಂತ್ರಿಕ ಅಧಿಕಾರಿಗಳನ್ನು ಉಚ್ಚಾಟಿಸಿದ್ದು, ತಕ್ಷಣ ದೇಶ ತೊರೆಯಲು ಗಡುವು ನೀಡಿವೆ
- ರಷ್ಯಾ ನೌಕಾ ಪಡೆಯ ಶೆಲ್ ದಾಳಿಯಿಂದ ಹಾನಿಗೀಡಾದ ಪ್ರಯಾಣಿಕರ ಹಡಗು ಮರಿಯುಪೊಲ್ ಬಂದರಿನಲ್ಲಿ ಮುಳುಗುತ್ತಿದೆ. ಈ ಹಡಗಿನಲ್ಲಿ ಡೊಮಿನಿಕನ್ ರಿಪಬ್ಲಿಕ್‌ನ ಧ್ವಜವಿದೆ– ಉಕ್ರೇನ್ ಗೃಹ ಸಚಿವಾಲಯ
- ರಷ್ಯಾದಿಂದ ಕಲ್ಲಿದ್ದಲು ಆಮದು ನಿಷೇಧಿಸಲು ಐರೋಪ್ಯ ಒಕ್ಕೂಟದ (ಇಯು) ರಾಷ್ಟ್ರಗಳು ನಿರ್ಧಾರ ಕೈಗೊಳ್ಳಲಿವೆ– ಇಯು ಕಾರ್ಯಕಾರಿ ಶಾಖೆ ಪ್ರಸ್ತಾವ
- ನಿರಾಯುಧ ನಾಗರಿಕರನ್ನು ರಷ್ಯಾದ ಸಶಸ್ತ್ರ ಪಡೆಗಳು ಹತ್ಯೆ ಮಾಡಿವೆ ಎಂದು ಬಿಂಬಿಸಲು ಉಕ್ರೇನ್ ಸೇನೆಯು ನಕಲಿ ವಿಡಿಯೊ ತಯಾರಿಸಿದೆ– ರಷ್ಯಾದ ರಕ್ಷಣಾ ಸಚಿವಾಲಯ ಆರೋಪ
- ಅಂತರರಾಷ್ಟ್ರೀಯ ಮಾರುಕಟ್ಟೆಯ ದರಕ್ಕಿಂತಲೂ ಕಡಿಮೆ ದರದಲ್ಲಿ ಮನೆಗಳಿಗೆ ಆಹಾರ ಧಾನ್ಯಗಳನ್ನು ರಷ್ಯಾಕ್ಕೆ ಪೂರೈಸಲು ಸಾಧ್ಯ– ಅಧ್ಯಕ್ಷ ವ್ಲಾಡಿಮಿರ್ ಪುಟಿನ್



ಸಂಸತ್ ಭವನದಲ್ಲಿ ರಾಹುಲ್ ಮತ್ತು ಸೋನಿಯಾ ಗಾಂಧಿ ಜತೆಗೆ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಿದರು —ಪಿಟಿಐ ಚಿತ್ರ

‘ಪ್ರಜಾಪ್ರಭುತ್ವದ ಉಳಿವಿಗೆ ಕಾಂಗ್ರೆಸ್ ಪುನಶ್ಚೇತನ ಅಗತ್ಯ’

ನವದೆಹಲಿ (ಪಿಟಿಐ): ‘ಕಾಂಗ್ರೆಸ್ ಪಕ್ಷದ ಮುಂದೆ, ಎಂದೂ ಇರದಂತಹ ದೊಡ್ಡ ಸವಾಲುಗಳಿವೆ. ಪಕ್ಷಕ್ಕಾಗಿ ಮಾತ್ರವಲ್ಲ, ದೇಶದ ಪ್ರಜಾಪ್ರಭುತ್ವದ ಉಳಿವಿಗಾಗಿ ಕಾಂಗ್ರೆಸ್‌ನ ಪುನಶ್ಚೇತನ ಅನಿವಾರ್ಯ’ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಹೇಳಿದ್ದಾರೆ.

ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಇತ್ತೀಚೆಗೆ ನಡೆದ ಐದು ರಾಜ್ಯಗಳ ಚುನಾವಣೆಯಲ್ಲಿ ಪಕ್ಷವು ಕಳಪೆ ಸಾಧನೆ ಮಾಡಿದೆ. ಆ ಫಲಿತಾಂಶಗಳು ಆಘಾತಕಾರಿಯಾಗಿದ್ದವು ಮತ್ತು ತೀವ್ರ ನೋವನ್ನುಂಟು ಮಾಡಿದವು. ಇದರಿಂದ ನೀವು ತೀವ್ರ ಅಸಮಾಧಾನಕ್ಕೆ ಒಳಗಾಗಿದ್ದೀರಿ ಎಂಬ ಅರಿವು ನನಗೆ ಇದೆ. ಈಗ ಈ ರೀತಿಯ ಸಭೆಗಳ ಅನಿವಾರ್ಯತೆ ಇದೆ. ನಮ್ಮ ಮುಂದಿನ ಸವಾಲುಗಳನ್ನು ಎದುರಿಸುವಲ್ಲಿ ಪಕ್ಷದ ಎಲ್ಲಾ ಮಟ್ಟದ ಕಾರ್ಯಕರ್ತರು ಏನು ಹೇಳುತ್ತಾರೆ ಎಂಬುದನ್ನು ಕೇಳಲು ಇಲ್ಲಿ ಅವಕಾಶ ಸಿಗುತ್ತದೆ’ ಎಂದು ಹೇಳಿದ್ದಾರೆ.

ಐದು ರಾಜ್ಯಗಳ ಚುನಾವಣೆಯ ನಂತರ ನಡೆದ ಕಾಂಗ್ರೆಸ್ ಸಂಸದೀಯ ಪಕ್ಷದ ಮೊದಲ ಸಭೆ ಇದಾಗಿದೆ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ರಾಹುಲ್ ಗಾಂಧಿ ಮತ್ತು ಸಂಸತ್ತಿನ ಉಭಯ ಸದನಗಳಲ್ಲಿನ ಪಕ್ಷದ ಸಂಸದರು ಸಭೆಯಲ್ಲಿ ಭಾಗಿಯಾಗಿದ್ದರು.

‘ಎಲ್ಲಾ ರಾಜ್ಯಗಳಲ್ಲೂ ಬಿಜೆಪಿ ಒಡೆದಾಳುವ ನೀತಿಯನ್ನು ಅನುಸರಿಸುತ್ತಿದೆ. ಆಡಳಿತ ಪಕ್ಷ ಮತ್ತು ಅದರ ನಾಯಕರ ಈ ನೀತಿಯನ್ನು ಸಾಮಾನ್ಯ ಎಂಬಂತೆ ಬಳಸುತ್ತಿದ್ದಾರೆ. ಜನರನ್ನು ವಿಭಜಿಸಲು ಬಿಜೆಪಿ ಇತಿಹಾಸವನ್ನು ತಿರುಚುತ್ತಿದೆ’ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಇದರ ವಿರುದ್ಧ ನಾವು ಎದ್ದು ನಿಲ್ಲಬೇಕಿದೆ. ದೇಶದ ಜನರ ನಡುವಣ ಬಾಂಧವ್ಯ ಮತ್ತು ಸಾಮರಸ್ಯವನ್ನು ಈ ಜನರು ಹಾಳು ಮಾಡಲು ನಾವು ಅವಕಾಶ ಮಾಡಿಕೊಡಬಾರದು’ ಎಂದು ಅವರು ಕರೆ ನೀಡಿದ್ದಾರೆ.

‘ನಮ್ಮ ನೇತೃತ್ವದ ಯುಪಿಎ ಸರ್ಕಾರದ ಎಲ್ಲಾ ಯೋಜನೆಗಳನ್ನು ಮೋದಿ ಟೀಕಿಸುತ್ತಿದ್ದರು. ಆದರೆ, ನಾವು ಜಾರಿಗೆ ತಂದಿದ್ದ ಆಹಾರ ಭದ್ರತಾ ಕಾಯ್ದೆ ಮತ್ತು ನರೇಗಾ ಯೋಜನೆಗಳೇ ಕೋವಿಡ್ ಕಾಲದಲ್ಲಿ ಜನರನ್ನು ಕಾಪಾಡಿದವು’ ಎಂದು ಹೇಳಿದ್ದಾರೆ. ‘ದೇಶದಲ್ಲಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರ ವಿರುದ್ಧ ಕಾಂಗ್ರೆಸ್ ಆರಂಭಿಸಿರುವ ಹೋರಾಟವು ಮುಂದುವರಿಯಬೇಕು’ ಎಂದು ಕರೆ ನೀಡಿದ್ದಾರೆ.

> ಪಕ್ಷದ ಪುನರುತ್ಥಾನ ಹೇಗಾಗಬೇಕೆಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿತ್ತು. ಅವುಗಳನ್ನು ಅನುಷ್ಠಾನಕ್ಕೆ ತರಲು ಸಿದ್ಧತೆ ನಡೆಸಲಾಗಿದೆ
> **ಸೋನಿಯಾ ಗಾಂಧಿ,** ಕಾಂಗ್ರೆಸ್ ಅಧ್ಯಕ್ಷೆ

ವರಿಷ್ಠರೊಂದಿಗೆ ಚರ್ಚಿಸಿ ಕ್ರಮ; ಬಸವರಾಜ ಬೊಮ್ಮಾಯಿ

ಸಚಿವ ಸಂಪುಟ: ಇಂದು ಚರ್ಚೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಜ್ಯ ಸಚಿವ ಸಂಪುಟದ ವಿಸ್ತರಣೆ ಅಥವಾ ಪುನರ್ ರಚನೆ ಕುರಿತು ಬುಧವಾರ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಕರ್ನಾಟಕ ಭವನದಲ್ಲಿ ಮಂಗಳವಾರ ರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟದ ಬಗ್ಗೆ ಚರ್ಚಿಸಲು ಪಕ್ಷದ ವರಿಷ್ಠರಿಂದ ಅಧಿಕೃತ ಆಹ್ವಾನ ಬಂದಿಲ್ಲ ಎಂದರು.

ಹಲವು ಶಾಸಕರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದಾರೆ. ಅವರೆಲ್ಲರ ಬೇಡಿಕೆ ಈಡೇರಿಸುವಂತೆ ವರಿಷ್ಠರಾದ ಅಮಿತ್ ಶಾ, ಜೆ.ಪಿ. ನಡ್ಡಾ, ಅರುಣ್ ಸಿಂಗ್ ಮತ್ತಿತರರೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಕೇಂದ್ರ ಸಚಿವರ ಭೇಟಿ: ರಾಜ್ಯದ ನೀರಾವರಿ ಹಾಗೂ ಕುಡಿಯುವ ನೀರು ಪೂರೈಕೆಯ ಯೋಜನೆಗಳಿಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರಿಗೆ ಈ ಕುರಿತ ಮನವಿ ಸಲ್ಲಿಸಲಾಗಿದೆ. ಮೇಕೆದಾಟು ಯೋಜನೆಯ ಪರಿಷ್ಕೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸಲಾಗಿದೆ. ಕಾವೇರಿ ಜಲವಿವಾದ ನ್ಯಾಯಮಂಡಳಿ ಹಂಚಿಕೆ ಮಾಡಿದ್ದಕ್ಕಿಂತಲೂ ಹೆಚ್ಚುವರಿ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಮೇಕೆದಾಟು ಯೋಜನೆ ಪೂರ್ಣಗೊಂಡರೆ ನೀರಿನ ಅಭಾವ ತಲೆದೋರಲಿದೆ ಎಂಬ ಅವರ ಆರೋಪದಲ್ಲಿ ಹುರುಳಿಲ್ಲ ಎಂದು ಅವರು ಹೇಳಿದರು.

ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯು ನೀರು ಹಂಚಿಕೆ ಮಾಡಿರುವ ಕುರಿತು ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸುವುದು ಬಾಕಿ ಇದೆ. ಈ ಸಂಬಂಧ ಜನವರಿಯಲ್ಲೇ ಕೇಂದ್ರದ ಜಲಶಕ್ತಿ ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಹೇಳಿಕೆ ಸಲ್ಲಿಸಿದೆ. ಪ್ರಕರಣದ ವಿಚಾರಣೆಗಾಗಿ ಮುಖ್ಯ ನ್ಯಾಯಮೂರ್ತಿಯವರು ಶೀಘ್ರವೇ ನ್ಯಾಯಮೂರ್ತಿಗಳನ್ನು ನೇಮಕ ಮಾಡಲಿದ್ದಾರೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

ರಾಜ್ಯದ ವಿದ್ಯುತ್ ಸಮಸ್ಯೆ ನೀಗಿಸುವಂತೆ ಕೋರಿ ಕೇಂದ್ರದ ಇಂಧನ ಸಚಿವ ಆರ್.ಕೆ. ಸಿಂಗ್ ಅವರಿಗೂ ಮನವಿ ಸಲ್ಲಿಸಲಾಗಿದೆ ಎಂದು ಅವರು ವಿವರಿಸಿದರು.

ಚುನಾವಣಾ ಬಾಂಡ್ ಯೋಜನೆ ಪ್ರಶ್ನಿಸಿದ ಪಿಐಎಲ್

ವಿಚಾರಣೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಲು ಅವಕಾಶ ಕಲ್ಪಿಸುವ ಕಾನೂನುಗಳನ್ನು ಪ್ರಶ್ನಿಸಿ ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗಾಗಿ ಪಟ್ಟಿಯಲ್ಲಿ ಸೇರಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿಸಿದೆ.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾ. ಕೃಷ್ಣ ಮುರಾರಿ ಹಾಗೂ ನ್ಯಾ.ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ, ಅರ್ಜಿಯನ್ನು ವಿಚಾರಣೆ ಪಟ್ಟಿಗೆ ಸೇರಿಸಲಾಗುವುದು ಎಂದು ಹೇಳಿತು.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ಎಂಬ ಎನ್‌ಜಿಒ ಪರ ವಕೀಲ ಪ್ರಶಾಂತ್ ಭೂಷಣ್ ಅವರು, ‘ಇದು ಗಂಭೀರವಾದ ವಿಷಯ. ಹೀಗಾಗಿ ತುರ್ತು ವಿಚಾರಣೆ ನಡೆಸಬೇಕು’ ಎಂದು ನ್ಯಾಯಪೀಠಕ್ಕೆ ಕೋರಿದರು.

‘ಕೋಲ್ಕತ್ತ ಮೂಲದ ಕಂಪನಿಯೊಂದು ಚುನಾವಣಾ ಬಾಂಡ್‌ಗಳ ಮೂಲಕ ₹ 40 ಕೋಟಿ ದೇಣಿಗೆ ನೀಡಿದೆ. ತನ್ನ ಮೇಲೆ ತೆರಿಗೆ ಅಧಿಕಾರಿಗಳು ದಾಳಿ ನಡೆಸಬಾರದು ಎಂಬ ಉದ್ದೇಶದಿಂದ ಕಂಪನಿ ಈ ದೇಣಿಗೆ ನೀಡಿದೆ ಎಂಬುದಾಗಿ ವರದಿಯಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಭ್ರಷ್ಟಗೊಳಿಸುತ್ತದೆ’ ಎಂದು ಪ್ರಶಾಂತಭೂಷಣ್ ಹೇಳಿದರು.

‘ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಈ ಹಿಂದೆಯೂ ಮನವಿ ಮಾಡಲಾಗಿತ್ತು’ ಎಂದೂ ಅವರು ನ್ಯಾಯಪೀಠದ ಗಮನಕ್ಕೆ ತಂದರು.

‘ಕೋವಿಡ್‌–19 ಪಿಡುಗು ಇಲ್ಲದಿದ್ದಲ್ಲಿ, ಎಲ್ಲ ಅರ್ಜಿಗಳ ವಿಚಾರಣೆ ಮಾಡಲಾಗುತ್ತಿತ್ತು’ ಎಂದು ನ್ಯಾ.ರಮಣ ತಿಳಿಸಿದರು. ಶೀಘ್ರವೇ ವಿಚಾರಣೆ ನಡೆಸುವುದಾಗಿ ಹೇಳಿದರು.

ಏಕರೂಪದ ಬ್ಯಾಂಕಿಂಗ್ ಸಂಹಿತೆ ಪರಿಶೀಲನೆಗೆ ಹೈಕೋರ್ಟ್

ನವದೆಹಲಿ (ಪಿಟಿಐ): ಕಪ್ಪು ಹಣ ಹಾಗೂ ಬೇನಾಮಿ ವ್ಯವಹಾರಗಳ ನಿಯಂತ್ರಣಕ್ಕಾಗಿ ವಿದೇಶಿ ವಿನಿಮಯದ ವಹಿವಾಟುಗಳಿಗೆ ಏಕರೂಪದ ಬ್ಯಾಂಕಿಂಗ್ ಸಂಹಿತೆ ಜಾರಿಗೊಳಿಸುವ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಸೂಚಿಸಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಾಲಯ, ಗೃಹ ಇಲಾಖೆ ವ್ಯವಹಾರಗಳು, ಕಾನೂನು ಮತ್ತು ನ್ಯಾಯ ಹಾಗೂ ಹಣಕಾಸು ಸಚಿವಾಲಯಗಳ ಮೂಲಕ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ. ಅಲ್ಲದೆ ಈ ಕುರಿತಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಉತ್ತರಿಸಬೇಕು ಎಂದು ಸೂಚಿಸಿ, ಈ ಕುರಿತಾದ ಅರ್ಜಿಯ ಮುಂದಿನ ವಿಚಾರಣೆಯನ್ನು ಮೇ 25ಕ್ಕೆ ಮುಂದೂಡಿದೆ.

ಅರ್ಜಿದಾರನು ಬಹಳ ಗಂಭೀರವಾದ ವಿಚಾರವನ್ನು ಎತ್ತಿದ್ದಾರೆ. ಈ ಬಗ್ಗೆ ಸರ್ಕಾರದ ಪರಿಶೀಲನೆ ನಡೆಸಲಿದೆ ಎಂದು ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಚೇತನ್ ಶರ್ಮಾ ಅವರು ಹೇಳಿದರು.

ಡಿಕೆಶಿ ಪತ್ನಿ ಪಾಲುದಾರರ ನಗದು

ಹೈಕೋರ್ಟ್ ಆದೇಶ ಎತ್ತಿ ಹಿಡಿದ ‘ಸುಪ್ರೀಂ’

ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಪತ್ನಿಯ ವ್ಯಾಪಾರ ಪಾಲುದಾರ ಕಂಪನಿಯೊಂದರಿಂದ ವಶಪಡಿಸಿಕೊಂಡಿದ್ದ ₹ 53 ಲಕ್ಷ ನಗದನ್ನು ಮರಳಿಸುವಂತೆ ಸೂಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತಿರಸ್ಕರಿಸಿದೆ.

‘ಎಲ್ಲ ದಾಖಲೆಗಳನ್ನು ಪರಿಶೀಲಿಸಿ, ಹಣದ ಮೂಲ ಖಚಿತವಾಗದ ಹಿನ್ನೆಲೆಯಲ್ಲಿ 2021ರ ಮಾರ್ಚ್ 4ರಂದು ಹೈಕೋರ್ಟ್ ಆದೇಶ ನೀಡಿದೆ. ಈ ಸಂಬಂಧ ಮಧ್ಯ ಪ್ರವೇಶಿಸಲು ಆಗದು’ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ತ್ರಿಸದಸ್ಯ ಪೀಠ ಹೇಳಿದೆ.

ಸಿಬಿಐ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಸಂಜಯ್ ಜೈನ್ ಅವರು ಹೈಕೋರ್ಟ್‌ನ ಆದೇಶದ ಸಿಂಧುತ್ವ ಪ್ರಶ್ನಿಸಿದರು.

ಅಕ್ರಮ ಹಣ ವರ್ಗಾವಣೆ ಆರೋಪದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿದ್ದ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ದಾಖಲಾಗಿರುವ ದೂರಿನ ತನಿಖೆ ವೇಳೆ, ವೆಲ್‌ವರ್ತ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಕಚೇರಿಯಲ್ಲಿ ಹಾಗೂ ಸಚಿನ್ ನಾರಾಯಣ್ ಎಂಬುವವರ ನಿವಾಸದಲ್ಲಿ ಶೋಧ ನಡೆಸಿದಾಗ ಕ್ರಮವಾಗಿ ₹ 47.98 ಲಕ್ಷ ಹಾಗೂ ₹ 5.48 ಲಕ್ಷ ನಗದನ್ನು ಸಿಬಿಐ ವಶಪಡಿಸಿಕೊಂಡಿತ್ತು.

ಮಲ್ಟಿ ಸಿಸ್ಟಮ್ ಆಪರೇಟಿಂಗ್ ವ್ಯವಹಾರದ ಭಾಗವಾಗಿ ಸ್ಥಳೀಯ ಕೇಬಲ್ ಆಪರೇಟರ್‌ಗಳಿಂದ ಹಣ ಸಂಗ್ರಹಿಸಲಾಗಿದೆ. ಆ ಹಣವನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸುವ ಮೊದಲು ವಶಪಡಿಸಿಕೊಳ್ಳಲಾಗಿದೆ. ಆ ಹಣಕ್ಕೂ, ತನಿಖೆಗೂ ಯಾವುದೇ ಸಂಬಂಧವಿಲ್ಲ ಎಂದು ಕಂಪನಿ ಹೇಳಿತ್ತು.

ಸಚಿನ್ ನಾರಾಯಣ್ ಅವರು ಡಿ.ಕೆ.ಶಿವಕುಮಾರ್ ಅವರ ಪತ್ನಿಯೊಂದಿಗೆ ವ್ಯಾಪಾರ ಪಾಲುದಾರರಾಗಿದ್ದಾರೆ ಎಂದು ಸಿಬಿಐ ದೂರಿತ್ತು.

‘ಮಿಜೋರಾಂನಲ್ಲಿ ಜಗತ್ತಿನ ಅತಿದೊಡ್ಡ ಚರ್ಚ್ ನಿರ್ಮಾಣ’



ಐಜ್ವಾಲ್ (ಪಿಟಿಐ): ಜಗತ್ತಿನಲ್ಲಿಯೇ ದೊಡ್ಡದಾದ ಚರ್ಚ್‌ಅನ್ನು ರಾಜ್ಯದ ಸರ್ಚಿಪ್ ಜಿಲ್ಲೆಯಲ್ಲಿ ನಿರ್ಮಿಸಲಾಗುವುದು ಎಂದು ಮಿಜೋರಾಂನ ಕ್ರೈಸ್ತರ ಸಂಸ್ಥೆಯೊಂದು ಹೇಳಿದೆ.

‘ಚರ್ಚ್‌ಅನ್ನು 23,809.52 ಚದರ ಮೀಟರ್ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು. ವ್ಯಾಟಿಕನ್ ನಗರದ ಸೇಂಟ್ ಪೀಟರ್ಸ್ ಬ್ಯಾಸಿಲಿಕಾ ಇರುವ ಪ್ರದೇಶಕ್ಕಿಂತ 809.52 ಚದರ ಮೀಟರ್ ಹೆಚ್ಚು ವಿಸ್ತೀರ್ಣದ ಜಾಗದಲ್ಲಿ ಈ ಚರ್ಚ್ ಅನ್ನು ನಿರ್ಮಿಸಲಾಗುವುದು’ ಎಂದು ರೆವರೆಂಡ್ ಡಾ.ಝ್ಯುಥಾವ್ನಾ ಹಲಾವಾಂಡೊ ತಿಳಿಸಿದ್ದಾರೆ.

‘ಝೋಫೇಟ್’ ಎಂದು ಕರೆಯಲಾಗುವ ಮಿಜೊ ಬುಡಕಟ್ಟು ಜನರಿಗೆ ಸೇರಿದ ಚರ್ಚ್ ಇದಾಗಿದೆ. ಸಾರ್ವಜನಿಕರ ದೇಣಿಗೆ ಹಾಗೂ ಸ್ವಯಂ ಸೇವೆ ಮೂಲಕ ಚರ್ಚ್ ನಿರ್ಮಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಕಾರ್ಯಾಚರಣೆ

ರಾವುತ್‌ಗೆ ಸೇರಿದ ಸ್ವತ್ತುಗಳ ಜಪ್ತಿ ಮಾಡಿದ ಇ.ಡಿ

ಮುಂಬೈ/ನವದೆಹಲಿ: ಶಿವಸೇನಾ ರಾಜ್ಯಸಭಾ ಸದಸ್ಯ, ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಆಪ್ತ ಸಂಜಯ್ ರಾವುತ್ ಹಾಗೂ ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಮಹಾರಾಷ್ಟ್ರದ ಅಲಿಬಾಗ್‌ನಲ್ಲಿರುವ ₹9 ಕೋಟಿ ಮೌಲ್ಯದ ಭೂಮಿ ಮತ್ತು ಮುಂಬೈನ ದಾದರ್ ಉಪನಗರದಲ್ಲಿರುವ ₹2 ಕೋಟಿ ಮೌಲ್ಯದ ಫ್ಲ್ಯಾಟ್ ಜಪ್ತಿ ಮಾಡಿರುವ ಸ್ವತ್ತುಗಳಲ್ಲಿ ಸೇರಿವೆ.

ಮುಂಬೈನಲ್ಲಿ ₹1,034 ಕೋಟಿ ವೆಚ್ಚದಲ್ಲಿ ‘ಪತ್ರಾ ಚಾಳ್’ನ ಮರು ಅಭಿವೃದ್ಧಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಈ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ ಅಧಿಕಾರಿಗಳು ಫೆಬ್ರುವರಿಯಲ್ಲಿ ಉದ್ಯಮಿ ಪ್ರವೀಣ್ ರಾವುತ್ ಎಂಬುವವರನ್ನು ಬಂಧಿಸಿ, ನಂತರ ಚಾರ್ಜ್‌ಶೀಟ್ ಸಲ್ಲಿಸಿದ್ದರು. ಪಿಎಂಸಿ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರಾವುತ್ ಪತ್ನಿ ವರ್ಷಾ ರಾವುತ್ ಅವರನ್ನು ಇ.ಡಿ ಕಳೆದ ವರ್ಷ ವಿಚಾರಣೆಗೆ ಒಳಪಡಿಸಿತ್ತು.

ಆರೋಪ–ಪ್ರತ್ಯಾರೋಪ: ಇ.ಡಿ ಅಧಿಕಾರಿಗಳು ತಮಗೆ ಸೇರಿದ ಆಸ್ತಿಗಳನ್ನು ಜಪ್ತಿ ಮಾಡಿದ ಕೆಲವೇ ಗಂಟೆಗಳಲ್ಲಿ ಟ್ವಿಟರ್‌ನಲ್ಲಿ ಪೋಸ್ಟ್‌ವೊಂದನ್ನು ಪ್ರಕಟಿಸಿರುವ ಸಂಜಯ್ ರಾವುತ್, ‘ಅಸತ್ಯಮೇವ ಜಯತೇ!’ ಎಂದು ಬರೆದುಕೊಂಡಿದ್ದಾರೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇ.ಡಿ ಕ್ರಮ ಮಧ್ಯಮ ವರ್ಗದ ಮರಾಠಿಗರ ಮೇಲಿನ ದಾಳಿ’ ಎಂದು ಹೇಳಿದರು.

‘ಇಂಥ ಒತ್ತಡ ತಂತ್ರಗಳಿಗೆ ನಾನು ಮಣಿಯುವುದಿಲ್ಲ. ಇ.ಡಿ ಅಧಿಕಾರಿಗಳ ವಿರುದ್ಧದ ಸುಲಿಗೆ ಆರೋಪಗಳ ಕುರಿತು ತನಿಖೆಗೆ ಮುಂಬೈ ಪೊಲೀಸರು ಎಸ್‌ಐಟಿ ರಚಿಸಿದ ಮಾರನೇ ದಿನವೇ ಇ.ಡಿ ಈ ಕ್ರಮ ಕೈಗೊಂಡಿದೆ’ ಎಂದರು.

ಇ.ಡಿ ಕ್ರಮದ ಬೆನ್ನಲ್ಲೇ, ಬಿಜೆಪಿ ವಿರುದ್ಧ ಮಹಾವಿಕಾಸ್ ಆಘಾಡಿ (ಎಂವಿಎ) ಅಂಗಪಕ್ಷವಾದ ಎನ್‌ಸಿಪಿ ಹರಿಹಾಯ್ದಿದೆ. ‘ಇ.ಡಿ ಕ್ರಮ ರಾಜಕೀಯ ಪ್ರೇರಿತ. ಎಂವಿಎ ನಾಯಕರ ಧ್ವನಿಯನ್ನು ಹತ್ತಿಕ್ಕುವ ಯತ್ನವಾಗಿದೆ’ ಎಂದು ಎನ್‌ಸಿಪಿ ವಕ್ತಾರ ಮಹೇಶ್ ತಾಪ್ಸೆ ಟೀಕಿಸಿದ್ದಾರೆ.

ದೆಹಲಿ ಸಚಿವ ಜೈನ್ ಒಡೆತನದ ಆಸ್ತಿ ಜಪ್ತಿ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣವೊಂದರ ತನಿಖೆಗೆ ಸಂಬಂಧಿಸಿ, ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಅವರ ಕುಟುಂಬಕ್ಕೆ ಸೇರಿದ ಹಾಗೂ ಜೈನ್ ‘ಒಡೆತನ ಹಾಗೂ ಅವರ ನಿಯಂತ್ರಣದಲ್ಲಿರುವ’ ₹ 4.81 ಕೋಟಿ ಮೌಲ್ಯದ ಆಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಜೈನ್ ಅವರನ್ನು ಇ.ಡಿ ಅಧಿಕಾರಿಗಳು 2018ರಲ್ಲಿ ವಿಚಾರಣೆಗೆ ಒಳಪಡಿಸಿದ್ದರು.

ಎಎಪಿ ಸೇರುವುದಕ್ಕೂ ಮುನ್ನ ಅವರು ಕೇಂದ್ರೀಯ ಲೋಕೋಪಯೋಗಿ ಇಲಾಖೆ ನೌಕರರಾಗಿದ್ದರು. ನಂತರ, ಉದ್ಯೋಗ ತ್ಯಜಿಸಿದ್ದ ಅವರು, ಕಟ್ಟಡಗಳ ನಿರ್ಮಾಣ ಹಾಗೂ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕನ್ಸಲ್ಟನ್ಸಿ ಸಂಸ್ಥೆಯನ್ನು ಆರಂಭಿಸಿದರು.

ಸಂಕ್ಷಿಪ್ತ ಸುದ್ದಿ

ಶಾಂಘೈ: ಲಾಕ್‌ಡೌನ್ ಮುಂದುವರಿಕೆ

ಶಾಂಘೈ(ರಾಯಿಟರ್ಸ್): ಚೀನಾದ ಪ್ರಮುಖ ವಾಣಿಜ್ಯ ಕೇಂದ್ರವಾದ ಶಾಂಘೈನಲ್ಲಿ ಲಾಕ್‌ಡೌನ್ ನಡುವೆಯೂ ಲಕ್ಷಣ ರಹಿತ ಸೋಂಕು ಪ್ರಮಾಣ ಹೆಚ್ಚುತ್ತಿದ್ದು, ಮಂಗಳವಾರ ಸಾರಿಗೆ ವ್ಯವಸ್ಥೆ ಮೇಲೂ ನಿರ್ಬಂಧ ವಿಧಿಸಲಾಗಿದೆ.

ನಗರದಲ್ಲಿ ನಡೆಯುತ್ತಿರುವ ಕೊರೊನಾ ಸೋಂಕು ಪತ್ತೆ ಪರೀಕ್ಷೆಯಲ್ಲಿ 13,086 ಮಂದಿಗೆ ಕೋವಿಡ್ ದೃಢಪಟ್ಟಿದೆ.

ಜನರಿಂದಲೇ ವಿವರ ನಮೂದು

ನವದೆಹಲಿ (ಪಿಟಿಐ): ಮುಂಬರುವ ಜನಗಣತಿ ಕಾರ್ಯವನ್ನು ಡಿಜಿಟಲ್ ವಿಧಾನದಲ್ಲಿ ನಡೆಸಲಾಗುವುದು. ಗಣತಿಗೆ ಸಂಬಂಧಿಸಿದ ವಿವರಗಳನ್ನು ತಾವೇ ನಮೂದಿಸುವ ಆಯ್ಕೆಯನ್ನು ಈ ಬಾರಿ ಜನರಿಗೆ ನೀಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಜನ ಸೇವೆ: ಸಂಸದರಿಗೆ ಮೋದಿ ಕರೆ



ನವದೆಹಲಿಯಲ್ಲಿ ಮಂಗಳವಾರ ನಡೆದ ಬಿಜೆಪಿಯ ಸಂಸದೀಯ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪಾಲ್ಗೊಂಡರು —ಪಿಟಿಐ ಚಿತ್ರ


ನವದೆಹಲಿ (ಪಿಟಿಐ): ಬಿಜೆಪಿ ಸಂಸದರು ತಮ್ಮನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ. ಏಪ್ರಿಲ್ 7ರಿಂದ ಬಿಜೆಪಿಯು 15 ದಿನಗಳ 'ಸಾಮಾಜಿಕ ನ್ಯಾಯ ಪಾಕ್ಷಿಕ' ಕಾರ್ಯಕ್ರಮ ನಡೆಸಲಿರುವ ಹಿನ್ನೆಲೆಯಲ್ಲಿ ಸಂಸದರು ಪ್ರತಿದಿನ ಏನೆಲ್ಲಾ ಚಟುವಟಿಕೆಗಳಲ್ಲಿ ತೊಡಗಬೇಕು ಎಂಬುದರ ಬಗ್ಗೆ ಮೋದಿ ಅವರು ಸೂಚನೆ ನೀಡಿದ್ದಾರೆ.

ಬಿಜೆಪಿ ಸಂಸ್ಥಾಪನಾ ದಿನದ ಸಿದ್ಧತೆಗಾಗಿ ಮಂಗಳವಾರ ಇಲ್ಲಿ ಕರೆಯಲಾದ ಬಿಜೆಪಿಯ ಸಂಸದೀಯ ಸಭೆಯಲ್ಲಿ ಮಾತನಾಡಿದ ಅವರು, ಸಮಾಜದ ವಿವಿಧ ವರ್ಗಗಳಿಗಾಗಿ ಕೇಂದ್ರ ಸರ್ಕಾರ ರೂಪಿಸಿದ ಎಲ್ಲಾ ಯೋಜನೆಗಳ ಮಾಹಿತಿಗಳನ್ನು ಜನರಿಗೆ ಒದಗಿಸಬೇಕು. ಏಪ್ರಿಲ್ 12ರಂದು ಕೋವಿಡ್ ಲಸಿಕೆ ಯೋಜನೆ ಬಗ್ಗೆ ಜನರಿಗೆ ತಿಳಿಸಬೇಕು. ಜೊತೆಗೆ ಶಾಲೆಗಳಿಗೆ ಖುದ್ದು ಸಂಸದರು ಭೇಟಿ ನೀಡಿ, ಲಸಿಕೆ ಪಡೆಯಲು ಉತ್ತೇಜಿಸಬೇಕು ಎಂದು ಸೂಚಿಸಿದರು. ಏಪ್ರಿಲ್ 6 ಬಿಜೆಪಿಯ ಸಂಸ್ಥಾಪನಾ ದಿನವಾಗಿದೆ.

ಸಭೆಯ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಸಂಸದೀಯ ಸಚಿವ ಪ್ರಲ್ಹಾದ ಜೋಶಿ, ‘ಎಲ್ಲಾ ಸಂಸದರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಬೇಕು ಹಾಗೂ ತಮ್ಮನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮೋದಿ ಅವರು ಸೂಚಿಸಿದ್ದಾರೆ. ಸಂಸದರಿಗೆ ಕಿತ್ತಳೆ ಬಣ್ಣದ ಟೋಪಿಯನ್ನು ನೀಡಲಾಗುತ್ತದೆ. ಅದರಲ್ಲಿ ಪಕ್ಷದ ಚಿಹ್ನೆ ಅಥವಾ ಹೆಸರು ಅಥವಾ ಪ್ರಧಾನಿ ಮೋದಿ ಫೋಟೋ ಇರಲಿದೆ’ ಎಂದು ಮಾಹಿತಿ ನೀಡಿದರು.

ಸಂಸದರು ಏ.7ರಂದು ಆಯುಷ್ಮಾನ್ ಭಾರತ್ ಮತ್ತು ಜನ ಔಷಧಿ ಕೇಂದ್ರಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಏ. 8 ಮತ್ತು 9 ರಂದು ಬಡವರಿಗಾಗಿ ಸೂರು ನಿರ್ಮಾಣ ಮತ್ತು ಪ್ರತಿ ಮನೆಗಳಿಗೂ ನಲ್ಲಿ ನೀರು ಪೂರೈಸುವ ಯೋಜನೆ ಬಗ್ಗೆ ವಿವರಿಸಲಿದ್ದಾರೆ ಎಂದರು. ಜ್ಯೋತಿರಾವ್ ಫುಲೆ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ಅವರ ಜಯಂತಿಯನ್ನು ದೊಡ್ಡ ಮಟ್ಟದಲ್ಲಿ ಆಚರಿಸಲಾಗುತ್ತದೆ ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,053
ಇಂದಿನ ಅಂತ್ಯ	17,957
▼	96
ದಿನದ ಗರಿಷ್ಠ	18,095

ವಿನಿಮಯ ದರ

$ ಡಾಲರ್	75.29
£ ಪೌಂಡ್	99.01
€ ಯುರೊ	82.73
¥ ಯೆನ್ (100ಕ್ಕೆ)	61.18

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹400
12 ಮೊಟ್ಟೆಗೆ	₹54

ಮೈಸೂರು

100 ಮೊಟ್ಟೆಗೆ	₹400

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1600)
ಸೋಯಾ (ರಿಫೈನ್ಡ್)	₹1492 (1480)
ಸೂರ್ಯಕಾಂತಿ (ರಿಫೈನ್ಡ್)	₹1680 (1725)
ಪಾಮೋಲಿನ್	₹1457 (1445)

ಕೊಬ್ಬರಿ ಧಾರಣೆ

ತುಮಕೂರು (ಇತರೆ) ₹8400-10500

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹10000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹1200-1400
ಮಧ್ಯಮ	₹800-1200
ಸಣ್ಣ	₹400-800

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಸಕಲೇಶಪುರ

ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು -	525

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-53000

ಚಿತ್ರದುರ್ಗ

ಆಪಿ	46819-47229
ಬೆಟ್ಟೆ	36949-37399
ಕೆಂಪುಗೋಟು	31410-31800
ರಾಶಿ	46339-46779

ಕಾರ್ಕಳ

ಹೊಸತು	38000-45000
ಹಳತು	46000-53000

ಪುತ್ತೂರು

ಕೋಕ	11000-26000
ಹೊಸತು	27500-45000

ಶಿವಮೊಗ್ಗ

ಬೆಟ್ಟೆ	50250-50250
ಗೊರಬಲು	25009-33571
ರಾಶಿ	42036-46599
ಸರಕು	56750-74450

ಸಿದ್ದಾಪುರ

ಬಿಳಿಗೋಟು	23689-33099
ಚಾಲಿ	45133-45133
ಕೋಕ	22699-32099
ಹೊಸಚಾಲಿ	36188-40599
ಕೆಂಪುಗೋಟು	27099-31699
ರಾಶಿ	44739-47289
ತಟ್ಟಿಬೆಟ್ಟೆ	38689-46499

ಶಿರಸಿ

ಬೆಟ್ಟೆ	35899-43299
ಬಿಳಿಗೋಟು	24099-32676
ಚಾಲಿ	37618-40929
ರಾಶಿ	44179-47699

ತುಮಕೂರು

ರಾಶಿ	46100-47050

ಯಲ್ಲಾಪುರ

ಆಪಿ	56479-56479
ಬಿಳಿಗೋಟು	26212-32611
ಚಾಲಿ	36399-40801
ಕೋಕ 1	8899-30412
ಕೆಂಪುಗೋಟು	32199-36969
ರಾಶಿ	46200-51299
ತಟ್ಟಿಬೆಟ್ಟೆ	38499-44770

ರಬ್ಬರ್ ಧಾರಣೆ

ನರಸಿಂಹರಾಜಪುರ ಮಾರುಕಟ್ಟೆ

ಆರ್‌ಎಸ್‌ಎಸ್	4 -172
ಆರ್ ಎಸ್‌ಎಸ್	5 -166
ಗುಡ್ ಲಾಟ್ -	162

ರೇಷ್ಮೆಗೂಡು ಮಾರುಕಟ್ಟೆ

ರಾಮನಗರ

ಮಿಶ್ರ ತಳಿ:	400-697
ದ್ವಿತಳಿ:	200-810

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,900	15,850	15,950	230.60ಸೆಂಟ್ಸ್
ಎಸಿ	8,260	8,000	8,450	
ಆರ್‌ಪಿ	9,000	9,000	8,125	ಲಂಡನ್
ಆರ್‌ಸಿ	4,215	4,000	4,100	2132 ಡಾಲರ್ಸ್

ಪರಸ್ಪರ ಅಂತರ ಕಾಯ್ದುಕೊಳ್ಳಿ

ರಿಲಯನ್ಸ್ ಡಿಜಿಟಲ್‌ನಲ್ಲಿ ರಿಯಾಯಿತಿ ಕೊಡುಗೆ

ಬೆಂಗಳೂರು: ರಿಲಯನ್ಸ್ ಡಿಜಿಟಲ್ ಮಳಿಗೆಗಳಲ್ಲಿ ಏಪ್ರಿಲ್ 17ರವರೆಗೆ ಡಿಜಿಟಲ್ ಡಿಸ್ಕೌಂಟ್ ಮಾರಾಟ ಮೇಳ ನಡೆಯಲಿದೆ. ಮೈ ಜಿಯೊ ಸ್ಟೋರ್‌ಗಳಲ್ಲಿ, www.reliancedigital.in ಹಾಗೂ www.jiomart.com ಮೂಲಕ ಖರೀದಿಸುವವರಿಗೆ ರಿಯಾಯಿತಿ ಇರಲಿವೆ.

ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಅತ್ಯುತ್ತಮ ರಿಯಾಯಿತಿಗಳು ಮಾತ್ರವೇ ಅಲ್ಲದೆ, ಎಚ್‌ಡಿಎಫ್‌ಸಿ ಕಾರ್ಡ್ ಬಳಸಿ ಮಾಡುವ ಪಾವತಿಗಳಿಗೆ ಶೇ 7.5ರವರೆಗೆ ರಿಯಾಯಿತಿ, ₹ 80 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ಖರೀದಿಗಳಿಗೆ ₹ 2 ಸಾವಿರದವರೆಗಿನ ಮೌಲ್ಯದ ಕೂಪನ್ ನೀಡಲಾಗುತ್ತದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಟಿ.ವಿ., ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಎ.ಸಿ., ರೆಫ್ರಿಜರೇಟರ್, ವಾಷಿಂಗ್ ಮೆಷಿನ್, ಸ್ಮಾರ್ಟ್ ವಾಚ್‌ಗಳ ಮೇಲೆ ಆಕರ್ಷಕ ಕೊಡುಗೆಗಳು ಇರಲಿವೆ.

ಸೆನ್ಸೆಕ್ಸ್: ಎರಡು ದಿನಗಳ ಏರಿಕೆಗೆ ತಡೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳನ್ನು ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ ಪರಿಣಾಮವಾಗಿ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಇಳಿಕೆ ಕಂಡವು.

ಹೂಡಿಕೆದಾರರು ರಷ್ಯಾ–ಉಕ್ರೇನ್ ಸಮರ ಮತ್ತು ಕಚ್ಚಾ ತೈಲ ಬೆಲೆಯ ಮೇಲೆ ಕೂಡ ಗಮನ ಕೇಂದ್ರೀಕರಿಸಿದ್ದಾರೆ ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 435 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 96 ಅಂಶ ಕುಸಿಯಿತು.

ಮಾರುಕಟ್ಟೆಯಲ್ಲಿ ಈಚೆಗೆ ಏರಿಕೆ ಕಂಡುಬಂದಿದೆ. ಈ ಏರಿಕೆಯ ನಂತರದಲ್ಲಿ ಮಾರುಕಟ್ಟೆಗಳು ಏರಿಕೆಯೂ ಇಲ್ಲದ, ಇಳಿಕೆಯೂ ಇಲ್ಲದ ಸ್ಥಿತಿಯಲ್ಲಿ ತುಸು ಕಾಲ ಇರಬಹುದು. ಆದರೆ, ವಹಿವಾಟುಗಳಿಗೆ ಹೊಸ ಅವಕಾಶ ಇದ್ದೇ ಇರುತ್ತದೆ. ಹೂಡಿಕೆದಾರರು ಒಳ್ಳೆಯ ಗುಣಮಟ್ಟದ ಕಂಪನಿಗಳನ್ನು ಕಡಿಮೆ ಬೆಲೆಗೆ ಖರೀದಿಸುವತ್ತ ಗಮನ ನೀಡಬೇಕು ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 109.24 ಡಾಲರ್‌ಗೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

5-4-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1610)
ಒಂದು ವಾರದ ಡೆಲಿವರಿ	1615 (1605)
ಸೋಯಾ ಕಚ್ಚಾ	1440 (1435)
ಪಾಮ್ ವಾರದ ಡೆಲಿವರಿ	1455 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1625 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,350 (51,300)
ಬೆಳ್ಳಿ ಕೆ.ಜಿ	66,550 (66,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

₹ 1.25 ಲಕ್ಷ ಕೋಟಿ ದಾಟಿದ 'ಕರೂರ್ ವೈಶ್ಯ' ವಹಿವಾಟು

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕರೂರ್ ವೈಶ್ಯ ಬ್ಯಾಂಕ್ ₹ 1.25 ಲಕ್ಷ ಕೋಟಿ ವ್ಯವಹಾರದ ಮೈಲಿಗಲ್ಲು ದಾಟಿದೆ ಎಂದು ಬ್ಯಾಂಕ್ ಹೇಳಿದೆ.

ಬ್ಯಾಂಕಿನ ಒಟ್ಟು ಠೇವಣಿ ₹ 68,676 ಕೋಟಿ, ಒಟ್ಟು ಮುಂಗಡ ₹ 58,086 ಕೋಟಿ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

'ಬ್ಯಾಂಕ್‌ನ ನೂರಕ್ಕೂ ಹೆಚ್ಚಿನ ವರ್ಷಗಳ ವಹಿವಾಟಿನಲ್ಲಿ ಈ ಮೈಲಿಗಲ್ಲು ಮಹತ್ವದ್ದು' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ರಮೇಶ್ ಬಾಬು ಹೇಳಿದ್ದಾರೆ.

ಶೂನ್ಯಕ್ಕೆ ಇಳಿದ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಎನ್‌ಪಿಎ



ಬೆಂಗಳೂರು: ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಸಾಲದ (ಎನ್‌ಪಿಎ) 2021–22ನೇ ಹಣಕಾಸಿನ ವರ್ಷದ ಅಂತ್ಯದಲ್ಲಿ ಶೂನ್ಯಕ್ಕೆ ತಲುಪಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ತೆರಿಗೆಪೂರ್ವ ₹ 97.52 ಕೋಟಿ ಲಾಭ ಗಳಿಸಿದೆ. ಬ್ಯಾಂಕ್‌ನ ತೆರಿಗೆ ನಂತರದ ಲಾಭವು ₹ 24.40 ಕೋಟಿ ಎಂದು ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀರಾಮ ಪ್ರಭು, ಯಲಹಂಕ, ಬೆಂಗಳೂರು

- **ಪ್ರಶ್ನೆ: ನಾನು ಬ್ಯಾಂಕ್ ಉದ್ಯೋಗಿ, ಮುಂದಿನ 6 ತಿಂಗಳಲ್ಲಿ ನಿವೃತ್ತಿಯಾಗಲಿದ್ದೇನೆ. ನನ್ನಲ್ಲಿ ಸುಮಾರು ₹ 50 ಲಕ್ಷ ಉಳಿತಾಯ ಇದೆ. ಮುಂದೆ ಸುಮಾರು ₹ 40,000 ಮಾಸಿಕ ಪಿಂಚಣಿ ಬರಬಹುದು. ನನ್ನ ಇಬ್ಬರು ಮಕ್ಕಳು ಉದ್ಯೋಗದಲ್ಲಿದ್ದಾರೆ. ನನ್ನ ಪತ್ನಿ ಗೃಹಿಣಿ ಹಾಗೂ ನನಗೆ ಸ್ವಂತ ಮನೆ ಇದೆ. ಯಾವುದೇ ಸಾಲವಿಲ್ಲ. ಆದರೆ ಮಕ್ಕಳ ಮದುವೆ ಬಾಕಿ ಇದೆ. ನಿವೃತ್ತಿಯ ನಂತರ ಬಹಳಷ್ಟು ಸಮಯ ಸಿಗಲಿದೆ. ಹೀಗಾಗಿ ನನ್ನ ಉಳಿತಾಯದ ಬಹುಪಾಲು ಮೊತ್ತವನ್ನು ಷೇರುಪೇಟೆಯಲ್ಲಿ ತೊಡಗಿಸಬೇಕೆಂದಿದ್ದೇನೆ. ಇಂದಿನ ಸನ್ನಿವೇಶದಲ್ಲಿ ಇದು ಸೂಕ್ತವೇ? ತಿಳಿಸಿ.**

ಉತ್ತರ: ಯಾವುದೇ ಹೂಡಿಕೆ ಮಾಡಬೇಕಿದ್ದರೂ ಅದಕ್ಕೆ ಒಂದಿಷ್ಟು ಪೂರ್ವ ತಯಾರಿ ಹಾಗೂ ಹೂಡಿಕೆಗೆ ಅಗತ್ಯವಿರುವ ಒಂದಿಷ್ಟು ಕೌಶಲವನ್ನು ನಾವು ಪಡೆದಿರಬೇಕು. ಆಗ ಮಾತ್ರ ನಮಗೆ ಮಾರುಕಟ್ಟೆಯ ಏಳುಬೀಳುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಹಾಗೂ ಯಾವ ಸಂದರ್ಭದಲ್ಲಿ ಯಾವ ಕಂಪನಿಯ ಷೇರುಗಳು ಖರೀದಿಗೆ ಉತ್ತಮ ಎಂಬುದನ್ನು ಗ್ರಹಿಸಲು ಸಾಧ್ಯ.

ಜೀವನ ಪೂರ್ತಿ ದುಡಿದು ಸಂಗ್ರಹಿಸಿಟ್ಟ ಹಣವನ್ನು ಏಕಾಏಕಿ ಒಂದೇ ಬಾರಿಗೆ ಷೇರು ಪೇಟೆಯಲ್ಲಿ ಹೂಡಿಕೆ ಮಾಡುವುದು ಸೂಕ್ತವಲ್ಲ. ನಿವೃತ್ತಿಯ ನಂತರ ಸಾಕಷ್ಟು ಸಮಯಾವಕಾಶ ಇದ್ದರೂ ಅಂತಹ ಹೂಡಿಕೆ ಅನಿವಾರ್ಯವಲ್ಲ. ಅದಕ್ಕೂ ಮೊದಲು ಉತ್ತಮ ಹೂಡಿಕೆದಾರನಲ್ಲಿ ಇರಬೇಕಾದ ಹಲವಾರು ಅಗತ್ಯ ಕೌಶಲ, ತಿಳಿವಳಿಕೆಗಳನ್ನು ಕರಗತ ಮಾಡಿಕೊಳ್ಳಿ. ಆ ಬಗೆಗಿನ ನಿಮ್ಮ ಅಧ್ಯಯನ ಹೆಚ್ಚಿಸಿ, ನೀವು ಹೂಡಿಕೆ ಮಾಡಬೇಕೆಂದಿರುವ ಕಂಪನಿಗಳ ಬಗ್ಗೆ ಮಾಹಿತಿ ಕಲೆಹಾಕಿ. ಷೇರುಪೇಟೆ ಕಂಡ ಏಳುಬೀಳುಗಳ ಹಾದಿಯನ್ನು ಗಮನಿಸಿ, ಕಾರಣಗಳನ್ನು ವಿಮರ್ಶಿಸಿ.

ನೀವು ಹೂಡಿಕೆ ಮಾಡಬೇಕೆಂದಿರುವ ಕಂಪನಿಗಳು ಮಾರುಕಟ್ಟೆಯ ಪ್ರತಿಕೂಲ ಸಮಯದಲ್ಲಿ ಹೇಗೆ ಸ್ಪಂದಿಸಿವೆ ಎಂಬುದನ್ನು ಗಮನಿಸಿ. ಒಂದೇ ಕ್ಷೇತ್ರದಲ್ಲಿ ಪೈಪೋಟಿ ನಡೆಸುವ ಹತ್ತಾರು ಕಂಪನಿಗಳ ಮಾರುಕಟ್ಟೆ ಮೌಲ್ಯ ಹೇಗೆ ಮತ್ತು ಏಕೆ ಭಿನ್ನವಾಗಿದೆ ಎಂಬುದನ್ನು ತಿಳಿದುಕೊಳ್ಳಿ. ಈ ಮೌಲ್ಯವು ಪ್ರತಿ ಕಂಪನಿಯ ಸೇವೆ ಅಥವಾ ಉತ್ಪನ್ನಗಳ ಗುಣಮಟ್ಟ, ಮಾರುಕಟ್ಟೆಯಲ್ಲಿ ಅವುಗಳಿಗೆ ಇರುವ ಬೇಡಿಕೆ ಇತ್ಯಾದಿ ಕೆಲವು ಸೂಕ್ಷ್ಮ ವಿಚಾರ ಆಧರಿಸಿ ನಿರ್ಣಯವಾಗುತ್ತದೆ ಎಂಬುದು ತಿಳಿದಿರಲಿ. ಹೀಗಾಗಿ ಉತ್ತಮ ಕಂಪನಿಗಳನ್ನೇ ಆಯ್ಕೆ ಮಾಡಿ ಮತ್ತು ನಿಮ್ಮ ವಿಮರ್ಶೆಗೆ ನಿಲುಕುವ ಕಂಪನಿಗಳ ಷೇರುಗಳನ್ನಷ್ಟೇ ಖರೀದಿಸಿ. ಹೂಡಿಕೆದಾರರ ದೃಷ್ಟಿ ಇವುಗಳ ಮೇಲೆ ಇದ್ದಾಗಲಷ್ಟೇ ಹೂಡಿಕೆಯ ನಿಜವಾದ ಸತ್ವ ತಿಳಿಯುವುದು. ಎಲ್ಲದಕ್ಕಿಂತ ಮುಖ್ಯವಾಗಿ ನಾವು ಲಾಭಗಳಿಸಬೇಕಾದರೆ ನಾವೇ ಅದರ ಬಗ್ಗೆ ಅರಿತವರಾಗಿರಬೇಕು. ಕಂಪನಿಗಳ ಆಗುಹೋಗುಗಳ ಸಮಗ್ರ ಮಾಹಿತಿ ಹೊಂದಿ ಹೂಡಿಕೆ ಮಾಡುವುದು ಹೆಚ್ಚು ಸೂಕ್ತ. ಇತರರು ನೀಡುವ ಪುಕ್ಕಟೆ ಸಲಹೆಗಳು ನಮಗೆ ಮೊದಲ ಮಾಹಿತಿಯಾಗಬೇಕೆ ಹೊರತು ಅವು ಅಂತಿಮ ನಿರ್ಣಯಕ್ಕೆ ಆಧಾರವಾಗಬಾರದು. ಎಲ್ಲವನ್ನೂ ನಮ್ಮದೇ ದೃಷ್ಟಿಯಲ್ಲಿ ಪರಿಶೀಲಿಸುವುದು ಅನಿವಾರ್ಯ, ಅದಕ್ಕೂ ಮೊದಲು ನುರಿತವರಿಂದ ಅಗತ್ಯ ಪರಿಣತಿ ಪಡೆದುಕೊಳ್ಳಿ. ಷೇರುಪೇಟೆ ವಿಚಾರವೂ ಒಂದು ವ್ಯಾಪಾರ.

ನೀವು ಮಕ್ಕಳ ಮದುವೆ ಹೊರತುಪಡಿಸಿ ಇತರ ಯಾವುದೇ ಆರ್ಥಿಕ ಜವಾಬ್ದಾರಿ ಹೊಂದಿರದ ಕಾರಣ ಅದಕ್ಕೆ ಅಗತ್ಯವಾದ ಒಂದಿಷ್ಟು ಹಣ ಮೀಸಲಿಟ್ಟು ಹೂಡಿಕೆಗೆ ತೊಡಗಬಹುದು. ಸುಮಾರು ₹ 15 ಲಕ್ಷದಷ್ಟು ಮೊತ್ತವನ್ನು ಅಂಚೆ ಕಚೇರಿಯ ಹಿರಿಯ ನಾಗರಿಕರ ಖಾತೆಯಲ್ಲಿ ತೊಡಗಿಸಿ. ಇದರಲ್ಲಿ 5 ವರ್ಷ ಹೂಡಿಕೆ ಮಾಡಬೇಕಾಗುತ್ತದೆ, ತ್ರೈಮಾಸಿಕ ಅವಧಿಗೊಮ್ಮೆ ಬಡ್ಡಿ ಬರುತ್ತದೆ. ಉಳಿದ ಮೊತ್ತವನ್ನಷ್ಟೇ ಹಂತ ಹಂತವಾಗಿ ಉತ್ತಮ ಕಂಪನಿಗಳ ಷೇರುಗಳಲ್ಲಿ ತೊಡಗಿಸಿ.

ಅಂಕಿತ್, ತುಮಕೂರು

- **ಪ್ರಶ್ನೆ: ಎಸ್‌ಐಪಿ ಹೂಡಿಕೆಯನ್ನು ಬ್ಯಾಂಕ್ ಮೂಲಕ ಮಾಡಿದರೆ ಸೂಕ್ತವೋ? ಮೊಬೈಲ್ ಆ್ಯಪ್ ಮೂಲಕ ಮಾಡಿದರೆ ಒಳ್ಳೆಯದೋ? ಮ್ಯೂಚುವಲ್ ಫಂಡ್ ಒಳ್ಳೆಯದೋ ಇಟಿಎಫ್ ಒಳ್ಳೆಯದೋ?**

ಉತ್ತರ: ತಂತ್ರಜ್ಞಾನದ ಯುಗದಲ್ಲಿ ಯಾವುದೇ ಹೂಡಿಕೆ ಮಾಡಲು ಸರಳ ಮಾರ್ಗ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್. ಮ್ಯೂಚುವಲ್ ಫಂಡ್‌ಗಳಲ್ಲಿ ನಾವೇ ಹೂಡಿಕೆ ಮಾಡುವಾಗ 'ಡೈರೆಕ್ಟ್ ಪ್ಲಾನ್' ಆಯ್ಕೆ ಮಾಡಿಕೊಳ್ಳಬಹುದು. ಇದರಲ್ಲಿ ಫಂಡ್ ನಿರ್ವಹಣಾ ವೆಚ್ಚ 'ರೆಗ್ಯುಲರ್ ಪ್ಲಾನ್'ಗಿಂತ ತುಸು ಕಡಿಮೆ. ಕಾರಣ ಇಲ್ಲಿ ಹೂಡಿಕೆದಾರ ನೇರವಾಗಿ ಫಂಡ್ ಹೌಸ್ ಮೂಲಕ ಹೂಡಿಕೆ ಮಾಡುತ್ತಾನೆ. ಆದರೆ 'ರೆಗ್ಯುಲರ್ ಪ್ಲಾನ್'ಗಳಲ್ಲಿ ಏಜೆಂಟ್ ಅಥವಾ ಬ್ರೋಕರ್ ಶುಲ್ಕವನ್ನೂ ಸೇರಿಸಿ ಎನ್‌ಎವಿ ನಿರ್ಣಯಿಸಲಾಗುತ್ತದೆ. ಪಾವತಿ ಮಾಧ್ಯಮ ಯಾವುದಾದರೂ ಅದು ನಿಮ್ಮ ಖಾತೆಯಿಂದಲೇ ಪಾವತಿಸಲ್ಪಡುವ ಕಾರಣ ನಿಮ್ಮ ಅನುಕೂಲಕ್ಕೆ ಸರಿಯಾಗಿ ಮೇಲಿನ ಅಂಶ ಪರಿಗಣಿಸಿ ನಿರ್ಧಾರ ಕೈಗೊಳ್ಳಿ.

ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ (ಇಟಿಎಫ್) ಷೇರುಪೇಟೆಯಲ್ಲಿ ವ್ಯವಹರಿಸುವ ಷೇರುಗಳಂತೆ ಮಾರುಕಟ್ಟೆ ಸಮಯದಲ್ಲಿ ಬದಲಾಗುತ್ತಿರುವ ಬೆಲೆಗನುಗುಣವಾಗಿ ಕೊಂಡುಕೊಳ್ಳಬಹುದು. ಆದರೆ ಮ್ಯೂಚುವಲ್ ಫಂಡ್ ಹೌಸ್‌ಗಳು ದಿನಕ್ಕೊಮ್ಮೆ ಮಾತ್ರ ಎನ್‌ಎವಿ ಮೌಲ್ಯ ಪ್ರಕಟಿಸುತ್ತವೆ. ದಿನಕ್ಕೆ ಒಮ್ಮೆ ಮಾತ್ರ ಅವುಗಳ ಬೆಲೆ ಬದಲಾವಣೆಯಾಗುತ್ತದೆ. ಇಟಿಎಫ್ ಪ್ರಮುಖ ಪ್ರಯೋಜನಗಳೆಂದರೆ ವ್ಯವಹಾರದ ಸರಳತೆ, ಹೂಡಿಕೆಯಲ್ಲಿ ವೈವಿಧ್ಯ ಸಾಧಿಸುವುದು, ಕಡಿಮೆ ವೆಚ್ಚ ಮತ್ತು ತೆರಿಗೆ ಪ್ರಯೋಜನಗಳು. ನೀವು ಹೂಡಿಕೆ ಮಾಡುವ ಮೊದಲು ತಜ್ಞರೊಂದಿಗೆ ಸಮಾಲೋಚಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಆಟೊಮೊಬೈಲ್ ಉದ್ಯಮ: ವಾಹನ ಮಾರಾಟ ಕುರಿತು ಎಫ್‌ಎಡಿಎ ಅಂದಾಜು

ಬರುವ ವರ್ಷ ಕೋವಿಡ್ ಪೂರ್ವದ ಸ್ಥಿತಿಗೆ



ಮುಖ್ಯಾಂಶಗಳು

- ಮಾರ್ಚ್‌ನಲ್ಲಿ ಪ್ರಯಾಣಿಕ ವಾಹನ ಮಾರಾಟ ಇಳಿಕೆ
- ಇಂಧನ ಬೆಲೆ ಏರಿಕೆಯಿಂದ ವಾಹನ ಮಾರುಕಟ್ಟೆ ಮೇಲೆ ಪರಿಣಾಮ

ನವದೆಹಲಿ (ಪಿಟಿಐ): ಅಗತ್ಯ ವಸ್ತುಗಳ ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳು ಹಾಗೂ ಬೇರೆ ಬೇರೆ ವಿಭಾಗದ ವಾಹನಗಳಿಗೆ ಬೇಡಿಕೆ ತಗ್ಗಿರುವುದು ಪ್ರಸಕ್ತ ಹಣಕಾಸು ವರ್ಷದಲ್ಲಿ ಆಟೊಮೊಬೈಲ್ ರಿಟೇಲ್ ಮಾರಾಟದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಗಳ ಒಕ್ಕೂಟ (ಎಫ್‌ಎಡಿಎ) ಹೇಳಿದೆ.

ದೇಶದ ಆಟೊಮೊಬೈಲ್ ಉದ್ಯಮವು 2023–24ರ ಅಂತ್ಯದೊಳಗೆ ಸಂಕಷ್ಟದಿಂದ ಹೊರಬಂದು, ಕೋವಿಡ್ ಪೂರ್ವದ ಮಟ್ಟವನ್ನು ತಲುಪಬಹುದು ಎಂದು ಎಫ್‌ಎಡಿಎ ಅಂದಾಜು ಮಾಡಿದೆ.

ರಷ್ಯಾ–ಉಕ್ರೇನ್ ಯುದ್ಧ ಮತ್ತು ಚೀನಾದಲ್ಲಿನ ಲಾಕ್‌ಡೌನ್ ಕ್ರಮಗಳಿಂದಾಗಿ ಪ್ರಮುಖ ಬಿಡಿಭಾಗಗಳ ಪೂರೈಕೆಗೆ ಅಡಚಣೆ ಆಗಲಿದೆ. ಇದರಿಂದಾಗಿ ಉದ್ಯಮದ ಪುನಶ್ಚೇತನಕ್ಕೆ ತೊಂದರೆ ಆಗಲಿದೆ ಎಂದು ಎಫ್‌ಎಡಿಎ ಹೇಳಿದೆ. 'ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾರಾಟ ಪ್ರಮಾಣದ ಬೆಳವಣಿಗೆಯು ಒಂದಂಕಿ ಮಟ್ಟದಲ್ಲಿ ಇರಬಹುದು ಎಂಬುದು ನಮ್ಮ ನಿರೀಕ್ಷೆ' ಎಂದು ಎಫ್‌ಎಡಿಎ ಅಧ್ಯಕ್ಷ ವಿಂಕೇಶ್ ಗುಲಾಟಿ ತಿಳಿಸಿದ್ದಾರೆ.

2020–21ನೇ ಸಾಲಿಗೆ ಹೋಲಿಸಿದರೆ, 2021–22ರಲ್ಲಿ ದೇಶಿ ರಿಟೇಲ್ ಮಾರಾಟ ಪ್ರಮಾಣವು ಶೇ 7.21ರಷ್ಟು ಏರಿಕೆ ಕಂಡಿದೆ. 'ಪೆಟ್ರೋಲ್, ಡೀಸೆಲ್ ಬೆಲೆಯು ಲೀಟರ್‌ಗೆ ಸರಿಸುಮಾರು ₹ 10ರಷ್ಟು ಹೆಚ್ಚಳ ಆಗಿದೆ. ಇದು ಕೂಡ ವಾಹನ ಖರೀದಿಸುವವರ ಮೇಲೆ ಪ್ರಭಾವ ಬೀರುತ್ತಿದೆ' ಎಂದು ಗುಲಾಟಿ ಹೇಳಿದ್ದಾರೆ.

ಪ್ರಯಾಣಿಕ ವಾಹನಗಳಿಗೆ ಬೇಡಿಕೆ ತಗ್ಗಿಲ್ಲ. ಆದರೆ, ದ್ವಿಚಕ್ರ ವಾಹನ ಬೇಡಿಕೆ ಮೇಲೆ ಪರಿಣಾಮ ಉಂಟಾಗುವುದು ಖಚಿತ. ದ್ವಿಚಕ್ರ ವಾಹನ ಗ್ರಾಹಕರು ಬೆಲೆಯ ಬಗ್ಗೆ ಬಹಳ ಗಮನ ನೀಡುತ್ತಾರೆ ಎಂದು ಗುಲಾಟಿ ಹೇಳಿದ್ದಾರೆ.

ಮಾರಾಟ ಇಳಿಕೆ: ಪ್ರಯಾಣಿಕ ವಾಹನಗಳ ದೇಶಿ ರಿಟೇಲ್ ಮಾರಾಟವು ಮಾರ್ಚ್ ತಿಂಗಳಲ್ಲಿ ಶೇಕಡ 4.87ರಷ್ಟು ಇಳಿಕೆ ಆಗಿದೆ. ಹಿಂದಿನ ವರ್ಷದ ಮಾರ್ಚ್‌ನಲ್ಲಿ 2.85 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ ಆಗಿತ್ತು. ಈ ವರ್ಷದ ಮಾರ್ಚ್‌ನಲ್ಲಿ ಇದು 2.71 ಲಕ್ಷ ಆಗಿದೆ ಎಂದು ಎಫ್‌ಎಡಿಎ ತಿಳಿಸಿದೆ.

'ಸೆಮಿಕಂಡಕ್ಟರ್ ಕೊರತೆಯು ಈಗಲೂ ಸವಾಲಿನದ್ದೇ ಆಗಿದೆ. ಹೀಗಿದ್ದರೂ, ಪೂರೈಕೆಯು ಹಿಂದಿನ ತಿಂಗಳಿಗೆ ಹೋಲಿಸಿದರೆ ಈಗ ತುಸು ಸುಧಾರಿಸಿದೆ' ಎಂದು ಗುಲಾಟಿ ತಿಳಿಸಿದ್ದಾರೆ.

ಹಿಂದಿನ ವರ್ಷದ ಮಾರ್ಚ್ ತಿಂಗಳ ಮಟ್ಟಕ್ಕೆ ಹೋಲಿಸಿದರೆ ದ್ವಿಚಕ್ರ ವಾಹನಗಳ ಮಾರಾಟವು ಶೇ 4.02ರಷ್ಟು ಇಳಿಕೆ ಕಂಡಿದೆ. 2021ರ ಮಾರ್ಚ್‌ನಲ್ಲಿ 12.06 ಲಕ್ಷ ದ್ವಿಚಕ್ರ ವಾಹನಗಳ ಮಾರಾಟ ಆಗಿತ್ತು. ಅದು ಈ ಬಾರಿಯ ಮಾರ್ಚ್‌ನಲ್ಲಿ 11.57 ಲಕ್ಷಕ್ಕೆ ಇಳಿದಿದೆ.

ವಾಣಿಜ್ಯ ವಾಹನಗಳ ಮಾರಾಟವು ಮಾರ್ಚ್‌ನಲ್ಲಿ ಶೇ 14.91ರಷ್ಟು ಜಾಸ್ತಿ ಆಗಿದೆ. ತ್ರಿಚಕ್ರ ವಾಹನಗಳ ಮಾರಾಟವು ಶೇ 26.61ರಷ್ಟು ಏರಿಕೆ ಕಂಡಿದೆ. ಎಲ್ಲ ಬಗೆಯ ವಾಹನಗಳ ಒಟ್ಟು ಮಾರಾಟವು ಶೇ 2.87ರಷ್ಟು ಇಳಿಕೆ ಆಗಿದೆ.

'ಪೆಟ್ರೋಲ್ ಬೆಲೆ ಏರಿಕೆ ಶೇ 5ರಷ್ಟು ಮಾತ್ರ'

ನವದೆಹಲಿ (ಪಿಟಿಐ): ಅಭಿವೃದ್ಧಿ ಹೊಂದಿದ ಕೆಲವು ದೇಶಗಳು ರಷ್ಯಾ–ಉಕ್ರೇನ್ ಯುದ್ಧ ಶುರುವಾದ ನಂತರದಲ್ಲಿ ಪೆಟ್ರೋಲ್ ಬೆಲೆಯನ್ನು ಶೇಕಡ 50ಕ್ಕಿಂತ ಹೆಚ್ಚಿಸಿದ್ದರೂ, ಭಾರತದಲ್ಲಿ ಶೇ 5ರಷ್ಟು ಮಾತ್ರ ಹೆಚ್ಚಳ ಆಗಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮ ಅನುಭವಿಸುತ್ತಿರುವುದು ಭಾರತ ಮಾತ್ರವೇ ಅಲ್ಲ. ಇಡೀ ವಿಶ್ವ ಈ ಯುದ್ಧದ ಪರಿಣಾಮ ಅನುಭವಿಸುತ್ತಿದೆ ಎಂದು ಅವರು ರಾಜ್ಯಸಭೆಯಲ್ಲಿ ಮಂಗಳವಾರ ಹೇಳಿದ್ದಾರೆ.

ಅಮೆರಿಕ, ಬ್ರಿಟನ್, ಕೆನಡಾ, ಜರ್ಮನಿ ಮತ್ತು ಶ್ರೀಲಂಕಾದಲ್ಲಿ ಪೆಟ್ರೋಲ್ ಬೆಲೆಯು ಶೇಕಡ 50ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಆಗಿದೆ ಎಂದು ಅವರು ವಿವರಿಸಿದ್ದಾರೆ. ಯುದ್ಧ ಶುರುವಾದ ನಂತರದಲ್ಲಿ ನೈಸರ್ಗಿಕ ಅನಿಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಲವು ಪಟ್ಟು ಹೆಚ್ಚಳವಾಗಿದೆ ಎಂದೂ ತಿಳಿಸಿದ್ದಾರೆ.

80 ಪೈಸೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮಂಗಳವಾರ ಲೀಟರಿಗೆ ತಲಾ 80 ಪೈಸೆ ಹೆಚ್ಚಿಸಿವೆ.

ಈ ಹೆಚ್ಚಳದಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ಬೆಲೆಯು ₹ 104.61ಕ್ಕೆ, ಡೀಸೆಲ್ ಬೆಲೆಯು ₹ 95.87ಕ್ಕೆ ತಲುಪಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 110.23ಕ್ಕೆ, ಡೀಸೆಲ್ ಬೆಲೆಯು ₹ 93.99ಕ್ಕೆ ತಲುಪಿದೆ. ಇದರಿಂದಾಗಿ ಮಾರ್ಚ್ 22ರ ನಂತರ ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆಯು ₹ 9.65ರಷ್ಟು, ಡೀಸೆಲ್ ಬೆಲೆಯು ಲೀಟರಿಗೆ ₹ 8.98ರಷ್ಟು ಜಾಸ್ತಿ ಆದಂತಾಗಿದೆ.

ಎಚ್‌ಡಿಎಫ್‌ಸಿ ವಿಲೀನಕ್ಕೆ ಕಾನೂನು ತೊಡಕು?

ಮುಂಬೈ (ರಾಯಿಟರ್ಸ್): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ವಿಲೀನಕ್ಕೆ ಕೆಲವು ಕಾನೂನು ತೊಡಕುಗಳು ಎದುರಾಗಬಹುದು ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬ್ಯಾಂಕ್‌ಗಳು ವಿಮಾ ಕಂಪನಿಗಳಲ್ಲಿ ಹೊಂದುವ ಷೇರುಪಾಲಿಗೆ ಮಿತಿ ಇರಬೇಕು ಎಂದು ಆರ್‌ಬಿಐ ಬಯಸುತ್ತದೆ. ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಡಿಎಫ್‌ಸಿಯನ್ನು ತನ್ನಲ್ಲಿ ವಿಲೀನ ಮಾಡಿಕೊಳ್ಳಲಿದ್ದು, ಇದರಲ್ಲಿ ವಿಮಾ ಕಂಪನಿಗಳೂ ಸೇರಿವೆ.

ಎಚ್‌ಡಿಎಫ್‌ಸಿ ಲೈಫ್ ಮತ್ತು ಎಚ್‌ಡಿಎಫ್‌ಸಿ ಇಆರ್‌ಜಿಒ ಖಾಸಗಿ ವಲಯದ ಪ್ರಮುಖ ವಿಮಾ ಕಂಪನಿಗಳು. ವಿಲೀನದ ನಂತರ ಎಚ್‌ಡಿಎಫ್‌ಸಿ ಬ್ಯಾಂಕ್ ತೆಕ್ಕೆಗೆ ದೊಡ್ಡ ಪ್ರಮಾಣದ ವಿಮಾ ವಹಿವಾಟುಗಳು ಬರಲಿದ್ದು, ಇದಕ್ಕೆ ಆರ್‌ಬಿಐ ಆಕ್ಷೇಪ ವ್ಯಕ್ತಪಡಿಸಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಆರ್‌ಬಿಐ ನಿಯಮಗಳ ಪಾಲನೆ ವಿಚಾರದಲ್ಲಿ ಸ್ಪಷ್ಟನೆ ಕೋರಲಾಗಿದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಸೋಮವಾರ ಹೇಳಿದೆ. 'ಹಲವು ಅಂಗಸಂಸ್ಥೆಗಳನ್ನು ಕೂಡ ವಿಲೀನ ಮಾಡಬೇಕಿರುವ ಕಾರಣ, ಕಾನೂನಿನ ಅಡಚಣೆಗಳು ಎದುರಾಗಬಹುದು. ಅದರಲ್ಲೂ ಮುಖ್ಯವಾಗಿ ವಿಮಾ ಕಂಪನಿಗಳ ವಿಚಾರದಲ್ಲಿ ತೊಡಕುಗಳು ಎದುರಾಗಬಹುದು' ಎಂದು ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ಈ ವಿಚಾರವಾಗಿ ಎಚ್‌ಡಿಎಫ್‌ಸಿ ಬ್ಯಾಂಕ್ ಹಾಗೂ ಆರ್‌ಬಿಐ ಕಡೆಯಿಂದ ಮಂಗಳವಾರ ಪ್ರತಿಕ್ರಿಯೆ ಲಭ್ಯವಾಗಿಲ್ಲ.



ರಾಜಸ್ಥಾನ ರಾಯಲ್ಸ್ ತಂಡಕ್ಕೆ ಸೋಲು: ಯಜುವೇಂದ್ರ ಚಾಹಲ್‌ಗೆ ಎರಡು ವಿಕೆಟ್

ದಿನೇಶ್, ಶಾಬಾಜ್ ಆಟಕ್ಕೆ ಒಲಿದ ಜಯ

ಮುಂಬೈ: ಮಧ್ಯಮ ಕ್ರಮಾಂಕದ ಬ್ಯಾಟರ್ ಶಾಬಾಜ್ ಅಹಮದ್ ಮತ್ತು ಅನುಭವಿ ದಿನೇಶ್ ಕಾರ್ತಿಕ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 4 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಜಯಿಸಿತು. 170 ರನ್‌ಗಳ ಗುರಿ ಬೆನ್ನಟ್ಟಿದ್ದ ಆರ್‌ಸಿಬಿಯು 13 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 87 ರನ್ ಗಳಿಸಿತ್ತು. ಸೋಲಿನ ಆತಂಕ ಎದುರಿಸಿತ್ತು.

ಈ ಹಂತದಲ್ಲಿ ಜೊತೆಗೂಡಿದ ಶಾಬಾಜ್ (45; 28ಎ, 4X4, 6X3) ಮತ್ತು ದಿನೇಶ್ (ಔಟಾಗದೆ 44; 23ಎ) ರಾಜಸ್ಥಾನ ಕೈಯಿಂದ ಗೆಲುವಿನ ಕಸಿದುಕೊಂಡರು. ಆರನೇ ವಿಕೆಟ್ ಜೊತೆಯಾಟದಲ್ಲಿ 67 ರನ್‌ಗಳನ್ನು ಸೂರೆ ಮಾಡಿದರು. ಅದಕ್ಕಾಗಿ ಅವರಿಬ್ಬರೂ ಆಡಿದ್ದು 32 ಎಸೆತಗಳನ್ನು ಮಾತ್ರ!

ಶಾಬಾಜ್ ನಾಲ್ಕು ಬೌಂಡರಿ, ಮೂರು ಸಿಕ್ಸರ್ ಸಿಡಿಸಿದರು. ದಿನೇಶ್ ಏಳು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಇದರಿಂದಾಗಿ ತಂಡವು 19.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 173 ರನ್ ಗಳಿಸಿತು. ಹರ್ಷಲ್ ಪಟೇಲ್ ವಿಜಯದ ಸಿಕ್ಸರ್ ಹೊಡೆದರು.

ಬಟ್ಲರ್, ಹೆಟ್ಮೆಯರ್ ಮಿಂಚು: ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 169 ರನ್ ಗಳಿಸಿತು. ಬಟ್ಲರ್ (ಔಟಾಗದೆ 70) ಮತ್ತು ಹೆಟ್ಮೆಯರ್ (ಔಟಾಗದೆ 42) ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 83 ರನ್ ಸೇರಿಸಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಬೌಲರ್ ಡೇವಿಡ್ ವಿಲ್ಲಿ ಯಶಸ್ವಿ ಜೈಸ್ವಾಲ್ ವಿಕೆಟ್ ಗಳಿಸಿದರು. ಈ ಹಂತದಲ್ಲಿ ಕನ್ನಡಿಗ ದೇವದತ್ತ ಪಡಿಕ್ಕಲ್ ಮತ್ತು ಬಟ್ಲರ್ ಸೇರಿ ಇನಿಂಗ್ಸ್‌ಗೆ ಬಲ ತುಂಬಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಗಳಿಸಿದರು.


ಬಟ್ಲರ್ 42 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದರು. ಈ ಪಂದ್ಯದಲ್ಲಿ ಅರ್ಧ ಡಜನ್ ಸಿಕ್ಸರ್ ಸಿಡಿಸಿದರು. ಆದರೆ, ಒಂದೂ ಬೌಂಡರಿ ಗಳಿಸಲಿಲ್ಲ. ಸಂಜು ಸ್ಯಾಮ್ಸನ್ (8; 8ಎ) ಬೇಗನೆ ನಿರ್ಗಮಿಸಿದ ನಂತರ ಕ್ರೀಸ್‌ಗೆ ಬಂದ ಹೆಟ್ಮೆಯರ್ ತಮ್ಮ ಭುಜಬಲ ಪರಾಕ್ರಮ ಮೆರೆದರು. ನಾಲ್ಕು ಬೌಂಡರಿ, ಎರಡು ಸಿಕ್ಸರ್ ಸಿಡಿಸಿ ತಂಡದ ಮೊತ್ತ ಹೆಚ್ಚಿಸಿದರು.

ಕೈಚೆಲ್ಲಿದ ಕ್ಯಾಚ್‌ಗಳು: ಆರ್‌ಸಿಬಿ ತಂಡದ ಫೀಲ್ಡಿಂಗ್ ಕಳಪೆಯಾಗಿತ್ತು. ಫೀಲ್ಡರ್‌ಗಳು ಒಟ್ಟು ನಾಲ್ಕು ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಏಳನೇ ಓವರ್‌ನಲ್ಲಿ ಎರಡು ಬಾರಿ ಬಟ್ಲರ್ ಕೊಟ್ಟಿದ್ದ ಕ್ಯಾಚ್ ಅನ್ನು ಆಕಾಶದೀಪ್ ತಮ್ಮದೇ ಬೌಲಿಂಗ್‌ನಲ್ಲಿ ನೆಲಕ್ಕೆ ಚೆಲ್ಲಿದರು. ಪಡಿಕ್ಕಲ್ ಕೂಡ ಒಂದು ಜೀವದಾನ ಪಡೆದರು. 19ನೇ ಓವರ್‌ನಲ್ಲಿ ಸಿರಾಜ್ ಬೌಲಿಂಗ್‌ನಲ್ಲಿ ಹೆಟ್ಮೆಯರ್ ಕ್ಯಾಚ್ ಅನ್ನು ಪಡೆಯುವಲ್ಲಿ ನಾಯಕ ಫಫ್ ವಿಫಲರಾದರು.



ದಿನೇಶ್ ಕಾರ್ತಿಕ್ ಬ್ಯಾಟಿಂಗ್ ವೈಖರಿ



ಶಾಬಾಜ್ ಅಹಮದ್ – ಪಿಟಿಐ ಚಿತ್ರಗಳು

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್
3ಕ್ಕೆ169 (20 ಓವರ್‌ಗಳಲ್ಲಿ)
ಬಟ್ಲರ್ ಔಟಾಗದೆ 70 (47ಎ, 6X6), ಯಶಸ್ವಿ ಬಿ ವಿಲ್ಲಿ 4 (6ಎ), ಪಡಿಕ್ಕಲ್ ಸಿ ಕೊಹ್ಲಿ ಬಿ ಹರ್ಷಲ್ 37 (29ಎ, 4X2, 6X2), ಸಂಜು ಸಿ ಮತ್ತು ಬಿ ಹಸರಂಗಾ 8 (8ಎ, 6X1), ಹೆಟ್ಮೆಯರ್ ಔಟಾಗದೆ 42 (31ಎ, 4X4, 6X2)
ಇತರೆ 8 (ಲೆಗ್‌ಬೈ 3, ವೈಡ್ 4, ನೋಬಾಲ್ 1)
ವಿಕೆಟ್ ಪತನ: 1-6 (ಯಶಸ್ವಿ ಜೈಸ್ವಾಲ್; 1.5), 2-76 (ದೇವದತ್ತ ಪಡಿಕ್ಕಲ್; 9.6), 3-86 (ಸಂಜು ಸ್ಯಾಮ್ಸನ್; 11.4)
ಬೌಲಿಂಗ್: ಮೊಹಮ್ಮದ್ ಸಿರಾಜ್ 4-0-43-0, ಡೇವಿಡ್ ವಿಲ್ಲಿ 4-0-29-1, ಆಕಾಶದೀಪ್ 4-0-44-0, ವಣಿಂದು ಹಸರಂಗಾ 4-0-32-1, ಹರ್ಷಲ್ ಪಟೇಲ್ 4-0-18-1
(ವಿವರ ಅಪೂರ್ಣ)

ರಾಯಲ್ ಚಾಲೆಂಜರ್ಸ್ ಬೆಂಗಳೂರು
6ಕ್ಕೆ 173 (19.1 ಓವರ್)
ಡುಪ್ಲೆಸಿ ಸಿ ಬೌಲ್ಟ್ ಬಿ ಯಜುವೇಂದ್ರ 29 (20ಎ, 4X5), ಅನುಜ್ ಸಿ ಸ್ಯಾಮ್ಸನ್ ಬಿ ಸೈನಿ 26 (25ಎ, 4X4), ವಿರಾಟ್ ರನೌಟ್ (ಸ್ಯಾಮ್ಸನ್/ಯಜುವೇಂದ್ರ) 5 (6ಎ), ವಿಲ್ಲಿ ಬಿ ಯಜುವೇಂದ್ರ 0 (2ಎ), ಶೆರ್ಫೇನ್ ಸಿ ಸೈನಿ ಬಿ ಬೌಲ್ಟ್ 5 (10ಎ), ಶಾಬಾಜ್ ಬಿ ಬೌಲ್ಟ್ 45 (26ಎ, 4X4, 6X3), ಕಾರ್ತಿಕ್ ಔಟಾಗದೆ 44 (23ಎ, 4X7, 6X1), ಹರ್ಷಲ್ ಔಟಾಗದೆ 9 (4ಎ, 6X1)
ಇತರೆ (ಲೆಗ್‌ಬೈ 3, ನೋಬಾಲ್ 1, ವೈಡ್ 6) 10
ವಿಕೆಟ್ ಪತನ: 1-55 (ಫಫ್ ಡುಪ್ಲೆಸಿ, 6.6), 2-61 (ಅನುಜ್ ರಾವತ್, 7.6), 3-62 (ವಿರಾಟ್ ಕೊಹ್ಲಿ, 8.4), 4-62 (ಡೇವಿಡ್ ವಿಲ್ಲಿ, 8.5), 5-87 (ಶೆರ್ಫೇನ್ ರುದರ್‌ಫೋರ್ಡ್, 12.3), 6-154 (ಶಾಬಾಜ್ ಅಹಮದ್, 17.5)
ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-34-2, ಪ್ರಸಿದ್ಧ ಕೃಷ್ಣ 4-0-40-0, ರವಿಚಂದ್ರನ್ ಅಶ್ವಿನ್ 4-0-39-0, ಯಜುವೇಂದ್ರ ಚಾಹಲ್ 4-0-15-2, ನವದೀಪ್ ಸೈನಿ 3-0-36-1, ಯಶಸ್ವಿ ಜೈಸ್ವಾಲ್ 0.1-0-6-0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ನಾಲ್ಕು ವಿಕೆಟ್‌ಗಳ ಜಯ

ಕಣಕ್ಕಿಳಿಯಲಿದ್ದಾರೆ ಗ್ಲೆನ್ ಮ್ಯಾಕ್ಸ್‌ವೆಲ್

ಮುಂಬೈ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಏಪ್ರಿಲ್ 9ರಂದು ನಡೆಯಲಿರುವ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ.

ಆಲ್‌ರೌಂಡರ್ ಮ್ಯಾಕ್ಸ್‌ವೆಲ್ ಆರ್‌ಸಿಬಿ ಇಲ್ಲಿಯವರೆಗೆ ಆಡಿರುವ ಎರಡು ಪಂದ್ಯಗಳಲ್ಲಿ ಕಣಕ್ಕಿಳಿದಿರಲಿಲ್ಲ. ಎರಡು ದಿನಗಳ ಹಿಂದೆ ತಂಡಕ್ಕೆ ಮರಳಿರುವ ಅವರು ಕಡ್ಡಾಯ ಕ್ವಾರಂಟೈನ್‌ನಲ್ಲಿರುವುದರಿಂದ ಮಂಗಳವಾರ ರಾಜಸ್ಥಾನ ಎದುರಿನ ಪಂದ್ಯದಲ್ಲಿ ಆಡಲಿಲ್ಲ.



ಗ್ಲೆನ್ ಮ್ಯಾಕ್ಸ್‌ವೆಲ್

‘ಇದೇ 9ರಂದು ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯಕ್ಕೆ ಮ್ಯಾಕ್ಸ್‌ವೆಲ್ ಲಭ್ಯರಾಗಿದ್ದಾರೆ. ಅವರನ್ನು ಕಣಕ್ಕಿಳಿಸುವ ಬಗ್ಗೆ ಯೋಜನೆ ರೂಪಿಸಿಕೊಂಡಿದ್ದೇವೆ’ ಎಂದು ತಂಡದ ಕೋಚ್ ಮೈಕ್ ಹೆಸನ್ ಟ್ವಿಟರ್ ವಿಡಿಯೊದಲ್ಲಿ ಹೇಳಿದ್ದಾರೆ.

ಜೋಶ್ ಅಲಭ್ಯ: ಆಸ್ಟ್ರೇಲಿಯಾ ವೇಗಿ ಜೋಶ್ ಹ್ಯಾಜಲ್‌ವುಡ್ ಅವರು ಇನ್ನೂವರೆಗೂ ಆರ್‌ಸಿಬಿ ತಂಡವನ್ನು ಸೇರಿಕೊಂಡಿಲ್ಲ.

ಪಾಕಿಸ್ತಾನದಲ್ಲಿ ನಡೆದ ಏಕದಿನ ಸರಣಿಯಲ್ಲಿ ಜೋಶ್ ಆಡಿದ್ದರು.

‘ಇನ್ನೊಂದೆರಡು ದಿನಗಳಲ್ಲಿ ಜೋಶ್ ಆರ್‌ಸಿಬಿ ಸೇರಿಕೊಳ್ಳುವರು. ಪಾಕಿಸ್ತಾನ ಸರಣಿಯ ನಂತರ ತಮ್ಮ ವೈಯಕ್ತಿಕ ಕಾರಣಗಳಿಗಾಗಿ ಅವರು ಬಿಡುವು ಪಡೆದಿದ್ದರು’ ಎಂದು ಐಪಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಯಕ್ಕೆ ಹಾತೊರೆದಿರುವ ಮುಂಬೈ

ಕೋಲ್ಕತ್ತ ಸವಾಲು: ಬೂಮ್ರಾ– ಉಮೇಶ್ ಪೈಪೋಟಿ

ಪುಣೆ (ಪಿಟಿಐ): ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿರುವ ಮುಂಬೈ ಇಂಡಿಯನ್ಸ್ ತಂಡವು ಬುಧವಾರ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕಣಕ್ಕಿಳಿಯಲಿದೆ.

ತನ್ನ ತವರು ಮುಂಬೈನ ಅಂಗಳಗಳಲ್ಲಿಯೇ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಜಸ್ಥಾನ ರಾಯಲ್ಸ್ ಎದುರು ರೋಹಿತ್ ಶರ್ಮಾ ಬಳಗವು ಪರಾಭವಗೊಂಡಿತ್ತು. ಇದೀಗ ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಮೈದಾನದಲ್ಲಿ ತನ್ನ ಅದೃಷ್ಟವನ್ನು ಪರೀಕ್ಷೆಗೊಡ್ಡಲಿದೆ. ಇಬ್ಬರು ಮುಂಬೈಕರ್ ಇಲ್ಲಿ ಮುಖಾಮುಖಿಯಾಗುತ್ತಿರುವುದು ವಿಶೇಷ. ಮುಂಬೈ ತಂಡದ ನಾಯಕ ರೋಹಿತ್ ಮತ್ತು ಕೋಲ್ಕತ್ತ ಬಳಗದ ನಾಯಕ ಶ್ರೇಯಸ್ ಅಯ್ಯರ್ ಇಬ್ಬರೂ ಮುಂಬೈನವರಾಗಿದ್ದಾರೆ.

ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳಲ್ಲಿ ಅನುಭವಿಗಳು ಮತ್ತು ಪ್ರತಿಭಾವಂತ ಯುವ ಆಟಗಾರರಿದ್ದರೂ ಮುಂಬೈ ತಂಡವು ಗೆಲುವಿನ ಸಾಧನೆ ಮಾಡಲು ಸಾಧ್ಯವಾಗುತ್ತಿಲ್ಲ. ಇಶಾನ್ ಕಿಶನ್ ಒಬ್ಬರೇ ಎರಡೂ ಪಂದ್ಯಗಳಲ್ಲಿ ಅರ್ಧಶತಕ ಗಳಿಸಿದ್ದಾರೆ. ಆದರೆ ರೋಹಿತ್ ಸೇರಿದಂತೆ ಉಳಿದ ಬ್ಯಾಟರ್‌ಗಳು ನಿರೀಕ್ಷೆಗೆ ತಕ್ಕಂತೆ ಆಡಿಲ್ಲ. ಸೂರ್ಯಕುಮಾರ್ ಯಾದವ್ ಕಣಕ್ಕಿಳಿಯಲು ಫಿಟ್ ಆದರೆ ತಂಡದ ಬಲ ಹೆಚ್ಚಬಹುದು.

ಬೌಲಿಂಗ್‌ನಲ್ಲಿಯೂ ಎರಡನೇ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ ಮತ್ತು ಟೈಮಲ್ ಮಿಲ್ಸ್ ಮಿಂಚಿದ್ದರು. ಬಾಸಿಲ್ ಥಂಪಿ ಮತ್ತು ಮುರುಗನ್ ಅಶ್ವಿನ್ ದುಬಾರಿಯಾಗಿದ್ದರು. ಅದರಿಂದಾಗಿ ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳೊಂದಿಗೆ ಮುಂಬೈ ಕಣಕ್ಕಿಳಿಯುವ ಸಾಧ್ಯತೆ ಇದೆ.

ಆದರೆ ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಗೆಲುವಿನ ರುಚಿ ಕಂಡಿರುವ ಕೋಲ್ಕತ್ತ ತಂಡವನ್ನು ಎದುರಿಸಲು ರೋಹಿತ್ ಬಳಗವು ಸಂಘಟಿತ ಹೋರಾಟ ಮಾಡುವ ಅನಿವಾರ್ಯತೆ ಇದೆ. ತಂಡದ ಮಧ್ಯಮವೇಗಿ ಉಮೇಶ್ ಯಾದವ್ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಒಟ್ಟು ಎಂಟು ವಿಕೆಟ್‌ಗಳನ್ನು ಗಳಿಸಿರುವ ಅವರು ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ತಮ್ಮ ಲಯಕ್ಕೆ ಮರಳಿರುವುದು ಕೋಲ್ಕತ್ತ ತಂಡಕ್ಕೆ ನೂರಾನೆ ಬಲ ತುಂಬಿದಂತಾಗಿದೆ. ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ರಸೆಲ್ ಸಿಕ್ಸರ್‌ಗಳ ಮಳೆಗರೆದಿದ್ದರು. ಆದರೆ, ಅಗ್ರಕ್ರಮಾಂಕದ ಜೋಡಿ ಅಜಿಂಕ್ಯ ರಹಾನೆ ಮತ್ತು ವೆಂಕಟೇಶ್ ಅಯ್ಯರ್ ಇನ್ನೂ ಲಯ ಕಂಡುಕೊಳ್ಳಬೇಕಿದೆ.



ಜಸ್‌ಪ್ರೀತ್ ಬೂಮ್ರಾ



ಉಮೇಶ್ ಯಾದವ್

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	8
ಯಜುವೇಂದ್ರ	ರಾಜಸ್ಥಾನ	7
ಆವೇಶ್ ಖಾನ್	ಲಖನೌ	7

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜಾಸ್ ಬಟ್ಲರ್	ರಾಜಸ್ಥಾನ	205
ಇಶಾನ್	ಮುಂಬೈ	135
ಡುಪ್ಲೆಸಿ	ಬೆಂಗಳೂರು	122

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	3	2	1	0	0	4
ಕೋಲ್ಕತ್ತ	3	2	1	0	0	4
ಗುಜರಾತ್	2	2	0	0	0	4
ಪಂಜಾಬ್	3	2	1	0	0	4
ಲಖನೌ	3	2	1	0	0	4
ಬೆಂಗಳೂರು	3	2	1	0	0	4
ಡೆಲ್ಲಿ	2	1	1	0	0	2
ಮುಂಬೈ	2	0	2	0	0	0
ಚೆನ್ನೈ	3	0	3	0	0	0
ಹೈದರಾಬಾದ್	2	0	2	0	0	0

*ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಬಹುಮತ ಕಳೆದುಕೊಂಡ ರಾಜಪಕ್ಸ

ಶ್ರೀಲಂಕಾದ ಆಡಳಿತಾರೂಢ ಮೈತ್ರಿಕೂಟ ತೊರೆದ ಹಲವು ಸಂಸದರು: ಹಣಕಾಸು ಸಚಿವ ಒಂದೇ ದಿನಕ್ಕೆ ರಾಜೀನಾಮೆ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಸಂಸತ್ತಿನಲ್ಲಿ ಮಂಗಳವಾರ ಬಹುಮತ ಕಳೆದುಕೊಂಡಿದ್ದಾರೆ. ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ಕಂಗಾಲಾಗಿರುವ ದೇಶದಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಆಡಳಿತಾರೂಢ ಮೈತ್ರಿಕೂಟದ ಹಲವು ಪಕ್ಷಗಳು ಮೈತ್ರಿಕೂಟ ತೊರೆದಿವೆ. ರಾಜಪಕ್ಸ ಅವರು ರಾಜೀನಾಮೆ ಕೊಡಬೇಕು ಎಂದು ಮಿತ್ರ ಪಕ್ಷಗಳ ನಾಯಕರು ಕೂಡ ಆಗ್ರಹಿಸಿದ್ದಾರೆ.

ಒಂದು ಕಾಲದಲ್ಲಿ ಭಾರಿ ಪ್ರಭಾವಿಯಾಗಿದ್ದ ಆಡಳಿತಾರೂಢ ಮೈತ್ರಿಕೂಟವು, ಪಕ್ಷಾಂತರಗಳಿಂದಾಗಿ ತತ್ತರಿಸಿದೆ. ಹಣಕಾಸು ಸಚಿವರಾಗಿ ಸೋಮವಾರ ನೇಮಕವಾಗಿದ್ದ ಅಲಿ ಸಬ್ರಿ ಅವರು ಮಂಗಳವಾರ ರಾಜೀನಾಮೆ ನೀಡಿದ್ದಾರೆ.

ಸರ್ಕಾರದ ಉನ್ನತ ಹುದ್ದೆಗಳಲ್ಲಿ ಇರುವ ಹಲವು ವ್ಯಕ್ತಿಗಳ ಮನೆಗಳಿಗೆ ನುಗ್ಗಲು ಜನರ ಗುಂಪುಗಳು ಯತ್ನಿಸಿವೆ. ವಾರಾಂತ್ಯದಲ್ಲಿ ಆರಂಭಗೊಂಡ ಪ್ರತಿಭಟನೆ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಲೇ ಇದೆ.

‘ಈಗ ನಾವು ಕಾರ್ಯಪ್ರವೃತ್ತರಾಗದೇ ಇದ್ದರೆ ದೇಶದಲ್ಲಿ ರಕ್ತದ ಹೊಳೆ ಹರಿಯಲಿದೆ’ ಎಂದು ಸಂಸದ ವಿಜಯದಾಸ ರಾಜಪಕ್ಸೆ ಹೇಳಿದ್ದಾರೆ. ರಾಜಪಕ್ಸ ಸರ್ಕಾರಕ್ಕೆ ಅವರು ಈ ಹಿಂದೆ ಬೆಂಬಲ ನೀಡಿದ್ದರು. ಈಗ, ರಾಜಪಕ್ಸ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸುವವರ ಜತೆಗೆ ಇದ್ದಾರೆ. ‘ನಾವು ಪಕ್ಷ ರಾಜಕಾರಣವನ್ನು ಬದಿಗಿಟ್ಟು ಮಧ್ಯಂತರ ಸರ್ಕಾರ ರಚನೆಯನ್ನು ಖಾತರಿಪಡಿಸಿಕೊಳ್ಳಬೇಕು’ ಎಂದಿದ್ದಾರೆ.

ಸಂಸತ್ತಿನ ಅಧಿವೇಶನವು ಮಂಗಳವಾರ ಆರಂಭವಾಗಿದೆ. ರಾಜಪಕ್ಸೆ ಅವರ ಶ್ರೀಲಂಕಾ ಪೊದುಜನ ಪಾರ್ಟಿಯ (ಎಸ್‌ಎಲ್‌ಪಿಪಿ) 16 ಸಂಸದರೂ ಸೇರಿ ಮಿತ್ರ ಪಕ್ಷಗಳ ಹಲವು ಸಂಸದರು ಸರ್ಕಾರಕ್ಕೆ ನೀಡಿದ್ದ ಬೆಂಬಲ ವಾಪಸ್ ಪಡೆದಿದ್ದಾರೆ. 40ಕ್ಕೂ ಹೆಚ್ಚು ಸಂಸದರು ಆಡಳಿತರೂಢ ಮೈತ್ರಿಕೂಟದಿಂದ ಹೊರನಡೆದಿದ್ದಾರೆ. ಹಾಗಾಗಿ, ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಲಿವೆಯೇ ಎಂಬುದು ಸ್ಪಷ್ಟವಾಗಿಲ್ಲ. ಅವಿಶ್ವಾಸ ನಿರ್ಣಯ ಮಂಡನೆಯಾಗಿ, ಅದಕ್ಕೆ ಗೆಲುವಾದರೆ ರಾಜಪಕ್ಸ ನೇತೃತ್ವದ ಸರ್ಕಾರ ರಾಜೀನಾಮೆ ನೀಡುವುದು ಅನಿವಾರ್ಯವಾಗಲಿದೆ.

ಮಾಜಿ ಸಚಿವ ನಿಮಲ್ ಲಾನ್ಜಾ ಅವರು ರಾಜಪಕ್ಸ ಅವರಿಂದ ದೂರ ಸರಿದಿದ್ದಾರೆ. ಆಡಳಿತ ಪಕ್ಷಕ್ಕೆ ಈಗ ಜನಾದೇಶ ನಷ್ಟವಾಗಿದೆ ಎಂದು ಅವರು ಹೇಳಿದ್ದಾರೆ. ಅಧ್ಯಕ್ಷ ರಾಜಪಕ್ಸೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸುವವರ ಜತೆಗೆ ಲಾನ್ಜಾ ಅವರೂ ಸೇರಿಕೊಂಡಿದ್ದಾರೆ. ‘ಪ್ರತಿಭಟನಕಾರರ ಜತೆಗೆ ಎಲ್ಲರೂ ಸೇರಿಕೊಳ್ಳಿ ಎಂದು ವಿನಮ್ರವಾಗಿ ಬೇಡಿಕೊಳ್ಳುತ್ತೇನೆ’ ಎಂದು ಅವರು ಸಂಸತ್ತಿನಲ್ಲಿ ಹೇಳಿದ್ದಾರೆ.

ಕಳೆದ ಸಂಸತ್ ಚುನಾವಣೆಯಲ್ಲಿ ಗೊಟಬಯ ನೇತೃತ್ವದ ಮೈತ್ರಿಕೂಟವು 225 ಕ್ಷೇತ್ರಗಳ ಪೈಕಿ 145 ಸ್ಥಾನಗಳನ್ನು ಗೆದ್ದಿತ್ತು. ರಾಜಪಕ್ಸೆ ಅವರ 11 ಮಿತ್ರ ಪಕ್ಷಗಳು ಒಟ್ಟಾಗಿ 30 ಸ್ಥಾನಗಳನ್ನು ಹೊಂದಿವೆ. ಈ ಎಲ್ಲ ಸಂಸದರು ಪ್ರತ್ಯೇಕವಾಗಿ ಇರುವ ಸುಳಿವು ನೀಡಿದ್ದಾರೆ.

‘ಸರ್ಕಾರಕ್ಕೆ ಬಹುಮತ ಇಲ್ಲ ಎಂದಾದರೆ, ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಬಹುದು. ಆದರೆ, ಅದು ಸಂಸದೀಯ ಪ್ರಕ್ರಿಯೆಯನ್ನು ಹಾದು ಹೋಗಬೇಕು. ಹಾಗಾಗಿ, ಅವಿಶ್ವಾಸ ನಿರ್ಣಯ ತಕ್ಷಣಕ್ಕೆ ಮಂಡನೆಯಾಗುವ ಸಾಧ್ಯತೆ ಇಲ್ಲ’ ಎಂದು ಸಂವಿಧಾನ ತಜ್ಞ, ವಕೀಲ ಲೂವಿ ನಿರಂಜನ್ ಗಣೇಶನಾಥನ್ ಹೇಳಿದ್ದಾರೆ.

ಅವಿಶ್ವಾಸ ನಿರ್ಣಯ ಅಂಗೀಕಾರವಾದರೆ, ಹೊಸ ಪ್ರಧಾನಿಯನ್ನು ಅಧ್ಯಕ್ಷರು ನೇಮಿಸಬಹುದು. ಸರ್ಕಾರಕ್ಕೆ ಬಹುಮತ ನಷ್ಟವಾದರೆ, ಸಂಸತನ್ನು ವಿಸರ್ಜಿಸಿ, ಅವಧಿಗೆ ಮುನ್ನವೇ ಚುನಾವಣೆಗೆ ಹೋಗುವ ನಿರ್ಣಯವನ್ನು ವಿರೋಧ ಪಕ್ಷಗಳು ಮಂಡಿಸಬಹುದು ಎಂದೂ ಹೇಳಿದ್ದಾರೆ.

ನಿಗಾ: ಶ್ರೀಲಂಕಾದ ಪರಿಸ್ಥಿತಿಯ ಮೇಲೆ ನಿಕಟ ನಿಗಾ ಇರಿಸಲಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆಗಾಗಿ ಶ್ರೀಲಂಕಾ ಈಗಾಗಲೇ ಹಲವು ಬಾರಿ ತರಾಟೆಗೆ ಒಳಗಾಗಿದೆ ಎಂದು ವಿಶ್ವ ಸಂಸ್ಥೆಯ ಮಾನವ ಹಕ್ಕುಗಳ ಸಮಿತಿಯು ಹೇಳಿದೆ.

ತುರ್ತು ಪರಿಸ್ಥಿತಿ ರದ್ದು

ಕೊಲಂಬೊ(ರಾಯಿಟರ್ಸ್): ತೀವ್ರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ದೇಶವ್ಯಾಪಿ ಪ್ರತಿಭಟನೆಗಳು ನಡೆಯುತ್ತಿರುವ ಮಧ್ಯೆಯೇ, ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ತುರ್ತು ಪರಿಸ್ಥಿತಿಯನ್ನು ರದ್ದುಪಡಿಸಿ ಮಂಗಳವಾರ ಮಧ್ಯರಾತ್ರಿ ಅಧಿಸೂಚನೆ ಹೊರಡಿಸಿದ್ದಾರೆ. ಏಪ್ರಿಲ್ 1ರಿಂದ ಅನ್ವಯವಾಗುವಂತೆ ತುರ್ತು ಪರಿಸ್ಥಿತಿ ಜಾರಿಗೊಳಿಸಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು.



ಶ್ರೀಲಂಕಾದ ಸಂಸತ್ ಭವನದ ಮುಂದೆ ಜನರು ಸೋಮವಾರ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ದೇಶದಾದ್ಯಂತ ಆಕ್ರೋಶ

ಶ್ರೀಲಂಕಾದಾದ್ಯಂತ ಪ್ರತಿಭಟನೆ ಮಂಗಳವಾರವೂ ನಡೆದಿದೆ. ಕೊಲಂಬೊದಲ್ಲಿ ಭಾರಿ ರ‍್ಯಾಲಿ ನಡೆಸಲಾಗಿದೆ. ರಾಜಪಕ್ಸೆ ಮತ್ತು ಅಧಿಕಾರ ಸ್ಥಾನದಲ್ಲಿರುವ ಅವರ ಕುಟುಂಬಸ್ಥರು ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದಾರೆ. ರಾಜಪಕ್ಸ ಅವರ ಅಣ್ಣ ಮಹಿಂದ ರಾಜಪಕ್ಸೆ ಪ್ರಧಾನಿ ಹುದ್ದೆಯಲ್ಲಿದ್ದಾರೆ.

‘ಬಹಳ ಜನಕ್ಕೆ ಹೊತ್ತಿನ ಊಟವೂ ಸಿಗುತ್ತಿಲ್ಲ. ಅಡುಗೆ ಅನಿಲ, ಹಾಲಿನ ಪುಡಿ ಹಾಗೂ ಎಲ್ಲಾ ವಸ್ತುಗಳಿಗೂ ಸರತಿ ಸಾಲಿನಲ್ಲಿ ನಿಲ್ಲಬೇಕು. ಗೊಟಬಯ ಅವರನ್ನು ಪದಚ್ಯುತಗೊಳಿಸಬೇಕು ಎಂದು ಸಣ್ಣ ಮಕ್ಕಳು ಕೂಡ ಹೇಳುತ್ತಿದ್ದಾರೆ’ ಎಂದು ಶಾಲಾ ವಾಹನದ ಚಾಲಕ ಉಪಲಿ ಕರುಣತಿಲಕೆ ಹೇಳಿದ್ದಾರೆ.

ಕಲಾಪದ ವಿಡಿಯೊ ಸಲ್ಲಿಕೆಗೆ ಪಾಕ್ ಸುಪ್ರೀಂ ಸೂಚನೆ

ಇಸ್ಲಾಮಾಬಾದ್ (ಎಎಫ್‌ಪಿ): ಅವಿಶ್ವಾಸ ನಿರ್ಣಯ ಮಂಡನೆಯಾದ ದಿನದ ಸಂಸತ್ ಕಲಾಪದ ವಿಡಿಯೊವನ್ನು ಒದಗಿಸುವಂತೆ ಪಾಕಿಸ್ತಾನದ ಸುಪ್ರೀಂ ಕೋರ್ಟ್ ಸೂಚಿಸಿದೆ. ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರು ಸಂಸತ್ತನ್ನು ವಿಸರ್ಜಿಸಿ, ಅವಧಿಗೆ ಮುನ್ನವೇ ಚುನಾವಣೆ ನಡೆಸಲು ಮಾಡಿರುವ ಶಿಫಾರಸಿನ ಸಾಂವಿಧಾನಿಕ ಸಿಂಧುತ್ವದ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

ವಿರೋಧ ಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ಸ್ವೀಕರಿಸಲು ಉಪಸ್ಪೀಕರ್ ಖಾಸಿಂ ಸೂರಿ ನಿರಾಕರಿಸಿದ್ದು ಸಂವಿಧಾನದ ಉಲ್ಲಂಘನೆಯೇ ಎಂಬುದನ್ನು ಕೋರ್ಟ್ ತೀರ್ಮಾನಿಸಬೇಕಿದೆ.

ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಿದ್ದರೆ ಇಮ್ರಾನ್ ಅವರು ಸೋಲುವುದು ನಿಚ್ಚಳವಾಗಿತ್ತು. ಆದರೆ, ಉಪಸ್ಪೀಕರ್ ನಡೆಯಿಂದಾಗಿ ಸಂಸತ್ತು ವಿಸರ್ಜನೆಗೆ ಶಿಫಾರಸು ಮಾಡುವ ಅವಕಾಶ ಇಮ್ರಾನ್‌ಗೆ ಸಿಕ್ಕಿತು.

ಅಧ್ಯಕ್ಷ ಆರಿಫ್ ಅಲ್ವಿ ಅವರು ವಿರೋಧ ಪಕ್ಷಗಳ ಮೇಲಿನ ಒತ್ತಡವನ್ನು ಹೆಚ್ಚಿಸಿದ್ದಾರೆ. ಉಸ್ತುವಾರಿ ಪ್ರಧಾನಿ ನೇಮಕಕ್ಕೆ ಹೆಸರು ಸೂಚಿಸುವಂತೆ ಪ್ರಧಾನಿ ಮತ್ತು ವಿರೋಧ ಪಕ್ಷದ ನಾಯಕರಿಗೆ ಅಧ್ಯಕ್ಷರು ಸೂಚಿಸಿದ್ದರು. ಆದರೆ, ಈ ಪ್ರಕ್ರಿಯೆಯಲ್ಲಿ ಭಾಗಿಯಾಗುವುದಿಲ್ಲ ಎಂದು ವಿರೋಧ ಪಕ್ಷದ ನಾಯಕ ಶಹಬಾಝ್ ಶರೀಫ್ ಹೇಳಿದ್ದಾರೆ. ಹೆಸರು ಸೂಚಿಸದೇ ಇದ್ದರೆ, ವಿರೋಧ ಪಕ್ಷದ ಭಾಗವಹಿಸುವಿಕೆ ಇಲ್ಲದೆಯೇ ಪ್ರಕ್ರಿಯೆ ನಡೆಯಲಿದೆ ಎಂದು ಅಧ್ಯಕ್ಷರು ಹೇಳಿದ್ದಾರೆ.

ಮಾಜಿ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹಮದ್ ಅವರ ಹೆಸರನ್ನು ಇಮ್ರಾನ್ ಈಗಾಗಲೇ ಸೂಚಿಸಿದ್ದಾರೆ.

ಕೋರ್ಟ್ ಯಾವಾಗ ತೀರ್ಪು ನೀಡಲಿದೆ ಎಂಬುದು ಸ್ಪಷ್ಟವಿಲ್ಲ. ಅದಲ್ಲದೆ, ಕೋರ್ಟ್ ತೀರ್ಪನ್ನು ಇಮ್ರಾನ್ ಅವರು ಒಪ್ಪಿಕೊಳ್ಳಲಿದ್ದಾರೆಯೇ ಎಂಬುದೂ ಸ್ಪಷ್ಟವಿಲ್ಲ. ಆದರೆ, ಸಂಸತ್ತು ವಿಸರ್ಜನೆಯ ವಿಚಾರ ಈ ಹಿಂದೆಯೂ ಕೋರ್ಟ್ ಮೆಟ್ಟಿಲು ಏರಿತ್ತು.

1988ರಲ್ಲಿ ಆಗಿನ ಅಧ್ಯಕ್ಷ ಜನರಲ್ ಜಿಯಾ ಉಲ್ ಹಖ್ ಅವರು ಸಂಸತ್ತನ್ನು ವಿಸರ್ಜಿಸಿದ್ದನ್ನು ಪ್ರಶ್ನಿಸಿ ಮುಹಮ್ಮದ್ ಖಾನ್ ಜುನೇಜೊ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿದ್ದರು. ಸಂಸತ್ತು ವಿಸರ್ಜನೆ ಅಸಾಂವಿಧಾನಿಕ. ಆದರೆ, ಚುನಾವಣೆ ಘೋಷಣೆ ಆಗಿರುವುದರಿಂದ ಚುನಾವಣೆಗೆ ಹೋಗುವುದೇ ಉತ್ತಮ ಎಂದು ಕೋರ್ಟ್ ಹೇಳಿತ್ತು.

1993ರಲ್ಲಿ ಆಗಿನ ಅಧ್ಯಕ್ಷ ಗುಲಾಂ ಇಸಾಕ್ ಖಾನ್ ಅವರು ಸಂಸತ್ತನ್ನು ವಿಸರ್ಜನೆ ಮಾಡಿದ್ದು ಅಸಾಂವಿಧಾನಿಕ ಎಂದು ಕೋರ್ಟ್ ಹೇಳಿತ್ತು. ನವಾಜ್ ಶರೀಫ್ ಅವರ ಸರ್ಕಾರ ಮರುಸ್ಥಾಪನೆ ಆಗಿತ್ತು. ಆದರೆ, ಎರಡೇ ತಿಂಗಳಲ್ಲಿ ಸಂಸತ್ತನ್ನು ಮತ್ತೆ ವಿಸರ್ಜಿಸಲಾಗಿತ್ತು.

ಪಾಕಿಸ್ತಾನದ ಸುಪ್ರೀಂ ಕೋರ್ಟ್ ಸ್ವತಂತ್ರ ಎಂಬಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ, ನಾಗರಿಕ ಮತ್ತು ಸೇನಾ ಸರ್ಕಾರಗಳು ಕೋರ್ಟ್‌ನ ಪೀಠಗಳನ್ನು ತಮಗೆ ಬೇಕಾದಂತೆ ಬಳಸಿಕೊಂಡ ಉದಾಹರಣೆ ಇತಿಹಾಸದ ಉದ್ದಕ್ಕೂ ದೊರೆಯುತ್ತದೆ ಎಂದು ಮಾನವ ಹಕ್ಕುಗಳ ಕಾರ್ಯಕರ್ತರು ಹೇಳುತ್ತಾರೆ.

3 ತಿಂಗಳಲ್ಲಿ ಚುನಾವಣೆಗೆ ಆಯೋಗ ಸಿದ್ಧ

ಅಗತ್ಯ ಎನಿಸಿದರೆ ಮೂರು ತಿಂಗಳಲ್ಲಿ ಚುನಾವಣೆ ನಡೆಸುವ ಹೊಣೆಗಾರಿಕೆ ನಿಭಾಯಿಸುವುದಾಗಿ ಪಾಕಿಸ್ತಾನದ ಚುನಾವಣಾ ಆಯೋಗ ಹೇಳಿದೆ.

‘ಸಂವಿಧಾನ ಮತ್ತು ಕಾನೂನು ಅಡಿಯಲ್ಲಿನ ಜವಾಬ್ದಾರಿ ನಿರ್ವಹಿಸಲು ಸಿದ್ಧ. ಸಾರ್ವತ್ರಿಕ ಚುನಾವಣೆಯ ಸಿದ್ಧತೆಯನ್ನು ಸಭೆ ನಡೆಸಿ ಪರಿಶೀಲಿಸಲಾಗುವುದು’ ಎಂದು ಚುನಾವಣಾ ಆಯೋಗದ ವಕ್ತಾರರು ಹೇಳಿದ್ದಾರೆ.

ಮೂರು ತಿಂಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ ಎಂದು ವರದಿಯಾಗಿತ್ತು. ಆದರೆ, ಈ ವರದಿಯಲ್ಲಿ ಸತ್ಯಾಂಶ ಇಲ್ಲ ಎಂದು ಆಯೋಗವು ಸ್ಪಷ್ಟಪಡಿಸಿದೆ.

ದೇಶದ್ರೋಹ ಎಸಗಿಲ್ಲ: ಶಹಬಾಝ್

ವಿರೋಧ ಪಕ್ಷದ ಯಾವುದೇ ಮುಖಂಡ ದೇಶದ್ರೋಹದ ಕೆಲಸ ಮಾಡಿಲ್ಲ ಎಂದು ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಅಧ್ಯಕ್ಷ ಮತ್ತು ವಿರೋಧ ಪಕ್ಷದ ನಾಯಕ ಶಹಬಾಝ್ ಶರೀಫ್ ಹೇಳಿದ್ದಾರೆ. ವಿರೋಧ ಪಕ್ಷಗಳು ವಿದೇಶಿ ಶಕ್ತಿಗಳ ಜತೆಗೂಡಿ ತಮ್ಮ ಸರ್ಕಾರ ಉರುಳಿಸಲು ಸಂಚು ನಡೆಸಿವೆ ಎಂದು ಇಮ್ರಾನ್ ಆರೋಪಿಸಿದ್ದರು.

‘ನಾವು ವಿದೇಶಿ ಶಕ್ತಿಗಳನ್ನು ಆಹ್ವಾನಿಸಿಲ್ಲ. ವಿದೇಶಿ ಶಕ್ತಿಗಳನ್ನು ಭಾಗಿಯಾಗಿಸಿ ಯಾವುದೇ ಸಂಚು ರೂಪಿಸಿಲ್ಲ. ಈ ವಿಷಯದ ಬಗ್ಗೆ ಸೇನಾ ಮುಖ್ಯಸ್ಥರು ಮತ್ತು ಗುಪ್ತಚರ ಸಂಸ್ಥೆ ಐಎಸ್‌ಐನ ಮಹಾ ನಿರ್ದೇಶಕರು ಗಮನ ಹರಿಸಬೇಕು. ನಾವು ಯಾವುದೇ ರೀತಿಯಲ್ಲಿ ದೇಶದ್ರೋಹ ಎಸಗಿದ್ದರೆ ಅದರ ಪುರಾವೆಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು’ ಎಂದು ಶಹಬಾಝ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಣ್ವಸ್ತ್ರ ದಾಳಿಯ ಬೆದರಿಕೆ ಹಾಕಿದ ಕಿಮ್ ತಂಗಿ

ಸೋಲ್: ದಕ್ಷಿಣ ಕೊರಿಯಾ ಆಕ್ರಮಣಕ್ಕೆ ಮುಂದಾದರೆ ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಲು ಹಿಂಜರಿಯುವುದಿಲ್ಲ ಎಂದು ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರ ಸಹೋದರಿ ಕಿಮ್ ಯೊ ಜಾಂಗ್ ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ ಉತ್ತರ ಕೊರಿಯಾ ಯುದ್ಧವನ್ನು ವಿರೋಧಿಸುತ್ತದೆ ಎಂದೂ ಹೇಳಿದ್ದಾರೆ.

ಉತ್ತರ ಕೊರಿಯಾ ಸರ್ಕಾರದಲ್ಲಿ ಕಿಮ್ ಯೊ ಜಾಂಗ್ ಪ್ರಮುಖ ಅಧಿಕಾರಿಯಾಗಿದ್ದಾರೆ. 'ದಕ್ಷಿಣ ಕೊರಿಯಾದ ರಕ್ಷಣಾ ಸಚಿವರು ಉತ್ತರ ಕೊರಿಯಾ ಮೇಲೆ ಆಕ್ರಮಣ ನಡೆಸುವ ಬಗ್ಗೆ ಇತ್ತೀಚೆಗೆ ಚರ್ಚಿಸಿರುವ ಬಗ್ಗೆ ಪ್ರಸ್ತಾಪಿಸಿರುವ ಜಾಂಗ್, ಅದೊಂದು 'ಬಹಳ ದೊಡ್ಡ ತಪ್ಪು' ನಿರ್ಧಾರ ಎಂದು ಹೇಳಿರುವುದಾಗಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

ದೇಶದ ಸೇನಾ ಬಲದ ಕುರಿತು ಈಚೆಗೆ ಮಾತನಾಡಿದ್ದ ದಕ್ಷಿಣ ಕೊರಿಯಾದ ರಕ್ಷಣಾ ಸಚಿವ ಸುಹ್ ವುಕ್, 'ಉತ್ತರ ಕೊರಿಯಾದ ಯಾವುದೇ ಭಾಗದ ಗುರಿಯನ್ನು ನಿಖರವಾಗಿ ಮತ್ತು ಕ್ಷಿಪ್ರಗತಿಯಲ್ಲಿ ತಲುಪಬಹುದಾದ ಸಮರ್ಥ ಮತ್ತು ಅಭಿವೃದ್ಧಿ ಪಡಿಸಿದ ಹಲವು ಕ್ಷಿಪಣಿಗಳು ನಮ್ಮಲ್ಲಿವೆ' ಎಂದಿದ್ದರು.

ಭಾರತಕ್ಕೆ ಬ್ರಿಟನ್ ಪ್ರಧಾನಿ ಭೇಟಿ

ಲಂಡನ್(ಪಿಟಿಐ): ಭಾರತ–ಇಂಗ್ಲೆಡ್ ನಡುವಿನ ದ್ವಿಪಕ್ಷೀಯ ಒಪ್ಪಂದವನ್ನು ಬಲಪಡಿಸಲು ಹಾಗೂ ಉಭಯ ದೇಶಗಳ ನಡುವೆ ನಡೆಯುತ್ತಿರುವ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ಹಿನ್ನೆಲೆಯಲ್ಲಿ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಏಪ್ರಿಲ್ 22ರಂದು ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಜಾನ್ಸನ್ ಅವರಿಗೆ ಕೋವಿಡ್ ತಗಲಿದ್ದ ಕಾರಣ ಈ ಹಿಂದೆ ನಿಗದಿಯಾಗಿದ್ದ ಭಾರತದ ಪ್ರವಾಸ ರದ್ದಾಗಿತ್ತು. ಕಳೆದ ತಿಂಗಳು ಭಾರತ ಪ್ರವಾಸವನ್ನು ಬ್ರಿಟನ್ ಪ್ರಧಾನಿ ಕಚೇರಿ ದೃಢೀಕರಿಸದಿದ್ದರೂ, ಮೋದಿ–ಜಾನ್ಸನ್ ಅವರು ದೂರವಾಣಿ ಮೂಲಕ ಸಭೆ ನಡೆಸುವ ಬಗ್ಗೆ ಚರ್ಚಿಸಿದ್ದರು.

ಅಮೆರಿಕ ಕೈವಾಡ: ಇಮ್ರಾನ್ ಹೇಳಿಕೆ ಅಲ್ಲಗಳೆದ ಸೇನೆ

ಇಸ್ಲಾಮಾಬಾದ್ (ಎಎಫ್‌ಪಿ): ಪಾಕಿಸ್ತಾನದ ಸರ್ಕಾರವನ್ನು ಉರುಳಿಸುವಲ್ಲಿ ಅಮೆರಿಕದ ಕೈವಾಡವಿದೆ ಎಂದು ಪ್ರಧಾನಿ ಇಮ್ರಾನ್ ಖಾನ್ ನೀಡಿದ ಹೇಳಿಕೆಯನ್ನು ಸೇನೆಯು ಅಲ್ಲಗಳೆದಿದೆ. ದೇಶದ ಆಂತರಿಕ ವಿಚಾರಗಳಲ್ಲಿ ಅಮೆರಿಕ ಹಸ್ತಕ್ಷೇಪ ಮಾಡಿದೆ ಎಂಬುದಕ್ಕೆ ಪುರಾವೆಗಳಿಲ್ಲ ಎಂದು ಸೇನೆ ಸ್ಪಷ್ಟಪಡಿಸಿದೆ.

ಮಾರ್ಚ್ 27ರಂದು ರಾಷ್ಟ್ರೀಯ ಭದ್ರತಾ ಸಮಿತಿಯ (ಎನ್‌ಎಸ್‌ಸಿ) ಸಭೆ ನಡೆಸಿದ್ದ ಇಮ್ರಾನ್ ಖಾನ್, ಸರ್ಕಾರವನ್ನು ಉರುಳಿಸುವ ಬೆದರಿಕೆ ಪತ್ರವೊಂದರ ಬಗ್ಗೆ ಚರ್ಚಿಸಿದ್ದರು. ಈ ಪತ್ರವು ಪಾಕಿಸ್ತಾನದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಸಮನಾದುದು ಎಂದು ಇಮ್ರಾನ್ ವಿಶ್ಲೇಷಿಸಿದ್ದರು. ಪತ್ರದ ನೈಜತೆಯನ್ನು ಸೇನೆಯ ಉನ್ನತ ಅಧಿಕಾರಿಗಳು ಖಚಿತಪಡಿಸಿದ್ದಾರೆ ಎಂದು ಇಮ್ರಾನ್ ಹೇಳಿಕೆ ನೀಡಿದ್ದರು.

ಸರ್ಕಾರದ ಅಭಿಪ್ರಾಯವನ್ನು ಸೇನೆ ಅನುಮೋದಿಸಿದೆ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ಸೇನೆಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ. ಎನ್‌ಎಸ್‌ಸಿ ಸಭೆ ನಡೆದ ತಕ್ಷಣ ಮಾಧ್ಯಮಗಳಿಗೆ ಇಮ್ರಾನ್ ಹೇಳಿಕೆ ನೀಡಿದ್ದರು. ‘ಆದರೆ ಸಭೆಯಲ್ಲಿದ್ದ ಎಲ್ಲರೂ ಟಿಪ್ಪಣಿಗೆ ಸಹಿ ಹಾಕಿರಲಿಲ್ಲ. ಎನ್‌ಎಸ್‌ಸಿ ಸಭೆಯಲ್ಲಿದ್ದ ಎಲ್ಲರೂ ಸಹಿ ಹಾಕಿದರೆ ಮಾತ್ರ ಅದು ಅಧಿಕೃತ ದಾಖಲೆಯಾಗುತ್ತದೆ. ಅಂದರೆ, ಈ ಟಿಪ್ಪಣಿಗೆ ಸೇನೆಯ ಅಧಿಕಾರಿಗಳು ಸಹಿ ಹಾಕಿರಲಿಲ್ಲ ಎಂದು ಅರ್ಥ’ ಎಂಬುದಾಗಿ ಕೆಲವು ಮೂಲಗಳು ತಿಳಿಸಿವೆ.

‘ಪಾಕಿಸ್ತಾನ ಸರ್ಕಾರಕ್ಕೆ ಅಮೆರಿಕ ಯಾವುದೇ ಪತ್ರ ಬರೆದಿಲ್ಲ. ಅಮೆರಿಕಕ್ಕೆ ಪಾಕಿಸ್ತಾನದ ರಾಯಭಾರಿಯಾಗಿರುವ ಮಸೂದ್ ಖಾನ್ ಅವರು ಇದನ್ನು ಸ್ಪಷ್ಟಪಡಿಸಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಈಗ ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿದೆ ಎನ್ನಲಾಗಿರುವ ಅಮೆರಿಕದ ರಾಜತಾಂತ್ರಿಕ ಪತ್ರ ಹಾಗೂ ಅವಿಶ್ವಾಸ ನಿರ್ಣಯದ ನಡುವೆ ಯಾವುದೇ ನಂಟು ಇಲ್ಲ ಎಂದೂ ಸೇನೆ ಸ್ಪಷ್ಟಪಡಿಸಿದೆ ಎಂದು ತಿಳಿಸಿವೆ. ಪಾಕಿಸ್ತಾನಕ್ಕೆ ಯಾವುದೇ ಪತ್ರ ಕಳುಹಿಸಿಲ್ಲ ಎಂದು ಅಮೆರಿಕ ಸಹ ಸ್ಪಷ್ಟಪಡಿಸಿದೆ.

ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಮೊದಲ ಸುತ್ತಿನಲ್ಲೇ ಪ್ರಣಯ್ ಸವಾಲು ಅಂತ್ಯ

ಲಕ್ಷ್ಯ ಸೇನ್, ಮಾಳವಿಕಾ ಶುಭಾರಂಭ

ಸಂಚಿಯೊನ್, ಕೊರಿಯಾ (ಪಿಟಿಐ): ಜಿದ್ದಾಜಿದ್ದಿನ ಹೋರಾಟದಲ್ಲಿ ಗೆದ್ದ ಭಾರತದ ಲಕ್ಷ್ಯ ಸೇನ್ ಮತ್ತು ಮಾಳವಿಕಾ ಬಂಸೋಡ್ ಅವರು ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಲಕ್ಷ್ಯ 14-21, 21-16, 21-18ರಿಂದ ಸ್ಥಳೀಯ ಆಟಗಾರ ಚೊ ಜಿ ಹೂನ್ ಅವರ ಸವಾಲು ಮೀರಿದರು.

ಮೊದಲ ಗೇಮ್ ಸೋತರೂ ಛಲಬಿಡದೆ ಆಡಿದ ಲಕ್ಷ್ಯ ಅವರಿಗೆ ಗೆಲುವು ಒಲಿಯಿತು.

ಭಾರತದ ಆಟಗಾರನಿಗೆ ಮುಂದಿನ ಪಂದ್ಯದಲ್ಲಿ ಇಂಡೊನೇಷ್ಯಾದ ಹಿರೇನ್ ರುಸ್ತಾವಿಟೊ ಸವಾಲು ಎದುರಾಗಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ 20–22, 22–20, 21–10ರಿಂದ ಚೀನಾ ಆಟಗಾರ್ತಿ, ವಿಶ್ವ ರ‍್ಯಾಂಕಿಂಗ್‌ನಲ್ಲಿ 24ನೇ ಸ್ಥಾನದಲ್ಲಿರುವ ಹಾನ್ ಯು ಅವರನ್ನು ಮಣಿಸಿದರು.



ಮಾಳವಿಕಾ ಬಂಸೋಡ್– ಪಿಟಿಐ ಚಿತ್ರ

ಶ್ರೇಯಾಂಕರಹಿತ ಆಟಗಾರ್ತಿ ಮಾಳವಿಕಾ ಎರಡನೇ ಸುತ್ತಿನಲ್ಲಿ ಆರನೇ ಶ್ರೇಯಾಂಕದ, ಥಾಯ್ಲೆಂಡ್‌ನ ಪಾರ್ನ್‌ಪವಿ ಚೋಚುವಾಂಗ್ ಅವರನ್ನು ಎದುರಿಸುವರು.

ಪ್ರಣಯ್‌ಗೆ ನಿರಾಸೆ: ಸ್ವಿಸ್ ಓಪನ್ ಟೂರ್ನಿಯ ಫೈನಲ್ ತಲುಪಿದ್ದ ಎಚ್‌.ಎಸ್‌.ಪ್ರಣಯ್ ಅವರಿಗೆ ಮೊದಲ ಸುತ್ತಿನಲ್ಲೇ ನಿರಾಸೆ ಕಾಡಿತು. ಮಲೇಷ್ಯಾದ ಚೀಮ್ ಜೂನ್ ವೇ ಎದುರು ಕಣಕ್ಕಿಳಿದಿದ್ದ ಅವರು 17-21, 7-21ರಿಂದ ಸೋಲನುಭವಿಸಿದರು.



ಲಕ್ಷ್ಯ ಸೇನ್– ಎಎಫ್‌ಪಿ ಚಿತ್ರ

ಪುರುಷರ ಡಬಲ್ಸ್‌ನಲ್ಲಿ ಕೃಷ್ಣಪ್ರಸಾದ್ ಗರಗ ಮತ್ತು ವಿಷ್ಣುವರ್ಧನ ಗೌಡ್ ಪಂಜಾಲ ಜೋಡಿಯು 14-21 19-21ರಿಂದ ಇಂಡೊನೇಷ್ಯಾದ ಪ್ರಮುದ್ಯ ಕುಸುಮವರ್ದನ ಮತ್ತು ಯೆರೆಮಿಯಾ ಎರಿಚ್ ಯೊಚೆ ಯಾಕೂಬ್ ರಾಂಬಿತನ್ ಎದುರು ಎಡವಿತು. ಬೊಕ್ಕ ನವನೀತ್ ಮತ್ತು ಬಿ. ಸುಮೀತ್ ರೆಡ್ಡಿ ಕೂಡ ಮೊದಲ ತಡೆದ ದಾಟಲಿಲ್ಲ. ಈ ಜೋಡಿಯು 14–21, 19–21ರಿಂದ ಮಲೇಷ್ಯಾದ ಒಂಗ್ ಯಿವ್ ಸಿನ್ ಮತ್ತು ಟಿವ್ ಇ ಯಿ ಎದುರು ನಿರಾಸೆ ಅನುಭವಿಸಿತು.

ಫುಟ್‌ಬಾಲ್: ರಕ್ಷಿತ್ ಹ್ಯಾಟ್ರಿಕ್

ಬೆಂಗಳೂರು: ರಕ್ಷಿತ್ ರಾಜ್‌ಕುಮಾರ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಜಿಆರ್‌ಕೆ ಫುಟ್‌ಬಾಲ್ ಯೂತ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಪಂದ್ಯದಲ್ಲಿ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಜಿಆರ್‌ಕೆ 3–1ರಿಂದ ಕಮ್ಮನಹಳ್ಳಿ ಎಫ್‌ಸಿ ತಂಡವನ್ನು ಸೋಲಿಸಿತು. ರಕ್ಷಿತ್ 15, 38 ಮತ್ತು 56ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಎದುರಾಳಿ ತಂಡದ ಸಂತೋಷ್ ಜಿ. 23ನೇ ನಿಮಿಷದಲ್ಲಿ ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ವಿಕ್ಟೋರಿಯಾ ಎಫ್‌ಸಿ 2–1ರಿಂದ ಎಜಾನ್ ಎಫ್‌ಸಿ ಎದುರು, ಜೊಗೊ ಬೊನಿಟೊ ಸಾಕರ್ಸ್ 2–0ಯಿಂದ ಕ್ರಿಸ್ಟಲ್ ಎಫ್‌ಸಿ ತಂಡವನ್ನು ಸೋಲಿಸಿತು.

ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಪಂದ್ಯಗಳಲ್ಲಿ ಸದರ್ನ್ ಬ್ಲೂಸ್ 4–0ಯಿಂದ ಧರ್ಮರಾಜ ಯೂನಿಯನ್ ಎಫ್‌ಸಿ ಎದುರು, ಪಿಳ್ಳಣ್ಣ ಗಾರ್ಡನ್ ಎಫ್‌ಸಿ 1–0ಯಿಂದ ಸಿಟಿ ಕ್ಲಬ್ ವಿರುದ್ಧ, ಕೊಂಕಣ್ ಎಫ್‌ಸಿ 3–0ಯಿಂದ ಎಲ್‌ಆರ್‌ಡಿಇ ಎಫ್‌ಸಿ ವಿರುದ್ಧ ಜಯ ಸಾಧಿಸಿದವು.

ಸುದ್ದಿ 2 ನಿಮಿಷ

ಕ್ರಿಕೆಟ್: ಕರ್ನಾಟಕ ಮಹಿಳಾ ತಂಡಕ್ಕೆ ವೇದಾ ನಾಯಕಿ

ಬೆಂಗಳೂರು: ಅನುಭವಿ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರನ್ನು ಬಿಸಿಸಿಐ ಸೀನಿಯರ್ ಮಹಿಳಾ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡಕ್ಕೆ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ.

ಏಪ್ರಿಲ್ 18ರಿಂದ ರಾಜ್‌ಕೋಟ್‌ನಲ್ಲಿ ಟೂರ್ನಿ ನಡೆಯಲಿದೆ. ಕರ್ನಾಟಕ ತಂಡವನ್ನು ಕೆಎಸ್‌ಸಿಎ ಮಂಗಳವಾರ ಪ್ರಕಟಿಸಿದೆ. ಈ ಬಳಗಕ್ಕೆ ದಿವ್ಯಾ ಜ್ಞಾನಾನಂದ ಉಪನಾಯಕಿಯಾಗಿದ್ದಾರೆ.

ತಂಡ: ವೇದಾ ಕೃಷ್ಣಮೂರ್ತಿ (ನಾಯಕಿ), ದಿವ್ಯಾ ಜ್ಞಾನಾನಂದ (ಉಪನಾಯಕಿ), ಶುಭಾ ಸತೀಶ್, ರಕ್ಷಿತಾ ಕೃಷ್ಣಪ್ಪ, ಪಿ. ಸಲೋನಿ (ಮೂವರು ಮೈಸೂರು), ಪ್ರತ್ಯುಷಾ ಚೆಲ್ಲೂರ್, ಮೋನಿಕಾ ಪಟೇಲ್, ಆಕಾಂಕ್ಷಾ ಕೊಹ್ಲಿ, ರಾಮೇಶ್ವರಿ ಗಾಯಕವಾಡ, ಸಹನಾ ಪವಾರ್, ಸಂಜನಾ ಬತ್ನಿ (ವಿಕೆಟ್‌ಕೀಪರ್), ವಿ. ಚಂದು, ವೃಂದಾ ದಿನೇಶ್, ನಿಕಿ ಪ್ರಸಾದ್, ಅದಿತಿ ರಾಜೇಶ್ (ಶಿವಮೊಗ್ಗ), ಪ್ರತ್ಯೂಷಾ ಕುಮಾರ್ (ವಿಕೆಟ್‌ಕೀಪರ್), ಶಿಶಿರಾ ಗೌಡ (ಚಿಕ್ಕಮಗಳೂರು), ಶ್ರೇಯಾಂಕಾ ಪಾಟೀಲ, ಛಾಂದಸಿ ಕೃಷ್ಣಮೂರ್ತಿ, ರೋಷಿನಿ ಕಿರಣ್, ಮಮತಾ ಮಾಬೆನ್ (ಕೋಚ್), ರಚೆಲ್ ವಿನೋದ್ ಶೆಟ್ಟಿ (ಸಹಾಯಕ ಕೋಚ್/ ಮ್ಯಾನೇಜರ್), ಎನ್. ಸಿಂಧು (ಫಿಸಿಯೊ), ಬಿ. ಹಿತೈಷಿ (ಸ್ಟ್ರೆಂಥ್ –ಕಂಡಿಷನಿಂಗ್ ಕೋಚ್), ಮಾಲಾ ರಂಗಸ್ವಾಮಿ (ವಿಡಿಯೊ ಅನಾಲಿಸ್ಟ್).



ಹಾಕಿ: ರಾಜ್ಯ ತಂಡಕ್ಕೆ ಕುಶ ಸಾರಥ್ಯ

ಬೆಂಗಳೂರು: ರಾಷ್ಟ್ರೀಯ ಸೀನಿಯರ್ ಹಾಕಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡವನ್ನು ಜೆ.ಪಿ. ಕುಶ ಮುನ್ನಡೆಸಲಿದ್ದಾರೆ. ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಬುಧವಾರದಿಂದ ಇದೇ 17ರವರೆಗೆ ಚಾಂಪಿಯನ್‌ಷಿಪ್ ನಡೆಯಲಿದೆ.

ಕರ್ನಾಟಕ ತಂಡವು ಸಿ ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಆಂಧ್ರ ಮತ್ತು ಉತ್ತರಾಖಂಡ ತಂಡಗಳೂ ಇದೇ ಗುಂಪಿನಲ್ಲಿವೆ.

ತಂಡ: ಜೆ.ಪಿ. ಕುಶ (ನಾಯಕ), ಕೆ.ಪಿ. ಶರತ್ ಸೋಮಣ್ಣ, ಎಚ್‌.ಟಿ. ಸಂಜಯ್ (ಇಬ್ಬರೂ ಗೋಲ್‌ಕೀಪರ್‌ಗಳು), ಎಸ್‌.ಪಿ. ದೀಕ್ಷಿತ್, ಅನ್ವಾರ್ ಅಲಿ ಎಂ, ಎಂ.ಆರ್. ಮುತ್ತಣ್ಣ, ವೈ. ಎಂ. ಪ್ರಣಾಮ್ ಗೌಡ, ಬಿ.ಎಂ. ಲಿಖಿತ್, ಆರ್. ಪುನೀತ್, ಎಫ್. ಜೊರೆಮ್‌ಸಂಗಾ, ಬಿ.ಪಿ. ಸೋಮಣ್ಣ, ಎನ್. ಎಂ.ಸೂರ್ಯ, ಹರೀಶ್ ಮುತಗಾರ, ಯತೀಶಕುಮಾರ್ ಬಿ, ಎನ್‌.ಡಿ. ಚಿರಂತ್ ಸೋಮಣ್ಣ, ಐ.ಆರ್. ನಾಚಪ್ಪ, ಸಿ.ಎಸ್. ಶಮಂತ್, ಬಿ.ಎನ್. ಚೆಲ್ಸಿಯಾ ಮೇದಪ್ಪ. ಕೋಚ್‌ಗಳು: ಕೆ.ಕೆ. ಪೂಣಚ್ಚ ಮತ್ತು ಕೆ.ಸಿ. ಗಣಪತಿ, ಫಿಸಿಯೊ: ಡಿ. ಬಸವರಾಜ್ ರಾಯಪ್ಪ.

ಕರ್ನಾಟಕದ ಜಯದ ಓಟ

ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್: ಮಿಂಚಿದ ಶಶಾಂಕ್ ರೈ

ಚೆನ್ನೈ: ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸುತ್ತಿಗೆ ಪ್ರವೇಶಿಸಿದೆ.

ಮಂಗಳವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಶಶಾಂಕ್ ರೈ ಗಳಿಸಿದ 14 ಪಾಯಿಂಟ್ಸ್ ನೆರವಿನಿಂದ 69–44ರಿಂದ ರಾಜಸ್ಥಾನ ತಂಡವನ್ನು ಪರಾಭವಗೊಳಿಸಿತು. ರಾಜ್ಯ ತಂಡದ ಪರ ಪ್ರತ್ಯಾಂಶು ತೋಮರ್ 12, ಹರೀಶ್ ಮುತ್ತು ಮತ್ತು ಅಭಿಷೇಕ್ ಗೌಡ ತಲಾ 11 ಪಾಯಿಂಟ್ಸ್ ಗಳಿಸಿದರು.

ಈ ಜಯದೊಂದಿಗೆ ಕರ್ನಾಟಕ ತಂಡವು ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿತು. ಪುರುಷರ ವಿಭಾಗದಲ್ಲಿ ಪಂಜಾಬ್, ಸರ್ವಿಸಸ್, ತಮಿಳುನಾಡು, ಉತ್ತರಾಖಂಡ, ಹರಿಯಾಣ, ರೈಲ್ವೇಸ್ ತಂಡಗಳೂ ಎರಡನೇ ಸುತ್ತಿಗೆ ಕಾಲಿಟ್ಟವು.

ದಿನದ ಇನ್ನುಳಿದ ಪಂದ್ಯಗಳಲ್ಲಿ ಹರಿಯಾಣ 74–57ರಿಂದ ಪಶ್ಚಿಮ ಬಂಗಾಳ ಎದುರು, ಸರ್ವಿಸಸ್ 77–55ರಿಂದ ಉತ್ತರ ಪ್ರದೇಶ ಎದುರು, ಪಂಜಾಬ್ 96–58ರಿಂದ ತೆಲಂಗಾಣ ವಿರುದ್ಧ ಜಯ ಸಾಧಿಸಿದವು.



ರಾಜಸ್ಥಾನ ತಂಡದ ಎದುರು ಪಾಯಿಂಟ್ಸ್ ಗಳಿಸಲು ಯತ್ನಿಸಿದ ಕರ್ನಾಟಕದ ಶಶಾಂಕ್ ರೈ

ಮಹಿಳೆಯರ ವಿಭಾಗದಲ್ಲಿ ರೈಲ್ವೇಸ್ 120–66ರಿಂದ ದೆಹಲಿ ಎದುರು, ತೆಲಂಗಾಣ 54–37ರಿಂದ ಒಡಿಶಾ ಎದುರು ಜಯ ಗೆಲುವು ಸಾಧಿಸಿದವು.

ಥಾಯ್ಲೆಂಡ್ ಓಪನ್ ಬಾಕ್ಸಿಂಗ್: ಗೌರವ್‌ಗೆ ನಿರಾಸೆ

ಸೆಮಿಫೈನಲ್‌ಗೆ ಸುಮಿತ್

ನವದೆಹಲಿ (ಪಿಟಿಐ): ಭಾರತದ ಬಾಕ್ಸಿಂಗ್ ಪ್ರತಿಭೆ ಸುಮಿತ್, ಥಾಯ್ಲೆಂಡ್ ಓಪನ್ ಬಾಕ್ಸಿಂಗ್‌ನಲ್ಲಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸಿದ್ದಾರೆ.

ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಯ 75 ಕೆಜಿ ವಿಭಾಗದ ಎಂಟರ ಘಟ್ಟದ ಹಣಾಹಣಿಯಲ್ಲಿ ಸುಮಿತ್ 5–0ಯಿಂದ ಕಜಕಸ್ತಾನದ ತೈಮೂರ್ ನೂರ್‌ಸಿಟೊವ್ ಎದುರು ಗೆದ್ದರು.

ಭಾರತದ ಬಾಕ್ಸರ್‌ಗೆ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿತ್ತು. ಮೋನಿಕಾ (48 ಕೆಜಿ), ಆಶಿಶ್ ಕುಮಾರ್ (81 ಕೆಜಿ) ಮತ್ತು ಮನೀಷಾ (57 ಕೆಜಿ) ಈಗಾಗಲೇ ನಾಲ್ಕರ ಘಟ್ಟ ತಲುಪಿದ್ದಾರೆ.

91 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಗೌರವ್ ಚೌಹಾಣ ಎಂಟರ ಘಟ್ಟದಲ್ಲಿ ಮುಗ್ಗರಿಸಿದರು. ಅವರು 1–4ರಿಂದ 2018ರ ಯೂತ್ ಒಲಿಂಪಿಕ್ಸ್ ಚಾಂಪಿಯನ್ ಕಜಕಸ್ತಾನದ ಐಬೆಕ್ ಒರಲ್‌ಬೆ ಅವರ ಮುಂದೆ ಸೋತರು.

2019ರಲ್ಲಿ ನಡೆದ ಟೂರ್ನಿಯ ಕಳೆದ ಆವೃತ್ತಿಯಲ್ಲಿ ಭಾರತ ತಂಡದ ಎಂಟು ಮಂದಿ ಪದಕ ಗೆದ್ದುಕೊಂಡಿದ್ದರು. ಅದರಲ್ಲಿ ಒಂದು ಚಿನ್ನ, ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳು ಇದ್ದವು.



ಎದುರಾಳಿಗೆ ಪಂಚ್ ಮಾಡಿದ ಭಾರತದ ಸುಮಿತ್ (ಬಲ)– ಟ್ವಿಟರ್ ಚಿತ್ರ

ಕ್ರಿಕೆಟ್: ಕಿಶನ್ ಅರ್ಧಶತಕ

ಬೆಂಗಳೂರು: ಅರ್ಧಶತಕ ಗಳಿಸಿದ ಕಿಶನ್ ಬೆದರೆ ಮಂಗಳವಾರ ಆರಂಭವಾದ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ ತಂಡವು ಗೌರವಯುತ ಮೊತ್ತ ಗಳಿಸಲು ಕಾರಣರಾದರು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಆರಂಭವಾದ ಉತ್ತರಾಖಂಡದ ವಿರುದ್ಧದ ಪಂದ್ಯದಲ್ಲಿ ಕರ್ನಾಟಕವು 66 ಓವರ್‌ಗಳಲ್ಲಿ 246 ರನ್ ಗಳಿಸಿತು. ಉತ್ತರಾಖಂಡ್ ಹಿಮಾಂಶು ಭಟ್ ನಾಲ್ಕು ವಿಕೆಟ್ ಕಬಳಿಸಿ ಕರ್ನಾಟಕ ತಂಡಕ್ಕೆ ತಡೆಯೊಡ್ಡಿದರು. ಕಿಶನ್ ಬೆದರೆ (76; 114ಎಸೆತ, 4X10) ಮತ್ತು ಬಿ.ಆರ್. ಶರತ್ (45; 59ಎ, 4X8) ಕರ್ನಾಟಕ ತಂಡವು ಅಲ್ಪಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು.

ಸಂಕ್ಷಿಪ್ತ ಸ್ಕೋರು:ಮೊದಲ ಇನಿಂಗ್ಸ್: ಕರ್ನಾಟಕ: 66 ಓವರ್‌ಗಳಲ್ಲಿ 246 (ಬಿ.ಆರ್. ಶರತ್ 45, ಕಿಶನ್ ಬೆದರೆ 76, ವೈಶಾಖ ವಿಜಯಕುಮಾರ್ 36, ಹಿಮಾಂಶು ಭಟ್ 65ಕ್ಕೆ4, ಕಮಲ್ 48ಕ್ಕೆ2) ಉತ್ತರಾಖಂಡ: 25 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 48 (ವಿ. ಕಶ್ಯಪ್ ಔಟಾಗದೆ 34, ಎಸಿ ರೋಹಿತ್ ಕುಮಾರ್ 18ಕ್ಕೆ1, ಶುಭಾಂಗ್ ಹೆಗ್ಡೆ 6ಕ್ಕೆ1)

ರೇಸ್: ಅಖಿಲ್ ರವೀಂದ್ರ ಮಿಂಚು

ಬೆಂಗಳೂರು: ಭಾರತದ ಅಖಿಲ್ ರವೀಂದ್ರ ಅವರು ಯೂರೋಪಿಯನ್ ಜಿಟಿ4 ಚಾಂಪಿಯನ್‌ಷಿಪ್‌ನ ಎರಡು ವಿಭಾಗಗಳಲ್ಲಿ ಪೋಡಿಯಂ ಫಿನಿಶ್ ಮಾಡಿದ್ದಾರೆ.

ಆ್ಯಸ್ಟನ್ ಮಾರ್ಟಿನ್ ಡ್ರೈವರ್ ಅಕಾಡೆಮಿಯ ಚಾಲಕರಾಗಿರುವ ಬೆಂಗಳೂರಿನ ಅಖಿಲ್, ರೇಸಿಂಗ್ ಸ್ಪಿರಿಟ್ ಆಫ್ ಲೆಮನ್ ತಂಡದ ಸಹ ಚಾಲಕ ಟಾಮ್ ಕ್ಯಾನಿಂಗ್ ಜೊತೆಗೂಡಿ ಸಿಲ್ವರ್ ಕಪ್ ವಿಭಾಗದ ಎರಡು ರೇಸ್‌ಗಳಲ್ಲಿ (ರೇಸ್ 1 ಮತ್ತು ರೇಸ್ 2 ವಿಭಾಗಗಳಲ್ಲಿ) ಮೂರನೇ ಸ್ಥಾನ ಗಳಿಸಿದರು.



ಅಖಿಲ್ ರವೀಂದ್ರ

ತಾಂತ್ರಿಕ ನಿಯಮ ಉಲ್ಲಂಘಿಸಿದ್ದಕ್ಕಾಗಿ ಪಿ. ಚಾವೆಟ್ ಮತ್ತು ಜೆ. ಶಿಯರ್ ಅವರು ಅನರ್ಹಗೊಂಡರು.

ಹೀಗಾಗಿ ಅವರ ಸ್ಥಾನದಲ್ಲಿ ಅಖಿಲ್ ಮತ್ತು ಟಾಮ್ ಅವಕಾಶವನ್ನು ಗಳಿಸಿದ್ದರು.

ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿ

ಮುಮ್ತಾಜ್ ಹ್ಯಾಟ್ರಿಕ್: ಭಾರತ ತಂಡಕ್ಕೆ ಜಯ

ಪಾಚೆಸ್ಟ್ರಾಮ್ (ಪಿಟಿಐ): ಮುಮ್ತಾಜ್ ಖಾನ್ ಹ್ಯಾಟ್ರಿಕ್ ಗೋಲುಗಳ ಬಲದಿಂದ ಭಾರತ ತಂಡವು ಎಫ್‌ಐಎಚ್ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಜಯಿಸಿತು.

ಮಂಗಳವಾರ ನಡೆದ ಡಿ ಗುಂಪು ಹಂತದ ಪಂದ್ಯದಲ್ಲಿ ಭಾರತ 4–0ಯಿಂದ ಮಲೇಷ್ಯಾ ವಿರುದ್ಧ ಜಯಿಸಿತು. ಈ ಪಂದ್ಯದಲ್ಲಿ ಭಾರತವು ನಾಲ್ಕು ಫೀಲ್ಡ್ ಗೋಲುಗಳನ್ನು ಗಳಿಸಿದ್ದು ವಿಶೇಷ.

ಮುಮ್ತಾಜ್ (10, 26 ಮತ್ತು 59ನೇ ನಿಮಿಷ) ಮತ್ತು ಸಂಗೀತಾ ಕುಮಾರಿ (11ನೇ ನಿ) ಗೋಲು ಗಳಿಸಿದರು. ಇದರೊಂದಿಗೆ ಗುಂಪಿನಲ್ಲಿ 9 ಅಂಕ ಗಳಿಸಿ ಭಾರತ ತಂಡವು ಅಗ್ರಸ್ಥಾನ ಗಳಿಸಿತು.ಮಲೇಷ್ಯಾ ಎದುರಿನ ಪಂದ್ಯದಲ್ಲಿ ತಂಡವು ಪ್ರಥಮಾರ್ಧದ ವೇಳೆಗೆ 3–0 ಮುನ್ನಡೆ ಗಳಿಸಿತ್ತು. ಹತ್ತನೇ ನಿಮಿಷದಲ್ಲಿ ಮೊದಲ ಗೋಲು ಗಳಿಸಿದರು. ಒಂದು ನಿಮಿಷದ ನಂತರ ಸಂಗೀತಾ ಕುಮಾರಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಆದರೆ, ಈ ಸಂದರ್ಭದಲ್ಲಿ ಲಭಿಸಿದ್ದ ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸುವಲ್ಲಿ ಭಾರತ ತಂಡವು ವಿಫಲವಾಯಿತು. ಮಲೇಷ್ಯಾ ಗೋಲ್‌ಕೀಪರ್ ಎಬಿ ಮಷಿತಾ ಅವರ ಚುರುಕಿನ ಆಟದಿಂದಾಗಿ ಭಾರತ ತಂಡದ ಪ್ರಯತ್ನಗಳು ಕೈಗೂಡಲಿಲ್ಲ.

59ನ ನಿಮಿಷದಲ್ಲಿ ಭಾರತ ತಂಡಕ್ಕೆ ಮತ್ತೊಂದು ಗೋಲಿನ ಕಾಣಿಕೆ ನೀಡಿದ ಮುಮ್ತಾಜ್ ಸಂಭ್ರಮಿಸಿದರು.

ಭಾರತ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಸೆಣಸಲಿದೆ.

ರ‍್ಯಾಂಕಿಂಗ್: 4ನೇ ಸ್ಥಾನಕ್ಕೆ ಮಣಿಕಾ–ಅರ್ಚನಾ ಜೋಡಿ

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ಜೋಡಿ ಮಣಿಕಾ ಬಾತ್ರಾ ಮತ್ತು ಅರ್ಚನಾ ಕಾಮತ್ ಅವರು ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಷನ್ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಮಣಿಕಾ ಮತ್ತು ಬೆಂಗಳೂರು ಹುಡುಗಿ ಅರ್ಚನಾ ಜೋಡಿಯು 1501 ಅಂಕಗಳನ್ನು ಗಳಿಸಿದೆ. ಎರಡು ಸ್ಥಾನಗಳ ಬಡ್ತಿಯೊಂದಿಗೆ ಅಗ್ರ ಐದರೊಳಗೆ ಕಾಣಿಸಿಕೊಂಡಿದೆ. ದೋಹಾದಲ್ಲಿ ಈಚೆಗೆ ನಡೆದಿದ್ದ ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್‌ನಲ್ಲಿ ಮಣಿಕಾ–ಅರ್ಚನಾ ಜೋಡಿಯು ಕಂಚಿನ ಪದಕ ಗಳಿಸಿತ್ತು.

ಚೀನಾದ ವಾಂಗ್ ಮನ್ಯೂ ಮತ್ತು ಸುನ್ ಯಿಂಗ್‌ಶಾ 4289 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿದೆ. ಜಪಾನ್ ಜೋಡಿ ಮಿಮಾ ಇಟೊ ಮತ್ತು ಹಿನಾ ಹಯಾತಾ ಎರಡನೇ ಸ್ಥಾನದಲ್ಲಿದ್ದಾರೆ.

ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿ

ತಂಡಕ್ಕೆ ಮರಳಿದ ರಾಣಿ

ನವದೆಹಲಿ (ಪಿಟಿಐ): ಗಾಯದಿಂದ ಬಳಲುತ್ತಿದ್ದ ರಾಣಿ ರಾಂಪಾಲ್ ಚೇತರಿಸಿಕೊಂಡಿದ್ದು, ಭಾರತ ತಂಡಕ್ಕೆ ಮರಳಿದ್ದಾರೆ. ನೆದರ್ಲೆಂಡ್ಸ್ ಎದುರಿನ ಎಫ್‌ಐಎಚ್ ಪ್ರೊ ಲೀಗ್ ಪಂದ್ಯಗಳಿಗೆ ಮಹಿಳಾ ಹಾಕಿ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದ್ದು, ಸವಿತಾ ಪೂನಿಯಾ ನಾಯಕಿಯಾಗಿ ಮುಂದುವರಿಯಲಿದ್ದಾರೆ.

ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಇದೇ ಶುಕ್ರವಾರ ಮತ್ತು ಶನಿವಾರ ಪಂದ್ಯಗಳು ನಿಗದಿಯಾಗಿದ್ದು, ಮಿಡ್‌ಫೀಲ್ಡರ್ ಮಹಿಮಾ ಚೌಧರಿ ಮತ್ತು ಸ್ಟ್ರೈಕರ್ ಐಶ್ವರ್ಯ ರಾಜೇಶ್ ಚೌಹಾನ್ ಭಾರತ ತಂಡದಲ್ಲಿರುವ ಹೊಸಮುಖಗಳಾಗಿವೆ.

ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವು ರಾಣಿ ರಾಂಪಾಲ್ ಸಾರಥ್ಯದಲ್ಲಿ ಐತಿಹಾಸಿಕ ನಾಲ್ಕನೇ ಸ್ಥಾನ ಗಳಿಸಿತ್ತು. ಮಂಡಿರಜ್ಜು ಮತ್ತಿತರ ಗಾಯಗಳಿಂದಾಗಿ ರಾಣಿ ಅವರು ಒಲಿಂಪಿಕ್ಸ್ ಬಳಿಕ ಯಾವುದೇ ಪಂದ್ಯದಲ್ಲಿ ಆಡಿರಲಿಲ್ಲ. ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ದಕ್ಷಿಣ ಕೇಂದ್ರ ಬೆಂಗಳೂರಿನ ಶಿಬಿರದಲ್ಲಿದ್ದ ಅವರು ಈಗ ಫಿಟ್ ಆಗಿದ್ದು ತಂಡದ ಪರ ಆಡಲು ಸಜ್ಜಾಗಿದ್ದಾರೆ.

ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಇದುವರೆಗೆ ಆರು ಪಂದ್ಯಗಳನ್ನು ಆಡಿದ್ದು, 12 ಪಾಯಿಂಟ್ಸ್‌ನೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೆದರ್ಲೆಂಡ್ಸ್ ಪಾಯಿಂಟ್ಸ್ ಪಟ್ಟಿಯಲ್ಲೂ ಮೊದಲ ಸ್ಥಾನದಲ್ಲಿದೆ. ಆ ತಂಡದ ಬಳಿ ಸದ್ಯ 17 ಪಾಯಿಂಟ್‌ಗಳಿವೆ.



ಸವಿತಾ ಪೂನಿಯಾ


ತಂಡ ಇಂತಿದೆ: ಗೋಲ್‌ಕೀಪರ್ಸ್: ಸವಿತಾ (ನಾಯಕಿ), ರಜನಿ ಎತಿಮರ್ಪು.

ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ), ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ರಶ್ಮಿತಾ ಮಿಂಜ್, ಸುಮನ್ ದೇವಿ ತೌಡಮ್.

ಮಿಡ್‌ಫೀಲ್ಡರ್ಸ್: ನಿಶಾ, ಸುಶೀಲಾ ಚಾನು ಪುಖ್ರಂಬಮ್, ಜ್ಯೋತಿ, ನವಜೋತ್ ಕೌರ್, ಮೋನಿಕಾ, ನಮಿತಾ ಟೊಪ್ಪೊ, ಸೋನಿಕಾ, ನೇಹಾ, ಮಹಿಮಾ ಚೌಧರಿ.

ಫಾರ್ವರ್ಡ್ಸ್: ಐಶ್ವರ್ಯ ರಾಜೇಶ್ ಚವಾಣ್, ನವನೀತ್ ಕೌರ್, ರಾಜ್ವಿಂದರ್ ಕೌರ್, ರಾಣಿ ರಾಂಪಾಲ್, ಮರಿಯಾನಾ ಕುಜೂರ್.

ಕಾಯ್ದಿರಿಸಿದ ಆಟಗಾರ್ತಿಯರು: ಉಪಾಸನಾ ಸಿಂಗ್, ಪ್ರೀತಿ ದುಬೆ, ವಂದನಾ ಕಟಾರಿಯಾ.



ರಾಣಿ ರಾಂಪಾಲ್– ಪಿಟಿಐ ಚಿತ್ರ